# ಯುಗಶ್ರೀ

★ ಪಾಶ್ಚಾತ್ಯ ವಿಚಾರವಂತರು ಮತ್ತು ದೈವವಿಶ್ವಾಸ

★ ಕ್ರೈಸ್ತ ಮಿತ್ರರಿಗೊಂದು ಸುವಾರ್ತೆ

★ ಹಜ್ಜ್ ಕರ್ಮದ ಮಹತ್ವ

★ ಪಾಕಿಸ್ತಾನದಲ್ಲಿ ಕಿರಾತ ಆಡಳಿತೆ

★ ಜಿಯಾ ವಿಶೇಷಾಜ್ಞೆಗೆ ಪಾಕ್ ಧುರೀಣರ ಪ್ರತಿಭಟನೆ

ತ್ರೈಮಾಸಿಕ

ಅಕ್ಟೋಬರ್ 1984

ಬೆಲೆ: ರೂ. 1-00

ಅಲ್ಲಾಹನು ತಾನು ಇಚ್ಛಿಸುವವರನ್ನು ತನ್ನ ಪ್ರವಾದಿಯಾಗಿ ಆಯ್ದುಕೊಳ್ಳುತ್ತಾನೆ. ನೀವು ಅಲ್ಲಾಹನಲ್ಲೂ ಅವನ ಪ್ರವಾದಿಗಳಲ್ಲೂ ವಿಶ್ವಾಸವಿಡಿರಿ. ನೀವು ನಂಬಿಕೆಯಿಟ್ಟು ಭಕ್ತಿಮಾರ್ಗವನ್ನು ಅವಲಂಬಿಸುವ ಪಕ್ಷದಲ್ಲಿ ನಿಮಗೆ ಮಹತ್ತಾದ ಪ್ರತಿಫಲವಿದೆ.

—ಪವಿತ್ರ ಖುರ್‌ಆನ್ (3:180)

# ಯುಗರಶ್ಮಿ ತ್ರೈಮಾಸಿಕ

10-23-1008, ಅನ್ಸಾರಿ ರೋಡ್, ಬಂದರ್, ಮಂಗಳೂರು-575 001

ಬಿಡಿಪ್ರತಿ : ರೂ. 1-00 ವಾರ್ಷಿಕ ಚಂದಾ : ರೂ. 4-00

ಅಂಚೆ ಮೂಲಕ: ರೂ. 5-00


ವಿಷಯ ಸೂಚಿಕೆ ಪುಟ


* ಪ್ರಥಮ ದಶಕದ ಕೊನೆಯ ವರ್ಷದಲ್ಲಿ "ಯುಗರಶ್ಮಿ" ... 1
* ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು ... 2
* ಸತ್ಯದ ವಿರೋಧಿಗಳು ಜಯಿಸಲಾರರು ... 2
* ಪಾಶ್ಚಾತ್ಯ ವಿಚಾರವಂತರು ಮತ್ತು ದೈವವಿಶ್ವಾಸ ... 3
* ಕ್ರೈಸ್ತ ಮಿತ್ರರಿಗೊಂದು ಸುವಾರ್ತೆ .... 7
* ಹಜ್ಜ್ ಕರ್ಮದ ಮಹತ್ವ ... 13
* ಪಾಕಿಸ್ತಾನದಲ್ಲಿ ಕಿರಾತ ಆಡಳಿತೆ ... 16
* ಪಾಕ್ ಪೌರ ಹಕ್ಕು-ಜಿನ್ನಾ ಭಾಷಣ ... 25
* ಅಹ್ಮದಿಯಾ ವಿರುದ್ಧ ಜಿಯಾ ವಿಶೇಷಾಜ್ಞೆಗೆ ಪಾಕ್ ಧುರೀಣರ ಪ್ರತಿಭಟನೆ 27
* ಅಹ್ಮದಿಯಾ ವಾರ್ತೆಗಳು ... 29
* ಚುಟುಕು - ಚೂರು ... 30



## FREE ENGLISH LITERATURE

1 The Contribution of Islam to the Solution of World Problems.
2 Islam The Need of the Hour.
3 Islam and Communism.
4. Mohammad the Liberator of Women.
5. The Last Message of the Prince of Peace.

Apply with 15 Paise Stamp for each book to:

BOOK SECRETARY, AHMADIYYA MUSLIM MISSION,
10-23-1008, ANSARI ROAD, MANGALORE-575 001.

بسم الله الرحمن الرحيم

نحمده ونصلي على رسوله الكريم

# ಯುಗರಶ್ಮಿ

ಸಂಪಾದಕ: ಮುಹಮ್ಮದ್ ಯೂಸುಫ್

ಸಂಪುಟ: 10 | ಆಗಸ್ಟ್-ಅಕ್ಟೋಬರ್ 1984 / ಝುಹೂರ್-ಇಖಾ 1363 | ಸಂಚಿಕೆ: 1

## ಪ್ರಥಮ ದಶಕದ ಕೊನೆಯ ವರ್ಷದಲ್ಲಿ "ಯುಗರಶ್ಮಿ"

ಈ ಸಂಚಿಕೆಯ ಮೂಲಕ "ಯುಗರಶ್ಮಿ" ತನ್ನ ಹತ್ತನೆಯ ವರ್ಷಕ್ಕೆ ಪಾದಾರ್ಪಣೆ ಮಾಡಿರುತ್ತದೆ. ಸರ್ವಶಕ್ತನಾದ ಅಲ್ಲಾಹನಿಗೆ ಅನೇಕಾನೇಕ ನಮನಗಳು. ಓದುಗರಿಗೂ ಹಿತೈಷಿಗಳಿಗೂ ಶುಭಾಶಯಗಳು.

ಹತ್ತು ವರ್ಷಗಳ ಬಳಿಕ ಮಗದೊಮ್ಮೆ ಪಾಕಿಸ್ತಾನದ ಅಹ್ಮದೀಯರು ಇನ್ನೊಂದು ಅಗ್ನಿಪರೀಕ್ಷೆಗೆ ತುತ್ತಾಗಿದ್ದಾರೆ. 1974ರಲ್ಲಿ ಭುಟ್ಟೋ ಆಳ್ವಿಕೆ ಸಾಂವಿಧಾನಿಕ ತಿದ್ದುಪಡಿಯೊಂದರ ಮೂಲಕ ಅಹ್ಮದೀಯರನ್ನು ಅಮುಸ್ಲಿಂ ಅಲ್ಪಸಂಖ್ಯಾಕರೆಂದು ಘೋಷಿಸಿತು. ಆದರೆ ಆ ಆಡಳಿತೆ ದೀರ್ಘಕಾಲ ಬಾಕಿಯುಳಿಯಲಿಲ್ಲ. ಮಿ। ಭುಟ್ಟೋ ದಯನೀಯ ಮರಣ ದಂಡನೆಗೆ ಗುರಿಯಾದರು. ಅವರ ಕುಟುಂಬ ದುಸ್ಥಿತಿಗೆ ಈಡಾಗಿದೆ. ಪಾಕಿಸ್ತಾನದ ಈಗಿನ ಲಷ್ಕರಿ ಆಡಳಿತಾಧಿಕಾರಿ ಜನರಲ್ ಜಿಯಾಉಲ್ ಹಕ್ ಅಹ್ಮದೀಯರ ವಿರುದ್ಧ ಕಳೆದ ಎಪ್ರಿಲ್ 26ರಂದು ಒಂದು ಆರ್ಡಿನನ್ಸ್ ಹೊರಡಿಸಿದ್ದಾರೆ. ಆ ವಿಶೇಷಾಜ್ಞೆಯ ಪ್ರಕಾರ ಯಾವನೇ ಅಹ್ಮದಿ ತಾನು ಮುಸ್ಲಿಮನೆಂದು ಯಾವುದೇ ರೀತಿಯಲ್ಲಿ ತೋರ್ಪಡಿಸಿಕೊಳ್ಳಬಾರದು. ಅಹ್ಮದೀಯರ ಮಸೀದಿಯನ್ನು "ಮಸ್ಜಿದ್" ಎಂದು ಹೆಸರಿಸಬಾರದು. ಅವರು ನಮಾಝಿಗೆ ಕರೆ (ಅಝಾನ್) ಕೊಡಬಾರದು; ಇಸ್ಲಾಮೀ ಪಾರಿಭಾಷಿಕ ಪದಗಳನ್ನು ಪ್ರಯೋಗಿಸಬಾರದು. ಇದಕ್ಕೆ ತಪ್ಪಿದರೆ ಮೂರು ವರ್ಷಗಳ ಸೆರೆಮನೆ ವಾಸ ಮತ್ತು ಜುಲ್ಮಾನೆಯಿಂದ ದಂಡಿಸಲಾಗುವುದು.

ಈ ಪೈಶಾಚಿಕ ವಿಶೇಷಾಜ್ಞೆಯು ಪವಿತ್ರ ಖುರ್‌ಆನಿನ ಅಧ್ಯಾಪನಗಳಿಗೂ ಮುಹಮ್ಮದ್ ಪೈಗಂಬರ್ (ಸ)ರವರ ಹೇಳಿಕೆಗಳಿಗೂ ವಿರುದ್ಧವಾಗಿದೆ. ಈ ಆಜ್ಞೆಯು ಮಾನವ ಮೂಲಭೂತ ಹಕ್ಕನ್ನು ಕಸಿಯುವಂಥದ್ದಾಗಿದೆ.

ಅಹ್ಮದೀಯರು ನಿಷ್ಠಾವಂತ ಮುಸ್ಲಿಮರಾಗಿದ್ದಾರೆ. ಮುಸ್ಲಿಮನಾಗಿರುವ ಓರ್ವನನ್ನು ಯಾವೊಬ್ಬನಾದರೂ ಮುಸ್ಲಿಂ ಅಲ್ಲ ಎಂದು ಹೇಳಿದರೆ, ಆ ಹೇಳಿದಾತನೇ ಅಮುಸ್ಲಿಮನಾಗುತ್ತಾನೆಂದು ಪ್ರವಾದಿ ಮುಹಮ್ಮದ್ ಮುಸ್ತಫಾ(ಸ) ನುಡಿದಿದ್ದಾರೆ. ಹಾಗಿರುವಾಗ, ಜಿಯಾಉಲ್ ಹಕ್ ಮತ್ತು ಸಹವರ್ತಿಗಳ ಸ್ಥಾನವೇನೆಂದು ಗ್ರಹಿಸಬಹುದು.

ಅಹ್ಮದಿಯಾ ಜಮಾಅತಿನ ಆರಂಭದಿಂದಲೇ ಅದು ಅನೇಕ ಅಗ್ನಿಪರೀಕ್ಷೆಗಳಿಗೆ ಈಡಾಗಿದೆ. ಪ್ರತಿಯೊಂದು ಸಂದಿಗ್ಧ ಘಟ್ಟದ ಬಳಿಕ ಅದು ಅಭಿವೃದ್ಧಿಯನ್ನು ಗಳಿಸಿದೆ. ಪಾಕಿಸ್ತಾನದ ಈಗಿನ ಪರಿಸ್ಥಿತಿಯ ಪರಿಹಾರಕ್ಕಾಗಿ, ಅಹ್ಮದಿಯಾ ಖಲೀಫರ ಆದೇಶದಂತೆ ಅಹ್ಮದೀಯರೆಲ್ಲರೂ ಸರ್ವಾಧಿನಾಥನಾದ ಅಲ್ಲಾಹನಿಗೆ ಸಾಷ್ಟಾಂಗವೆರಗಿ ಮೊರೆಯಿಡುತ್ತಿದ್ದಾರೆ. ಸರ್ವಶಕ್ತನಾದ ಅಲ್ಲಾಹನಲ್ಲಿ ಪೂರ್ಣ ಭರವಸೆಯನ್ನಿಟ್ಟಿರುವ ಅವರಿಗೆ, ಪಾಕಿಸ್ತಾನದಲ್ಲಿ ಶೀಘ್ರವೇ ಒಂದು ಬದಲಾವಣೆ ಖಂಡಿತವಾಗಿಯೂ ಉಂಟಾದೀತೆಂಬುದರಲ್ಲಿ ಸಂಶಯವಿಲ್ಲ. ಕಣ್ಣಿದ್ದವರಿಗೆ ದೈವಲೀಲೆಯನ್ನು ಕಾಣಬಹುದು. -ಸಂಪಾದಕ.

# ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು

1. ತನ್ನ ಆವಶ್ಯಕತೆಗಳಿಗಾಗಿ ದೇವರೊಡನೆ ದೈನ್ಯ ದಿಂದ ಯಾಚಿಸದವನು ಅವನನ್ನು ಅಸಂತೋಷಪಡಿಸು ತ್ತಾನೆ.

2. ಅಲ್ಪಮಾತ್ರವಾದರೂ ಸರಿ, ಸತತವಾಗಿ ಮಾಡುವ ಸತ್ಕರ್ಮವನ್ನು ಅಲ್ಲಾಹನು ಅತ್ಯಂತ ಇಷ್ಟ ಪಡುತ್ತಾನೆ.

3. ದೇವರೊಡನೆ ಕ್ಷಮೆಯನ್ನೂ ರಕ್ಷೆಯನ್ನೂ ಯಾಚಿಸಿರಿ. ಏಕೆಂದರೆ ಸತ್ಯ ವಿಶ್ವಾಸದ ನಂತರ ರಕ್ಷೆಗಿಂತ ಮಿಗಿಲಾದುದನ್ನು ಯಾರಿಗೂ ನೀಡಲಾಗಿಲ್ಲ.

4. ವಿಷಮಾವಸ್ಥೆಯಲ್ಲೂ ಸಂಕಷ್ಟ ಕಾಲದಲ್ಲೂ ಅಲ್ಲಾಹನು ತನ್ನ ಪ್ರಾರ್ಥನೆಗಳನ್ನು ಸ್ವೀಕರಿಸಬೇಕೆಂದು ಬಯಸುವವನು ಸುಖಾರಾಮದಲ್ಲಿರುವಾಗ ಸತತವಾಗಿ ಪ್ರಾರ್ಥಿಸಲಿ.

5. ನಿಮಗೆ ಬೇಕಾದುದನ್ನೆಲ್ಲ ದೇವರೊಡನೆ ಬೇಡಿರಿ; ಉಪ್ಪಾದರೂ ಬೂಟಿನ ದಾರವಾದರೂ ಸರಿ.

(ಸರ್ ಮುಹಮ್ಮದ್ ಝಫ್ರುಲ್ಲಾ ಖಾನ್ ಬರೆದ **Wisdom of Holy Prophet** ಎಂಬ ಪುಸ್ತಕದಿಂದ ಆಯ್ದುದು.)

---

# ಸತ್ಯದ ವಿರೋಧಿಗಳು ಜಯಿಸಲಾರರು

ಮುಂಚೆ ಎಂದಾದರೂ ಸತ್ಯದ ವೈರಿಗಳಿಗೆ ಇಂತಹ ಕುಕೃತ್ಯಗಳಿಂದ ವಿಜಯ ಲಭಿಸಿದ್ದರೆ ಈ ಜನರೂ ವಿಜಯಿಗಳಾಗ ಬಹುದಿತ್ತು. ಆದರೆ, ದೇವರಿಗೆ ವಿರೋಧವಾಗಿ ಪ್ರವರ್ತಿಸುತ್ತಾ ಅವನು ಇಚ್ಛಿಸಿದುದನ್ನು ವಿರೋಧಿಸುವವರು ಯಾವಾ ಗಲೂ ಅಪಮಾನಕ್ಕೂ ಸೋಲಿಗೂ ತುತ್ತಾಗುತ್ತಾರೆಂಬುದು ಸ್ಥಾಪಿತವಾದೊಂದು ಪರಮಾರ್ಥವಾದಾದರೆ, ಅಪಜಯ ಮತ್ತು ಅಪಮಾನದ ಕಾಲ ಇವರಿಗೆ ಸಹ ಬಂದೊದಗುವುದು ಖಂಡಿತ. ದೇವವಚನ ಮೊದಲೆಂದೂ ಹುಸಿಯಾಗಲಿಲ್ಲ; ಎಂದಿಗೂ ಹುಸಿಯಾಗದು. ತಾನು ಮತ್ತು ತನ್ನ ಪ್ರವಾದಿಗಳು ಸದಾ ಜಯಿಸುವೆವೆಂದು ಅಲ್ಲಾಹನು ಮೊದಲೇ ವಿಧಿಸಿ ಅವನು ಅದನ್ನೊಂದು ನಿಯಮವನ್ನಾಗಿ ಮಾಡಿದ್ದಾನೆಂದು ಪವಿತ್ರ ಖುರ್‌ಆನ್ ಹೇಳುತ್ತದೆ........ಆದ್ದರಿಂದ ಪ್ರವಾದಿ ಆದಂ (ಅ)ರವರ ಕಾಲದಿಂದ ಪ್ರವಾದಿ ಮುಹಮ್ಮದ್ (ಸ)ರವರ ಕಾಲದ ವರೆಗೆ ಪ್ರಸ್ತುತ ನಿಯಮ ಸತ್ಯವಾಗಿ ಪರಿಣಮಿಸಿ ದಂತೆಯೇ ಅದು ನನ್ನ ವಿಚಾರದಲ್ಲೂ ಈಡೇರುವುದೆಂದು ನಾನಿದೋ ಸಾರುತ್ತೇನೆ. (ನುಜೂಲುಲ್ ಮಸೀಹ್)

—ಹಝ್ರತ್ ಅಹ್ಮದ್
ಅಹ್ಮದಿಯಾ ಜಮಾಅತಿನ ಸ್ಥಾಪಕರು

# ಪಾಶ್ಚಾತ್ಯ ವಿಚಾರವಂತರು ಮತ್ತು ದೈವವಿಶ್ವಾಸ

★ ಮಿರ್ಝಾ ಬಶೀರ್ ಅಹ್ಮದ್ ಎಂ. ಎ.

(ಕಳೆದ ಸಂಚಿಕೆಯಿಂದ ಮುಂದುವರಿದುದು)

ನಾವಿಲ್ಲಿ ಈ ಒಂದು ವಿಷಯವನ್ನು ಸಹ ನೆನಪಿಡಬೇಕಾಗಿದೆ. ದೇವನು ಇದ್ದಾನೋ ಇಲ್ಲವೋ ಎಂಬ ಪ್ರಶ್ನೆ ಯಥಾರ್ಥದಲ್ಲಿ ವಿಜ್ಞಾನದ ಅನ್ವೇಷಣಾ ಪರಿಧಿಯಿಂದ ಹೊರಗಿನದು. ಒಬ್ಬ ವಿಜ್ಞಾನಿ ತನ್ನ ವೃತ್ತದೊಳಗೆ ನಿಂತುಕೊಂಡು ಈ ವಿವಾದ ತೊಡಗಲಿಕ್ಕೆ ಅಶಕ್ತನು. ಏಕೆಂದರೆ ವಿಜ್ಞಾನವೆಂದರೆ ಭೌತಿಕ ವಸ್ತುಗಳ ಸ್ವಭಾವಗಳನ್ನೂ ತತ್ವಗಳನ್ನೂ ಅನ್ವೇಷಿಸುವ ವಿದ್ಯೆಯಾಗಿದೆ. ಭೌತಾತೀತ ವಸ್ತುಗಳಿಗೆ ಸಂಬಂಧಿಸಿದ ಅಥವಾ ಅಧ್ಯಾತ್ಮ ಶಾಸ್ತ್ರಕ್ಕೆ (Metaphysics) ಸಂಬಂಧಿಸಿದ ಪರಿಶೋಧನೆ ಇಂದಿನ ವಿಜ್ಞಾನದ ವೃತ್ತದೊಳಗೆ ಸೇರಿದ್ದಲ್ಲ. ಮಾತ್ರವಲ್ಲ, ಯಾವುದೇ ವಸ್ತುವಿನ ಇಲ್ಲದಿರುವಿಕೆಯ ಬಗ್ಗೆ ಸಾಮಾನ್ಯವಾಗಿ ವಿಜ್ಞಾನಕ್ಕೆ ಸಂಬಂಧವಿಲ್ಲ. ಯಾವ ವಸ್ತು ಉಂಟು? ಆ ವಸ್ತು ಏನು? ಅದು ಯಾವ ನಿಯಮಕ್ಕೆ ಅಧೀನ? ಎಂಬೀ ವಿಚಾರದಲ್ಲಿ ವಿಜ್ಞಾನಕ್ಕೆ ಹೆಚ್ಚಿನ ಸಂಬಂಧವಿದೆ. ಒಟ್ಟಾರೆ, "ದೈವ ಇಲ್ಲ" ಎಂಬ ವಿಚಾರ ಕನಿಷ್ಟ ಪಕ್ಷ ಇಂದಿನ ವಿಜ್ಞಾನದ ಪರಿಶೋಧನಾ ವೃತ್ತದಿಂದ ಹೊರಗಿನದು. ಆದರೆ ಈ ಪ್ರಪಂಚ ಮತ್ತು ಅದರಲ್ಲಿರುವ ವಸ್ತುಗಳು ಹೇಗುಂಟಾದುವು ? ಜೀವಿತದ ಆರಂಭ ಯಾವ ವಿಧದಲ್ಲಾಯಿತು? ಇತ್ಯಾದಿ ಪ್ರಶ್ನೆಗಳು ವಿಜ್ಞಾನದ ಅನ್ವೇಷಣಾ ವಲಯದಲ್ಲಿ ಸೇರುತ್ತವೆ. ಒಟ್ಟಿನಲ್ಲಿ, ವಿಜ್ಞಾನಿಗಳು ಹೆಚ್ಚೆಂದರೆ ಹೀಗೆ ವಾದಿಸಲು ಶಕ್ತರು: "ಲೋಕ ಸದಾ ನೆಲೆಗೊಳ್ಳುತ್ತಾ ಬಂದಿದೆಯೆಂದೂ ಈ ಲೋಕ ವ್ಯವಸ್ಥೆ ಒಂದು ನಿಯಮ ಪರಂಪರೆಗೆ ಅಧೀನವಾಗಿ ತನ್ನಿಂತಾನೇ ನಡೆಯುತ್ತಿದೆಯೆಂದೂ ಜೀವಿತದ ಆರಂಭ ಸಹ ತನ್ನಷಕ್ಕೇ ಉಂಟಾಯಿತೆಂದೂ ನಾವು ಕಂಡು ಹಿಡಿದಿರುವೆವು." ಈ ಅನ್ವೇಷಣದಿಂದ ದೈವ ಇಲ್ಲವೆಂದು ಅನುಮಾನಿಕವಾಗಿ ಅವರು ಹೇಳಬಲ್ಲರು. ಆದರೆ ದೈವ ನಾಸ್ತಿತ್ವ ನೇರವಾಗಿ ವಿಜ್ಞಾನದ ಅನ್ವೇಷಣ ಪರಿಧಿಯಲ್ಲಿ ಒಳಗೊಳ್ಳುವುದಿಲ್ಲ.

ಇದಲ್ಲದೆ ಇನ್ನೊಂದು ಸಂಗತಿ ಸಹ ನೆನಪಿಡಬೇಕಾಗಿದೆ. ದೌರ್ಭಾಗ್ಯವಶಾತ್ ಸಾಮಾನ್ಯವಾಗಿ ಜನರು ವಿಜ್ಞಾನದ ಕುರಿತು ಅಪಾಯಕರವಾದೊಂದು ತಪ್ಪು ಕಲ್ಪನೆಯನ್ನು ಹೊಂದಿದ್ದಾರೆ. ಅವರು ವಿಜ್ಞಾನಿಗಳ ಊಹೆಗಳು ಮತ್ತು ವಿಜ್ಞಾನದಿಂದ ಸಾಬೀತುಪಡಿಸಲ್ಪಟ್ಟ ಸತ್ಯಗಳ ಮಧ್ಯೆ ವ್ಯತ್ಯಾಸವನ್ನು ತಿಳಿಯುವುದಿಲ್ಲ. ವಿಜ್ಞಾನಿಗಳ ಪರಿಶೋಧನಾ ಫಲ ಮೂರು ರೀತಿಯಲ್ಲಿವೆ: 1) ವಿಜ್ಞಾನಿಗಳ ಕಲ್ಪನೆ. 2) ವಿಜ್ಞಾನದ ಅಪೂರ್ಣವಾದ ಸಂಶೋಧನೆ. 3) ವಿಜ್ಞಾನದಿಂದ ಸಾಬೀತಾಗೊಂಡ ಸತ್ಯ.

ಇವು ಮೂರೂ ವ್ಯತ್ಯಸ್ತ ತರದಲ್ಲೂ ವಿಭಿನ್ನ ದರ್ಜೆಯಲ್ಲೂ ಇವೆ. ಅವನ್ನೆಲ್ಲಾ ತುಲ್ಯವಾದ ತೂಕದಲ್ಲಿ ಪರಿಗಣಿಸುವುದು ಅಪಾಯಕರ ಪ್ರವಾದವಾಗಿದೆ. ಆದರೆ ತಿಳುವಳಿಕೆಯಿಲ್ಲದ ಜನರು ಅವುಗಳಿಗೆಲ್ಲಾ ಒಂದೇ ಸ್ಥಾನವನ್ನು ಕೊಡುತ್ತಾರೆ. ವಿಜ್ಞಾನಿಗಳ ಬಾಯಿಯಿಂದ ಹೊರಡುವ ಎಲ್ಲಾ ಅಭಿಪ್ರಾಯಗಳನ್ನು, ಅವು ಅಪೂರ್ಣ ಅನುಭವಗಳೂ ಪರಿಶೀಲನಗಳೂ ಆಗಿದ್ದರೂ ಸರಿ, ವಿಜ್ಞಾನದಿಂದ ಸಮರ್ಥಿಸಲ್ಪಟ್ಟ ಸತ್ಯವೆಂದು ಅಂಗೀಕರಿಸುತ್ತಾರೆ. ಹಾಗೆ ಸತ್ಯಮಾರ್ಗವನ್ನು ಸ್ವೀಕರಿಸುವ ಬದಲು ಅಜ್ಞಾನದಿಂದ ವಿಜ್ಞಾನಿಗಳ ಅಂಧಾನುಕರಣೆಯ ನೊಗವನ್ನು ತಮ್ಮ ಹೆಗಲ ಮೇಲೆ ಹೇರಿಕೊಳ್ಳುತ್ತಾರೆ. ಆದರೆ ಸಾಮಾನ್ಯ ಜ್ಞಾನವಿರುವವರಿಗೆ ತಿಳಿದಿರುತ್ತದೆ—ವಿವಿಧ ವಿಜ್ಞಾನಿಗಳ ಪರಿಶೋಧನೆಯ ಫಲವಾಗಿ ಸೂರ್ಯ ಪ್ರಕಾಶದಂತೆ ಸ್ಪಷ್ಟವಾದ ಮತ್ತು ಸ್ಪಷ್ಟವಾಗುತ್ತಿರುವ ಹಾಗೂ ಕಾರ್ಯಕಾರಣ ಸಂಬಂಧದಲ್ಲಿ ಖಂಡಿತವಾಗಿ ಋಜುವಾತಾದ ವಿಚಾರಗಳು ಮಾತ್ರವೇ ವಿಜ್ಞಾನದಿಂದ

ಸ್ಥಾಪಿಸಲ್ಪಟ್ಟ ಸತ್ಯವೆಂದು ಪರಿಗಣಿಸಲು ಅರ್ಹವೆಂದು. ಅದಕ್ಕೆ ಹೊರತಾದ ವೈಜ್ಞಾನಿಕ ಊಹೆಗಳೂ ತತ್ವಗಳೂ ವಿಜ್ಞಾನಿಗಳ ಅಪೂರ್ಣ ಅನುಭವಗಳಾಗಿವೆ. ಅವುಗಳನ್ನು ಸ್ಥಾಪಿತ ಸತ್ಯವೆಂದು ಹೇಳಬಾರದು. ಇತರ ಜ್ಞಾನಿಗಳ ಮತ್ತು ಬುದ್ಧಿಶಾಲಿಗಳ ವಿಚಾರಗಳಂತೆಯೇ ಆ ವಿಚಾರಗಳು ಸಹ ತಪ್ಪಾಗಲಿಕ್ಕೆ ಧಾರಾಳ ಸಾಧ್ಯತೆಗಳಿವೆ. ಯಥಾರ್ಥವೇನೆಂದರೆ ಯಾವುದಾದರೊಂದು ಹೊಸ ವಿಚಾರ ವೈಜ್ಞಾನಿಕ ಸಂಶೋಧನೆಯಿಂದ ಕಂಡುಹಿಡಿಯಲ್ಪಟ್ಟು ಬೇರೆ ಬೇರೆ ಜನರು ವಿವಿಧ ಕಾಲಗಳಲ್ಲಿ ನಡೆಸುವ ಪರಿಶೋಧನೆಗಳಿಂದ ಅದು ದೃಢೀಕರಿಸಲ್ಪಟ್ಟು ವೈಜ್ಞಾನಿಕವಾಗಿ ಅದರ ಯಾವ ಅಂಶದಲ್ಲೂ ಅಸ್ಪಷ್ಟತೆ ಇಲ್ಲವೆಂದಾದರೆ ಮಾತ್ರ ಅದೊಂದು ಸ್ಥಾಪಿತ ಸತ್ಯವೆಂದು ಗಣಿಸಲ್ಪಡುತ್ತದೆ. ಈ ಹಂತಕ್ಕಿಂತ ಮೊದಲು, ವಿಜ್ಞಾನಿಗಳ ಕೆಲವು ಸಂಶೋಧನೆಗಳು ಅದರ ಮೇಲೆ ಬೆಳಕು ಬೀರುವುದಾದರೆ ಅಥವಾ ಕೆಲವು ವಿಜ್ಞಾನಿಗಳು ಅದನ್ನು ಅಂಗೀಕರಿಸುವುದಾದರೂ ಸಹ ಅದೊಂದು ಸ್ಥಾಪಿತ ಸತ್ಯವೆಂದು ಹೇಳಲು ಸಾಧ್ಯವಿಲ್ಲ. ಆದರೆ ನಿರ್ಭಾಗ್ಯವಶಾತ್ ಜನಸಾಮಾನ್ಯರು ಇವೆರಡರ ವ್ಯತ್ಯಾಸವನ್ನು ತಿಳಿಯುವುದಿಲ್ಲ. ಎಲ್ಲವೂ ವಿಜ್ಞಾನದಿಂದ ಸ್ಥಾಪಿಸಲ್ಪಟ್ಟ ಸತ್ಯವೆಂದು ತಿಳಿದು ಅದರ ಮುಂದೆ ತಲೆಬಾಗುತ್ತಾರೆ. ವೈಜ್ಞಾನಿಕ ಪರಿಶೋಧನೆಯ ಆಧಾರದಲ್ಲಿ ವಿಜ್ಞಾನಿಗಳು ಹೊಂದುವ ಅಭಿಪ್ರಾಯಗಳೂ ರೂಪೀಕರಿಸುವ ಸಿದ್ಧಾಂತಗಳೂ ಸಹ ವಿಜ್ಞಾನದ ಯಾಥಾರ್ಥ್ಯಗಳೆಂದು ಗಣಿಸಲ್ಪಡುತ್ತವೆ ಎಂಬುದು ಅದಕ್ಕಿಂತಲೂ ಅವಿಚಾರಕವಾಗಿದೆ. ಅಂದರೆ, ಅನ್ಯೋನ್ಯ ವ್ಯತ್ಯಸ್ತಗೊಂಡಿರುವ ಮೂರು ವಿಚಾರಗಳನ್ನೂ ಮಿಶ್ರ ಮಾಡಿಬಿಡುತ್ತಾರೆ. ಅದರ ಪರಿಣಾಮವಾಗಿ ಮನುಷ್ಯರಾಶಿಯ ಮಸ್ತಿಷ್ಕಕ್ಕೆ ಪ್ರಕಾಶವನ್ನು ನೀಡಬೇಕಾದ ವಿಜ್ಞಾನವು ಕೆಲವೊಮ್ಮೆ ಅಜ್ಞತೆಗೂ ಅಂಧಕಾರಕ್ಕೂ ಹೇತುವಾಗುತ್ತದೆ.

ಯಾವುದಾದರೊಂದು ವಿಚಾರ ವೈಜ್ಞಾನಿಕ ಅನ್ವೇಷಣ-ಪರಿಶೀಲನಗಳಿಂದ ಸಾಬೀತುಗೊಳ್ಳಲು ತೊಡಗುವಾಗ ಅದರ ಆಧಾರದಲ್ಲಿ ಅಭಿಜ್ಞ ಜನರೆಡೆಯಲ್ಲಿ ಒಂದು ಚಲನೆಯುಂಟಾಗುವುದು ಸ್ವಾಭಾವಿಕ. ಬೇರೆ ಬೇರೆ ವಿಜ್ಞಾನಿಗಳು ಆ ಹೊಸ ಸಂಶೋಧನೆಯ ಪ್ರಕಾಶದಲ್ಲಿ ವಿಧ ವಿಧ ಅಭಿಪ್ರಾಯಗಳನ್ನೂ ಸಿದ್ಧಾಂತಗಳನ್ನೂ ರೂಪೀಕರಿಸಲು ಸಹ ಆರಂಭಿಸುತ್ತಾರೆ. ಹಾಗೆ ಪ್ರತಿಯೊಂದು ಹೊಸ ಪರಿಶೋಧನೆಯೊಂದಿಗೆ ಹೊಸ ಅಭಿಪ್ರಾಯಗಳು ಸಹ ಜನ್ಮವೆತ್ತುತ್ತವೆ. ತಿಳುವಳಿಕೆಯಿಲ್ಲದ ಜನರು ವಿಜ್ಞಾನವೆಂಬ ಪದದಿಂದ ವಂಚಿತರಾಗಿಯೋ ಬೇರೇನಾದರೂ ಕಾರಣದಿಂದಲೋ ಅಬದ್ಧ ಸುಬದ್ಧ ವಿಚಾರಗಳನ್ನೆಲ್ಲಾ ವಿಜ್ಞಾನದ ಸ್ಥಾಪಿತ ಸತ್ಯವೆಂದು ಗಣಿಸುತ್ತಾರೆ. ವಾಸ್ತವಿಕವಾಗಿ ಸಾಬೀತಾಗೊಂಡ ಸತ್ಯ ಕೆಲವೇ ಇವೆ. ಬಾಕಿ ಎಲ್ಲ ವಿಜ್ಞಾನಿಗಳ ಊಹೆ, ಅಭಿಪ್ರಾಯ ಮತ್ತು ತತ್ವಗಳು. ಅವುಗಳಾದರೋ ಪದೇ ಪದೇ ಬದಲಾವಣೆಗೊಳ್ಳುತ್ತಾ ಇರುತ್ತವೆ. ಮಾತ್ರವಲ್ಲ, ವಿಜ್ಞಾನಿಗಳೆಡೆಯಲ್ಲೇ ಅವುಗಳ ಕುರಿತು ಭಿನ್ನಾಭಿಪ್ರಾಯವಿರುತ್ತದೆ. ಒಟ್ಟಾರೆ, ವಿಜ್ಞಾನಿಗಳ ಕಲ್ಪನೆ, ಅವರ ಅಪೂರ್ಣ ಪರಿಶೋಧನೆ, ವಿಜ್ಞಾನದಿಂದ ಸಾಬೀತುಗೊಂಡ ಸತ್ಯ ಎಂಬೀ ವಿಚಾರಗಳಲ್ಲಿ ವ್ಯತ್ಯಾಸವನ್ನು ತಿಳಿಯದಿರುವುದು ಅತ್ಯಂತ ದೊಡ್ಡ ಪ್ರಮಾದವಾಗಿದೆ. ಮಾತ್ರವಲ್ಲ, ವಿಜ್ಞಾನಿಗಳ ಬಾಯಿಯಿಂದಾಗಲಿ ಲೇಖನಿಯಿಂದಾಗಲಿ ಹೊರಟು ಬರುವ ವಿಚಾರಗಳ ಮುಂದೆ ಅಡಿಯಾಳುಗಳಂತೆ ಜನರು ಕೊರಳು ಬಗ್ಗಿಸುತ್ತಾರೆ. ನಿರ್ಭಾಗ್ಯವಶಾತ್ ಮಾನಸಿಕವೂ ವಿಜ್ಞಾನಪರವೂ ಆದ ಈ ದಾಸ್ಯ ಅಧಿಕವಾಗಿ ಪೌರಸ್ತ್ಯರಲ್ಲಿ ಕಂಡುಬರುತ್ತದೆ. ಯುರೋಪು ಮತ್ತು ಅಮೇರಿಕದ ಜನರು ಬಹುಮಟ್ಟಿಗೆ ಈ ವಿಚಾರಗಳ ಬಗ್ಗೆ ವಿವೇಚಿಸಿ, ಅನೇಕ ಪರಿಶೀಲನೆಗಳಿಂದ ಸಾಬೀತುಗೊಂಡ ಹಾಗೂ ವಿಜ್ಞಾನಪರವಾದ ಇರುಳಿನಿಂದ ವಿಮುಕ್ತವಾದ ವಿಚಾರಗಳನ್ನು ಮಾತ್ರ ಸ್ಥಾಪಿತ ಸತ್ಯವೆಂದು ಪರಿಗಣಿಸುತ್ತಾರೆ.

ಈ ಆಧಾರದಲ್ಲಿ ವಿವಾದ ವಿಷಯದ ಬಗ್ಗೆ ವೀಕ್ಷಿಸುವುದಾದರೆ, ದೈವಾಸ್ತಿತ್ವವು ಸಂಶಯಿಸಲ್ಪಡಲು ಹೇತುವಾಗುವ ಯಾವುದೇ ವೈಜ್ಞಾನಿಕ ಸತ್ಯವನ್ನು ಕಾಣಲು ಅಸಾಧ್ಯ. ಅದಕ್ಕೆ ಸಾಕ್ಷ್ಯವೇನೆಂದರೆ-ಯಾವುದಾದರೊಂದು ಹೊಸ ಸಂಶೋಧನೆ ಸತ್ಯಾವಸ್ಥೆಗೆ ತಲಪಿದರೆ ಯಾವ ವಿಜ್ಞಾನಿಯೂ ಅದನ್ನು ಅಲ್ಲಗಳೆಯುವುದಿಲ್ಲ. ಏಕೆಂದರೆ ಸತ್ಯಾವಸ್ಥೆಗೆ ತಲಪುವುದೆಂಬುದರ ಅರ್ಥ ವಿಜ್ಞಾನಪರವಾಗಿ ದೃಢವಿಶ್ವಾಸದ ಹಂತವನ್ನು ತಲಪುವುದು ಮಾತ್ರವಲ್ಲದೆ, ಪದೇ ಪದೇ ವಿವಿಧ ರೀತಿಯಲ್ಲಿ ನಡೆಸಲಾಗುವ ಪರೀಕ್ಷಣೆಗಳಿಂದ ಸಂಶಯಕ್ಕೆ ಎಡೆಯಿಲ್ಲದಂತೆ ಅನುಭವ ಜ್ಞಾನವನ್ನು ಪಡೆಯುವುದು ಎಂದು ಸಹ ಆಗಿದೆ. ಈ ಘಟ್ಟವನ್ನು ತಲಪಿದರೆ, ಯಾವ ವಿಜ್ಞಾನಿಯೂ, ಎಂದೇಕೆ ಸ್ವಲ್ಪ ತಿಳುವಳಿಕೆಯುಳ್ಳ ಯಾವೊಬ್ಬನೂ ಅದನ್ನು ನಿರಾಕರಿಸಲಿಕ್ಕಿಲ್ಲ. ವಿಜ್ಞಾನದ ಎಲ್ಲಾ ಸ್ಥಾಪಿತ ಸತ್ಯಗಳನ್ನು

ಎಲ್ಲಾ ವಿಜ್ಞಾನಿಗಳೂ ಸಮಾನವಾಗಿ ಒಪ್ಪುವುದನ್ನು ನಾವು ಕಾಣುತ್ತಿದ್ದೇವೆ. ಆ ವಿಚಾರಗಳಲ್ಲಿ ಯಾರಿಗೂ ಭಿನ್ನಾಭಿಪ್ರಾಯವಿಲ್ಲ. ಭಿನ್ನಾಭಿಪ್ರಾಯವಿರುವುದು ಇಷ್ಟರ ವರೆಗೆ ಪರಿಪೂರ್ಣವಾಗಿ ಸಾಬೀತಾಗದ ವಿಚಾರಗಳಲ್ಲೂ ಕೆಲವು ವಿಜ್ಞಾನಿಗಳು ಸ್ಥಾಪಿತ ಸತ್ಯಗಳ ಆಧಾರದಲ್ಲಿ ಊಹಿಸಿ ರೂಪೀಕರಿಸಿದ ಸಿದ್ಧಾಂತಗಳಲ್ಲೂ ಆಗಿದೆ.

ಒಟ್ಟಿನಲ್ಲಿ, ವಿಜ್ಞಾನದ ಸ್ಥಾಪಿತ ಸತ್ಯದ ಸಂಬಂಧಿಸಿ ಯಾವುದೇ ಭಿನ್ನಾಭಿಪ್ರಾಯ ಇರುವುದಿಲ್ಲ. ಆದರೆ ವಿಜ್ಞಾನಿಗಳಲ್ಲಿ ಹೆಚ್ಚಿನವರು ದೈವಾಸ್ತಿತ್ವದಲ್ಲಿ ವಿಶ್ವಾಸವುಳ್ಳವರಾಗಿ ಕಂಡು ಬರುತ್ತಾರೆ. ಅವರಲ್ಲಿ ಕೆಲವರು ಮಾತ್ರ ನಾಸ್ತಿಕರಾಗಿದ್ದಾರೆ. ಈ ಪ್ರಪಂಚ ಒಬ್ಬ ಸೃಷ್ಟಿಕರ್ತನೂ ಪರಿಪಾಲಕನೂ ಇಲ್ಲದೆ ತನ್ನಿಂತಾನೇ ಚಲಿಸುತ್ತಿದೆಯೆಂದು ದೃಢೀಕರಿಸಲು ಶಕ್ತವಾದ ಯಾವ ವಿಜ್ಞಾನವಾಗಲಿ ಇಲ್ಲವೆಂದು ಇದರಿಂದ ಸಾಬೀತಾಗುತ್ತದೆ. ಹಾಗಲ್ಲವಾಗಿದ್ದರೆ, ವಿಜ್ಞಾನಿಗಳಲ್ಲಿ, ಈ ಭಿನ್ನಾಭಿಪ್ರಾಯ ಗೋಚರಿಸುತ್ತಿರಲಿಲ್ಲ.

ಈ ಪ್ರಪಂಚ ತನ್ನಷ್ಟಕ್ಕೆ ಉಂಟಾಯಿತೆಂದೂ ತನ್ನಿಂತಾನೇ ಚಲಿಸುತ್ತಿದೆಯೆಂದೂ ಸ್ಪಷ್ಟಪಡಿಸುವ ಯಾವುದಾದರೂ ಸಂಶೋಧನೆ ಭವಿಷ್ಯತ್ಕಾಲದಲ್ಲಿ ಉಂಟಾದರೆ ಅದಕ್ಕೆ ಪ್ರತ್ಯುತ್ತರವೇನೆಂದು ಯಾರಾದರೂ ಕೇಳುವುದಾದರೆ, ಅವರೊಡನೆ ಪ್ರಥಮತ ನನಗೆ ಹೇಳಲಿಕ್ಕಿರುವುದೇನೆಂದರೆ, ಹಾಗೆ ಆದರೆ ಏನಾದೀತು ? ಹೀಗೆ ಆದರೆ ಏನಾದೀತು ? ಎಂಬ ಪ್ರಶ್ನೆ ಅಸಮಂಜಸ ಮಾತ್ರವಲ್ಲ ಬಾಲಿಶವೂ ಆಗಿದೆ. ಅಥವಾ ಅದಕ್ಕೆ ಉತ್ತರ ನೀಡಲೇ ಬೇಕೆಂದಾದರೆ ನಾನು ಹೇಳುತ್ತೇನೆ: ನಾವು ಸತ್ಯಾನ್ವೇಷಕರು; ಯಥಾರ್ಥದಲ್ಲಿ ಸತ್ಯವೆಂದು ಸಾಬೀತಾಗುವ ವಿಚಾರ ಏನೇ ಆದರೂ ನಾವು ಅದನ್ನು ಅಲ್ಲಗಳೆಯುವುದಿಲ್ಲ. ಮುಹಮ್ಮದ್ ಪೈಗಂಬರರೊಡನೆ ಅಲ್ಲಾಹನು ಹೇಳುತ್ತಾನೆ: “ದೇವನಿಗೆ ಪುತ್ರನಿಲ್ಲವೆಂದು ನೀನು ಕ್ರೈಸ್ತರೊಡನೆ ಹೇಳು. ಮಾತ್ರವಲ್ಲ, ದೇವನಿಗೆ ಪುತ್ರನಿದ್ದಾನೆಂದು ನಂಬುವುದು ಅತ್ಯಂತ ಅಸಂಬದ್ಧ ಹಾಗೂ ಅಪಾಯಕಾರಿಯಾಗಿದೆ–ಆ ಕಾರಣದಿಂದ ಆಕಾಶ ಭೂಮಿಗಳು ಅಡಿಮೇಲಾಗಬಹುದು. ಹಾಗಿದ್ದರೂ ಸಹ, ದೇವನಿಗೆ ಪುತ್ರನಿದ್ದಾನೆಂದು ಸಾಬೀತಾಗುವುದಾದರೆ ಆತನನ್ನು ವಂದಿಸುವವರಲ್ಲಿ ಮೊದಲಿಗನು ತಾನಾಗುವೆನೆಂದು ನೀನು ಅವರೊಡನೆ ಹೇಳು.” ಒಟ್ಟಾರೆ, ಸತ್ಯತೃಷ್ಣೆ ನಮ್ಮ ಮೊಲೆಹಾಲಿನಲ್ಲಿ ಸೇರಿಕೊಂಡಿದೆ. ನಮಗೆ ಅದು ನಮ್ಮ ಪೈಗಂಬರ ವರೇಣ್ಯರಿಂದ ಪರಂಪರಾಗತವಾಗಿ ಲಭಿಸಿದೆ. ಆದ್ದರಿಂದ, ಸ್ಪಷ್ಟವಾಗಿ ಸ್ಥಾಪಿಸಲ್ಪಡುವ ಸತ್ಯವು, ಅದು ಏನೇ ಆದರೂ ಸರಿ, ನಾವು ಅದನ್ನು ನಂಬುವೆವೆಂಬುದು ನಮ್ಮ ತಾತ್ವಿಕ ಉತ್ತರ. ಆದರೆ ನಿಜವಾದ ಉತ್ತರವೇನೆಂದರೆ, ದೈವಾಸ್ತಿತ್ವವು ಸಂಶಯಕರವಾಗುವಂತಹ ಯಾವುದೇ ವಿಚಾರ ಎಂದಿಗೂ ಸಾಬೀತಾಗಲಾರದು. ಕಾರಣವೇನೆಂದರೆ, ಹಾಗೆ ಒಂದು ವಿಚಾರ ಸಾಬೀತಾಗುವುದೆಂಬುದರ ಅರ್ಥ ಎರಡು ಸ್ಥಾಪಿತ ಸತ್ಯ ವಿಚಾರಗಳು ಪರಸ್ಪರ ವಿರುದ್ಧವಾಗುತ್ತವೆ ಎಂದಾಗುತ್ತದೆ. ಇದು ತೀರಾ ಅಸಾಧ್ಯ. ಉದಾಹರಣೆಗೆ, ಒಂದು ಕಡೆಯಲ್ಲಿ, ಅಯಸ್ಕಾಂತವು ಕಬ್ಬಿಣವನ್ನು ಆಕರ್ಷಿಸುತ್ತದೆಯೆಂದೂ ಇನ್ನೊಂದು ಕಡೆಯಲ್ಲಿ ಆಕರ್ಷಿಸುವುದಿಲ್ಲವೆಂದೂ ವೈಜ್ಞಾನಿಕವಾಗಿ ರುಜುಪಡಿಸಲು ಸಾಧ್ಯವೇ? ಎಂದಿಗೂ ಸಾಧ್ಯವಿಲ್ಲವೆಂಬುದು ಸ್ಪಷ್ಟ. ಅಥವಾ ಹಾಗೆ ಕಂಡು ಬರುವುದಾದರೆ ಎರಡರಲ್ಲಿ ಒಂದು ತಪ್ಪೆಂದು ನಾವು ನಿರ್ಧರಿಸದೆ ನಿರ್ವಾಹವಿಲ್ಲ. ಎಂದರೆ, ಎರಡರಲ್ಲಿ ಒಂದರ ಕುರಿತು ಅದು ಸ್ಥಾಪಿತ ಸತ್ಯವಲ್ಲವೆಂದೂ ತಪ್ಪಾಗಿ ಹಾಗೆ ಭಾವಿಸಲ್ಪಟ್ಟಿದೆಯೆಂದೂ ಒಪ್ಪಬೇಕಾದೀತು. ಒಟ್ಟಾರೆ, ಜಗತ್ತಿನಲ್ಲಿ ಕಾಣಲ್ಪಡುವ ಈ ವಸ್ತುಗಳೆಲ್ಲಾ ತನ್ನಷ್ಟಕ್ಕೇ ಸದಾಕಾಲದಿಂದಲೇ ಇವೆಯೆಂದೂ ಈ ವ್ಯವಸ್ಥೆಗಳೆಲ್ಲಾ ತನ್ನಿಂತಾನೇ ನಡೆದು ಬರುತ್ತಿವೆಯೆಂದೂ ವೈಜ್ಞಾನಿಕವಾಗಿ ಒಂದು ವೇಳೆ ಸಾಬೀತಾಗುವುದಾದರೂ ಸಹ ಆ ಕಾರಣದಿಂದ ದೈವಾಸ್ತಿತ್ವವನ್ನು ನಿರಾಕರಿಸಲು ನಮಗೆ ಸಾಧ್ಯವಿಲ್ಲ. ಏಕೆಂದರೆ, ಇದು ವೈಜ್ಞಾನಿಕ ಅನ್ವೇಷಣೆಯೆಂದಾದರೆ, ದೈವಾಸ್ತಿತ್ವ ಸಹ ತಾತ್ವಿಕವಾಗಿ ವೈಜ್ಞಾನಿಕ ಅನ್ವೇಷಣೆಯಿಂದ ಸಾಬೀತಾದ ಸತ್ಯವಾಗಿದೆ. ನಾವು ಮಾತ್ರವಾದ ಒಂದು ಶೋಧನೆಯ ಕಾರಣದಿಂದ, ಸ್ಥಾಪಿತಗೊಂಡ ಒಂದು ಸತ್ಯವನ್ನು, ಚರಿತ್ರಾತೀತ ಕಾಲ ಮೊದಲ್ಗೊಂಡು ಅನುಭವದ ಮುದ್ರೆ ಒತ್ತಲ್ಪಟ್ಟ ಸತ್ಯವನ್ನು, ಪರಿತ್ಯಜಿಸಲು ಸಾಧ್ಯವಿಲ್ಲ. ಈ ಸ್ಥಿತಿಯಲ್ಲಿ, ವೈಜ್ಞಾನಿಕ ಸತ್ಯವೆಂದು ಹೇಳಲ್ಪಡುವ ಈ ಹೊಸ ಪರಿಶೋಧನೆ ಎಷ್ಟರ ಮಟ್ಟಿಗೆ ಸರಿಯೂ ಸ್ವೀಕಾರಾರ್ಹವೂ ಎಂದು ನಾವು ಆಲೋಚಿಸಬೇಕಾಗಿದೆ.

ಒಂದು ವೈಜ್ಞಾನಿಕ ಸತ್ಯವು ನಿಜವೆಂದು ಅಂಗೀಕರಿಸಲ್ಪಡಬೇಕಾದರೆ ಅದು ವಿಜ್ಞಾನಪರವೂ ಬುದ್ಧಿಪರವೂ ಆದ ಸಾಕ್ಷ್ಯಗಳಿಂದಲೂ ದರ್ಶನಾನುಭವಗಳಿಂದಲೂ ಸ್ಪಷ್ಟ

ವಾಗಬೇಕೆಂದು ನಾವು ತಿಳಿದಿರಬೇಕಾಗಿದೆ. ಬುದ್ಧಿಪರವಾದ ಸಾಕ್ಷ್ಯಗಳೊಂದಿಗೆ ಅನುಭವ ಮತ್ತು ದರ್ಶನ ಒಂದುಗೂಡಿದರೆ, ದರ್ಶನ ನ್ಯೂನವಲ್ಲದ ಪಕ್ಷದಲ್ಲಿ, ಪ್ರಮಾದವುಂಟಾಗಲಿಕ್ಕೆ ಸಂದರ್ಭವಿಲ್ಲ. ಯಥಾರ್ಥದಲ್ಲಿ ಇದು ಅತ್ಯಂತ ಉತ್ತಮವಾದ ಅನ್ವೇಷಣ ಮಾರ್ಗವಾಗಿದೆ. ಈ ಕಾರಣದಿಂದ ವೈಜ್ಞಾನಿಕವಾಗಿ ಸ್ಥಾಪಿಸಲ್ಪಟ್ಟ ವಿಚಾರಗಳ ನೈಜತೆ ಎಲ್ಲಕ್ಕಿಂತ ಮಿಗಿಲೆಂದು ಗಣಿಸಲ್ಪಡುತ್ತದೆ. ಆದರೆ, ದೈವಾಸ್ತಿತ್ವ ಸ್ಥಾಪಿಸಲ್ಪಟ್ಟಿರುವ ಮೂಲಾಧಾರಗಳೂ ಸಾಕ್ಷ್ಯಗಳೂ ವೈಜ್ಞಾನಿಕ ಪುರಾವೆಗಳಂತೆಯೇ ಇವೆ. ಹೇಗೆಂದರೆ, ಮೇಲೆ ಹೇಳಿದಂತೆ ದೈವಾಸ್ತಿತ್ವವು ಬುದ್ಧಿಪರವಾದ ರುಜುವಾತುಗಳಿಂದ ಮಾತ್ರವಲ್ಲ, ವೈಜ್ಞಾನಿಕ ಸತ್ಯದಂತೆ ಅನುಭವ ಮತ್ತು ದರ್ಶನಗಳಿಂದ ಸಹ ಸಾಬೀತಾಗಿರುತ್ತದೆ. ಅಷ್ಟೇ ಅಲ್ಲ, ಈ ದರ್ಶನಾನುಭವಗಳು ವಿಜ್ಞಾನಕ್ಕಿಂತಲೂ ಶ್ರೇಷ್ಠ ಮಟ್ಟದ್ದಾಗಿವೆ. ಒಬ್ಬ ದೇವನಿರಬೇಕು ಎಂದು ಸಮರ್ಥಿಸಲಿಕ್ಕೆ ಮಾತ್ರ ಬುದ್ಧಿಗೆ ಸಾಧ್ಯ. ಅದರಾಚೆ, **ನಿಜವಾಗಿಯೂ ದೇವನಿದ್ದಾನೆ** ಎಂಬ ನಂಬಿಕೆ ಅನುಭವ ಮತ್ತು ದರ್ಶನದಿಂದ ಮಾತ್ರ ಪ್ರಾಪ್ತವಾಗುತ್ತದೆ. ಈ ದರ್ಶನಾನುಭವದ ಮಾರ್ಗವನ್ನು ದೇವನೇ ತೆರೆದಿಟ್ಟಿದ್ದಾನೆ. ಹೇಗೆಂದರೆ, ದೇವನು ಹೇಳುತ್ತಾನೆ: ಲಾ ತುದ್‌ರಿಕುಹುಲ್ ಅಬ್‌ಸಾರು ವಹುವ ಯುದ್‌ರಿಕುಲ್ ಅಬ್‌ಸಾರ್"–"ಮನುಷ್ಯದೃಷ್ಟಿ ದೇವನನ್ನು ತಲಪಲಿಕ್ಕಿಲ್ಲ; (ಎಂದರೆ ಕೇವಲ ಬುದ್ಧಿಪರವಾದ ಸಾಕ್ಷ್ಯಗಳಿಂದ ದೈವಿಕ ಜ್ಞಾನ ಪ್ರಾಪ್ತಿಯಾಗಲಿಕ್ಕಿಲ್ಲ) ಆದರೆ ದೇವನು ತಾನೇ ಮನುಷ್ಯದೃಷ್ಟಿಯನ್ನು ತಲಪುತ್ತಾನೆ." (ಪವಿತ್ರ ಖುರ್‌ಆನ್ 6:104).

ಎಂದರೆ, ದೇವನ ಕುರಿತು ಮನುಷ್ಯನ ಜ್ಞಾನ ಅನ್ಯೂನವಾಗಿರಲಿಕ್ಕಾಗಿ ಮನುಷ್ಯನಿಗೆ ದೇವನನ್ನು ಕಾಣಲು ಸಾಧ್ಯವಾಗುವ ಮಾರ್ಗಗಳನ್ನು ದೇವನೇ ನಿರ್ಮಿಸುತ್ತಾನೆಂದು ತಾತ್ಪರ್ಯ. ಮನುಷ್ಯನಿಗೆ ದೇವದರ್ಶನ ಹೇಗೆ ಸಾಧ್ಯ ಎಂಬುದು ದೀರ್ಘವಾದೊಂದು ಪ್ರಶ್ನೆಯಾಗಿದೆ. ಅದರ ವಿಶದವಾದ ಉತ್ತರ ಈ ಗ್ರಂಥದ ಎರಡನೇ ಭಾಗಕ್ಕೆ ಸಂಬಂಧಿಸಿದುದಾಗಿದೆ. ಆದರೆ ಇಲ್ಲಿ ಸಂಕ್ಷಿಪ್ತವಾಗಿ ಇಷ್ಟು ಮಾತ್ರ ಹೇಳಬಹುದು: ಈ ದರ್ಶನ ದೇವನು ತನ್ನ ಪರಿಶುದ್ಧ ಭಕ್ತದಾಸರಿಗೆ ಅವತೀರ್ಣಗೊಳಿಸುವ ವಚನಗಳ ಮುಖಾಂತರ ಸಾಧ್ಯವಾಗುತ್ತದೆ. ಹಣ್ಣು ಬಿಡುವ ಕಾಲದಲ್ಲಿ ಒಂದು ವೃಕ್ಷವು ಯಾವ ರೀತಿಯಲ್ಲಿ ಹಣ್ಣುಗಳಿಂದ ತುಂಬಿರುತ್ತದೋ ಅದೇ ಪ್ರಕಾರ ದೈವಿಕ ಲಕ್ಷಣಗಳಿಂದ ಅವರು ತುಂಬಿಕೊಂಡಿರುತ್ತಾರೆ. ಯಾವ ರೀತಿಯಲ್ಲಿ ಹಣ್ಣನ್ನು ಸವಿದ ನಂತರ ಮರವನ್ನು ಗುರುತಿಸುವುದರಲ್ಲಿ ಯಾರಿಗೂ ಸಂಶಯವಿಲ್ಲದಿರುತ್ತದೋ ಅದೇ ಪ್ರಕಾರ ಈ ಅಧ್ಯಾತ್ಮ ಹಣ್ಣನ್ನು ಆಸ್ವಾದಿಸಿದ ಬಳಿಕ ದೈವಾಸ್ತಿತ್ವ ಸೂರ್ಯ ಪ್ರಕಾಶದಂತೆ ಮಾನವ ದೃಷ್ಟಿಗೆ ಗೋಚರಿಸುತ್ತದೆ.

ಆದ್ದರಿಂದ, ದೈವಾಸ್ತಿತ್ವಕ್ಕೆ ಪುರಾವೆ ವೈಜ್ಞಾನಿಕ ಸತ್ಯದಂತೆಯೇ, ಅಲ್ಲ, ಅದಕ್ಕಿಂತಲೂ ವಿಶೇಷ ಹಾಗೂ ಸ್ಪಷ್ಟವಾಗಿ, ಬುದ್ಧಿಪರವಾದ ಸಾಕ್ಷ್ಯಗಳಲ್ಲದೆ ದರ್ಶನಾನುಭವಗಳಿಂದಲೂ ಅಧಿಷ್ಠಿತವಾಗಿದೆ. ಒಟ್ಟಾರೆ, ದೈವಾಸ್ತಿತ್ವಕ್ಕೆ ವಿರುದ್ಧವಾಗಿ ಯಾವುದೇ ವೈಜ್ಞಾನಿಕ ಸಂಶೋಧನೆ ಸಾಬೀತಾದರೂ ಸಹ ನಮಗೆ ದೈವಾಸ್ತಿತ್ವವನ್ನು ಅಲ್ಲಗಳೆಯಲಿಕ್ಕೆ ಸಾಧ್ಯವಿಲ್ಲ, ಆ ಹೊಸ ಸಂಶೋಧನೆ ಎಷ್ಟರ ಮಟ್ಟಿಗೆ ಸರಿಯೂ ಸ್ವೀಕಾರಾರ್ಹವೂ ಎಂದು ನಾವು ಆಲೋಚಿಸುವೆವು. ನಮ್ಮ ಅಭಿಪ್ರಾಯದಂತೆ, ಆ ಆಲೋಚನೆಯ ಫಲ, ದೈವಾಸ್ತಿತ್ವ ಸತ್ಯವೆಂದೂ ವಿಜ್ಞಾನದ ನಾಮಮಾತ್ರ ಹಾಗೂ ದೈವಾಸ್ತಿತ್ವಕ್ಕೆ ವಿರುದ್ಧವಾಗಿ ಕಾಣಲ್ಪಡುವ ಆ ಸಂಶೋಧನೆ ವಾಸ್ತವದಲ್ಲಿ ದೈವಾಸ್ತಿತ್ವಕ್ಕೆ ವಿರುದ್ಧವಲ್ಲ ಅಥವಾ ನ್ಯೂನ ವೀಕ್ಷಣದಲ್ಲಿ ಅಧಿಷ್ಠಿತವೆಂದೂ ಮನಗಾಣಬಹುದು. ಆ ವೈಜ್ಞಾನಿಕ ಶೋಧನೆ ಸ್ಥಾಪಿತ ಸತ್ಯ ಆಗಿರಲಾರದು.

ವಾಸ್ತವದಲ್ಲಿ, ದೈವಾಸ್ತಿತ್ವ ಪರಿಪೂರ್ಣವೂ ಅನ್ಯೂನವೂ ಆದ ವೀಕ್ಷಣದಿಂದ ಸ್ಥಾಪಿಸಲ್ಪಟ್ಟಿದೆ. ವೈಜ್ಞಾನಿಕ ಶೋಧನೆಯಿಂದ ಅದಕ್ಕೆ ವಿರುದ್ಧವಾಗಿ ಕಂಡು ಬಂದರೆ ಪರಸ್ಪರ ವಿರುದ್ಧವಾಗಿರುವ ಎರಡು ವಿಚಾರಗಳನ್ನು ಒಂದೇ ಸ್ಥಳದಲ್ಲಿ ಒಟ್ಟುಗೂಡಿಸುವುದೆಂದರ್ಥ. ಅದು ಸಂಭವನೀಯವಲ್ಲ. ವಿಜ್ಞಾನವು ನಮ್ಮ ವೀಕ್ಷಣವನ್ನು ಆಕ್ಷೇಪಿಸುವುದಾದರೆ. ಅದು ಅದಕ್ಕೆಯೇ ಕುಠಾರಪ್ರಾಯವಾದೀತು ಏಕೆಂದರೆ ವಿಜ್ಞಾನಕ್ಕೆ ಸಹ ಆಧಾರ ವೀಕ್ಷಣವಾಗಿದೆ. ಒಟ್ಟಿನಲ್ಲಿ, ಭವಿಷ್ಯತ್ತಿನಲ್ಲಿ ಏನು ಸಂಭವಿಸಬಹುದು ಎಂಬುದು ನಿರರ್ಥಕ ಪ್ರಶ್ನೆಯಾಗಿದೆ. ದೈವಾಸ್ತಿತ್ವದ ವಿರುದ್ಧವಾಗಿ ತೋರಿಸತಕ್ಕಂಥ ಯಾವ ವೈಜ್ಞಾನಿಕ ಸತ್ಯವೂ ಇದು ವರೆಗೆ ಸಮರ್ಥಿಸಲ್ಪಡಲಿಲ್ಲವೆಂಬುದರಲ್ಲಿ ಸಂದೇಹವಿಲ್ಲ. ವೈವಿಧ್ಯಮಯ ಹಾಗೂ ಅದ್ಭುತಕರವಾದ ಅಸಂಖ್ಯಾತ ವಸ್ತುಗಳಿಂದ ಕೂಡಿಕೊಂಡಿರುವ ಈ ಪ್ರಪಂ

# ಕ್ರೈಸ್ತ ಮಿತ್ರರಿಗೊಂದು ಸುವಾರ್ತೆ

★ ಬಶೀರ್ ಅಹ್ಮದ್ ಓರ್ಚರ್ಡ್

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಇಸ್ಲಾಂ ಧರ್ಮದ ಸ್ಥಾಪಕರಾದ ಪೈಗಂಬರ್(ಸ) ದೇವರಿಂದ ನಿಯೋಗಿತರಾದ ಒಬ್ಬ ಸತ್ಯ ಪ್ರವಾದಿಯೂ ಪವಿತ್ರ ಖುರ್‌ಆನ್ ಎಂಬುದು ಅವರಿಗೆ ದೇವರಿಂದ ಅವತೀರ್ಣಗೊಳಿಸಲ್ಪಟ್ಟ ದಿವ್ಯವಾಣಿಯೂ ಆಗಿದೆಯೆಂಬುದು ಸತ್ಯವಾಗಿದ್ದಲ್ಲಿ ಕ್ರೈಸ್ತ ಸಭೆಯು ಈ ಪರಮಾರ್ಥವನ್ನು ನಿರಾಕರಿಸಲು ಕಾರಣವೇನು? ಎಂಬ ಒಂದು ಪ್ರಶ್ನೆ ಇಲ್ಲಿ ಉದಯಿಸಬಹುದು.

ಈ ಪ್ರಶ್ನೆಗೆ ಹಲವು ರೀತಿಯ ಉತ್ತರಗಳನ್ನು ನೀಡಬಹುದಾಗಿದೆ. ಕ್ರೈಸ್ತ ಸಭೆಯು ಹಝ್ರತ್ ಮುಹಮ್ಮದ್ ಪೈಗಂಬರರ ಉಪದೇಶಗಳ ಕಡೆ ಗಮನ ಹರಿಸದೆ ಇರಲು ಹೇತುವಾದ ಕಾರಣಗಳಲ್ಲಿ ಒಂದನ್ನು ನಾನಿಲ್ಲಿ ವಿವರಿಸುವೆನು. ಅದು ಯೇಸುಮಸೀಹಾರ ದೇವತ್ವದ ಕುರಿತು ವಿವಾದವಾಗಿದೆ. ಯೇಸುಮಸೀಹಾ ಸಾಕ್ಷಾತ್ ದೇವರೆಂಬುದಾಗಿ ಸಭೆ ನಂಬುತ್ತದೆ. ಅಂದರೆ, ಯೇಸುಕ್ರಿಸ್ತರು ಸ್ವಯಂ ದೇವರೇ ಆಗಿದ್ದಾರೆಂಬುದು ಕ್ರೈಸ್ತರ ಮತ ವಿಶ್ವಾಸ. ಆದರೆ, ಪವಿತ್ರ ಖುರ್‌ಆನ್ ಯೇಸುಮಸೀಹಾರ ದೇವತ್ವವನ್ನು ಸಂಪೂರ್ಣವಾಗಿ ನಿಷೇಧಿಸುತ್ತದೆ. ಅವರ ಯಥಾರ್ಥ ಸ್ಥಾನಮಾನಗಳ ಕುರಿತು ಆ ಪವಿತ್ರ ಗ್ರಂಥದಲ್ಲಿ ಹಲವಾರು ಕಡೆ ಉಲ್ಲೇಖಗಳಿವೆ. ಯೇಸುಮಸೀಹಾ ದೇವರಿಂದ ನಿಯೋಗಿತರಾದ ಒಬ್ಬ ಪ್ರವಾದಿಯೂ ಇತರ ಮನುಷ್ಯರಂತೆ ಒಬ್ಬ ವ್ಯಕ್ತಿಯೂ ಆಗಿರುವರೆಂಬುದನ್ನು ಅದು ಸ್ಪಷ್ಟಪಡಿಸಿದೆ. ಈ ರೀತಿ ಪ್ರಬೋಧಿಸಿದ ಮುಹಮ್ಮದ್ ಪೈಗಂಬರರು ಕ್ರೈಸ್ತರ ದೃಷ್ಟಿಯಲ್ಲಿ ಕೇವಲ ಒಬ್ಬ ಸುಳ್ಳುಗಾರನೂ ವ್ಯಾಜವಾದಿಯೂ ಆದರು. ಕ್ರೈಸ್ತರ ವಿಶ್ವಾಸ ಪ್ರಕಾರ ಸಾಕ್ಷಾತ್ ದೇವರಾಗಿದ್ದ ಯೇಸುಕ್ರಿಸ್ತರ ಬಗ್ಗೆ ಈ ರೀತಿ ಅವರು ಬೋಧಿಸಿದ್ದೇ ಅದಕ್ಕೆ ಕಾರಣ.

ಈಗ, ಕ್ರೈಸ್ತರ ಧರ್ಮಗ್ರಂಥವಾದ ಸತ್ಯವೇದವು ಮಸೀಹಾರ ಕುರಿತು ಏನು ಹೇಳುತ್ತದೆ ಎಂದೂ ಸ್ವಯಂ ಯೇಸು ತಾನೇ ತನ್ನ ಬಗ್ಗೆ ದೇವರೆಂದೋ ಅಥವಾ ದೇವರಿಂದ ಕಳುಹಿಸಲ್ಪಟ್ಟ ಪ್ರವಾದಿಯೆಂದೋ ಏನೆಂದು ಬೋಧಿಸಿದ್ದಾರೆಂಬುದನ್ನೂ ನಾವು ಪರಿಶೀಲಿಸುವ. ಬೈಬಲಿನ ಒಂದನೇ ಕೊರಿಂಥದವರಿಗೆ 8ನೇ ಅಧ್ಯಾಯದ 6ನೇ ವಾಕ್ಯವು ಈ ರೀತಿಯಿದೆ:

"ನಮಗಾದರೋ ಒಬ್ಬನೇ ದೇವರಿದ್ದಾನೆ; ಆತನು ತಂದೆಯೆಂಬಾತನೇ; ಆತನು ಸಮಸ್ತಕ್ಕೂ ಮೂಲ ಕಾರಣನು".

ಈ ವಾಕ್ಯದಿಂದ ದೇವರನ್ನು ತಂದೆ ಎಂಬ ನಾಮದಲ್ಲಿ ಕರೆದುದು ಸ್ಪಷ್ಟಪಡುತ್ತದೆ. "ಸ್ವರ್ಗಸ್ಥನಾದ ನಮ್ಮ ತಂದೆ" ಎಂಬ ಪ್ರಾರ್ಥನಾ ವಚನದ ಮೂಲಕ ಯೇಸು ಅದನ್ನು ದೃಢೀಕರಿಸಿದ್ದಾರೆ.

---

(ಆರನೇ ಪುಟದಿಂದ)

ಚ, ಎಲ್ಲಾ ವಸ್ತುಗಳ ಪ್ರವರ್ತನೆಗಳಲ್ಲಿ ಕಾಣಲ್ಪಡುವ ಬುದ್ಧಿಪೂರ್ವಕವಾದ ನಿಯಮಗಳಿಂದ ಕೂಡಿದ ಈ ಪ್ರಪಂಚ, ವಿವಿಧ ಗುಣಗಳಿಂದ ಕೂಡಿದ ಅಸಂಖ್ಯಾತ ವಸ್ತುಗಳನ್ನು ಒಂದೇ ದಾರದಲ್ಲಿ ಪೋಣಿಸಿದ ರೀತಿಯಲ್ಲಿಟ್ಟುಕೊಂಡು, ಹಾಗೆ ಲೋಕದಲ್ಲಿರುವ ಪ್ರತಿಯೊಂದು ಚಿಕ್ಕ ಚಿಕ್ಕ ವಸ್ತುಗಳ ಆವಶ್ಯಕತೆಗಳನ್ನು ಪೂರೈಸುವುದಕ್ಕಾಗಿ ಸಾವಿರ, ಲಕ್ಷ, ಕೋಟಿ ಮೈಲುಗಳಾಚೆ ಅಸಂಖ್ಯಾತ ನಿಸರ್ಗ ಕಾರ್ಯಾಗಾರಗಳು ರಾತ್ರಿ ಹಗಲು ಪ್ರವರ್ತಿಸುತ್ತಿರುವುದಾಗಿ ಕಾಣಲ್ಪಡುವ ಈ ಪ್ರಪಂಚ, ಈ ಲೋಕದ ಮೇಲೆ ಸೂಕ್ಷ್ಮಜ್ಞಾನಿಯೂ ಬುದ್ಧಿಶಾಲಿಯೂ ಸರ್ವಶಕ್ತನೂ ಆದ ಒಬ್ಬ ಸೂತ್ರಧಾರಕನು, ಅವನ ನಿಯಂತ್ರಣದಿಂದ ಯಾವುದೇ ವಸ್ತು ಬಿಟ್ಟು ಹೋಗದ ರೀತಿಯಲ್ಲಿ, ಪ್ರವರ್ತಿಸುತ್ತಿದ್ದಾನೆಂಬುದಕ್ಕೆ ಪ್ರಬಲವಾದ ಪುರಾವೆಯಾಗಿದೆ. ಇದೇ ಶಾಶ್ವತ ಸತ್ಯ.

—o—

ಇಲ್ಲಿ, ಯೇಸುಮಸೀಹಾ ತನ್ನನ್ನು ಸರ್ವಥಾ ತಂದೆಯಿಂದ ಭಿನ್ನವಾದ ಒಂದು ವ್ಯಕ್ತಿಯಾಗಿ ಪರಿಗಣಿಸಿರುವುದನ್ನು ಕಾಣಬಹುದು, "ತಂದೆಯು ನನಗಿಂತ ದೊಡ್ಡವನು" ಎಂಬುದಾಗಿಯೂ ಅವರು ಹೇಳುತ್ತಾರೆ. (ಯೋಹಾನ 14 : 28). ಆಗ, ಮಸೀಹಾರನ್ನು ದೇವರೆಂಬುದಾಗಿ ತಿಳಿದಲ್ಲಿ, ಎರಡು ದೇವರುಗಳಿವೆಯೆಂದೂ ಒಂದು ಮತ್ತೊಂದಕ್ಕಿಂತಲೂ ದೊಡ್ಡದೆಂದೂ ಕೂಡಾ ಸಮ್ಮತಿಸಬೇಕಾಗುತ್ತದೆ!

ನಾನು ಬೈಬಲನ್ನು ಸಮಗ್ರವಾಗಿ ಗ್ರಹಿಸಿಕೊಳ್ಳಲು ಪ್ರಯತ್ನಿಸುವುದಿಲ್ಲವೆಂದು ಕೆಲವು ಕ್ರೈಸ್ತ ಸಹೋದರರು ನನ್ನೊಡನೆ ಹೇಳಿದ್ದುಂಟು. ನಾನು ಅಲ್ಲಲ್ಲಿಂದ ಕೆಲವು ವಚನಗಳನ್ನು ತೆಗೆದುಕೊಂಡು ನನಗೆ ಬೇಕಾದಂತೆ ಅವುಗಳನ್ನು ವ್ಯಾಖ್ಯಾನಿಸುತ್ತಿರುವುದೇ ನನಗೆ ಬೈಬಲ್ ಅರ್ಥವಾಗದಿರಲು ಕಾರಣವಂತೆ. ಅಂತಹವರೊಡನೆ ನಾನೇನು ಹೇಳಲಿ! ಅವರ ಊಹೆಯು ಸತ್ಯವಾಗಿದ್ದಲ್ಲಿ ಅವರು ನನ್ನ ಹೇಳಿಕೆಗಳಲ್ಲಿ ಅಬದ್ಧತೆಗಳನ್ನು ತೋರಿಸಿಕೊಡಲಿ. ಮಾತ್ರವಲ್ಲ, ದೇವರು ದೇಹಿಯೆಂದು ಸಾಬೀತುಪಡಿಸಲು ನಾನವರನ್ನು ಆಹ್ವಾನಿಸುತ್ತೇನೆ. ನಾನು ಮಸೀಹಾರ ದೈವತ್ವವನ್ನು ನಿರಾಕರಿಸುತ್ತಿರುವುದು ಬೈಬಲನ್ನು ಆಧಾರಪಡಿಸಿಯಲ್ಲ. ಪವಿತ್ರ ಖುರ್‌ಆನಿನ ಆಧಾರಗಳನ್ನು ಅವಲಂಬಿಸಿಕೊಂಡಾಗಿದೆ. ಆದರೆ, ಬೈಬಲ್ ಕೂಡಾ ಮಸೀಹಾ ದೇವರಾಗಿದ್ದರೆಂಬ ಕ್ರೈಸ್ತರ ನಂಬಿಕೆಯನ್ನು ಅಲ್ಲಗಳೆಯುತ್ತದೆ ಎಂಬುದಾಗಿ ನಾನು ನಿರೂಪಿಸಿರುವೆನು.

ಕ್ರೈಸ್ತ ಸಭೆಯು ಯೇಸು ಮಸೀಹಾರಲ್ಲಿ ದೇವತ್ವವನ್ನು ಕಲ್ಪಿಸದೆ, ನಿಜವಾಗಿಯೂ ಅರ್ಹವಾಗಿರುವ ಸ್ಥಾನವನ್ನು ಮಾತ್ರ ಅವರಿಗೆ ನೀಡಿ, ಯಾವ ದಿವ್ಯ ದೌತ್ಯ ನಿರ್ವಹಣಾರ್ಥ ಅವರು ನಿಯೋಗಿಸಲ್ಪಟ್ಟರೋ ಅದನ್ನು ಸಭೆಯು ಸ್ವೀಕರಿಸಿರುತ್ತಿದ್ದರೆ, ಪ್ರವಾದಿ ಮೋಶೆ ಭವಿಷ್ಯ ನುಡಿದಿರುವ ಹಾಗೂ ಯೇಸು ಕ್ರಿಸ್ತರ ಪುನರಾಗಮನಕ್ಕೆ ಮುಂಚಿತವಾಗಿ ಪ್ರತ್ಯಕ್ಷರಾಗುವರೆಂದು ಸಂತ ಪೇತ್ರರು ತಿಳಿಸಿಕೊಟ್ಟಿರುವ ಆ ಮಹಾ ಪ್ರವಾದಿಯನ್ನು ಅವರು ಸ್ವೀಕರಿಸುತ್ತಿದ್ದರು.

ಇನ್ನು ನಾನು, ಇಸ್ಲಾಂ ಧರ್ಮಸ್ಥಾಪಕರಾದ ಹಝ್ರತ್ ಮುಹಮ್ಮದ್ ಪೈಗಂಬರರ ಸತ್ಯತೆಯ ಕುರಿತಾದ ಒಂದು ಪ್ರಧಾನ ಅಂಶವನ್ನು ನಿಮ್ಮ ಮುಂದಿಡ ಬಯಸುತ್ತೇನೆ. ಪವಿತ್ರ ಖುರ್‌ಆನಿನಲ್ಲಿ ಪ್ರಸ್ತಾಪಿಸಲಾದಂತೆ ಆ ಪುಣ್ಯಾತ್ಮರ ವಾದವು ತಾನೊಬ್ಬ ದೈವನಿಯುಕ್ತ ಪ್ರವಾದಿಯಾಗಿರುವೆನೆಂದೂ ಅದೇ ರೀತಿ ಇಸ್ಲಾಂ ಧರ್ಮಸಂದೇಶವನ್ನು ಲೋಕದ ಎಲ್ಲೆಡೆಗೂ ತಲಪಿಸಲು ತಾನು ಆಜ್ಞಾಪಿಸಲ್ಪಟ್ಟಿರುವೆನೆಂದೂ ಆಗಿತ್ತು. ದೇವರು ತನ್ನನ್ನು ಪ್ರವಾದಿಯಾಗಿ ನಿಯೋಗಿಸಿರುವನೆಂದು ವಾದಿಸುವ ಒಬ್ಬ ಪ್ರವಾದಿತ್ವವಾದಿಯ ಸತ್ಯತೆಯನ್ನು ನಾವು ತಿಳಿದುಕೊಳ್ಳಲು ಬೈಬಲ್ ನಿರ್ದೇಶಿಸುವ ಮಾರ್ಗವು ಬಹಳಷ್ಟು ಸುಗಮವಿದೆ. ಆದುದರಿಂದ, ಹಝ್ರತ್ ಮುಹಮ್ಮದರ ಪ್ರವಾದಿತ್ವವಾದದ ಕುರಿತು ಬೈಬಲ್ ಏನು ವಿಧಿಸುತ್ತದೆ ಎಂದು ಪರಿಶೀಲಿಸುವ. ಬೈಬಲಿನ ಧರ್ಮೋಪದೇಶಕಾಂಡ 13ನೇ ಅಧ್ಯಾಯ 1ರಿಂದ 5ರ ವರೆಗಿನ ವಾಕ್ಯಗಳಲ್ಲಿ ಈ ರೀತಿ ಹೇಳಲಾಗಿದೆ:

> "ಯಾವ ಪ್ರವಾದಿಯಾಗಲಿ ಕನಸು ಕಂಡವನಾಗಲಿ ನಿಮ್ಮ ಮಧ್ಯದಲ್ಲಿ ಬಂದು ನಿಮಗೆ ಗೊತ್ತಿಲ್ಲದ ಇತರ ದೇವರುಗಳನ್ನು ಸೂಚನೆ ಮಾಡಿ – ಈ ದೇವತೆಗಳನ್ನು ಅವಲಂಬಿಸಿ ಸೇವಿಸೋಣ ಎಂದಾ ಬೋಧಿಸುತ್ತಾ, ಆ ಬೋಧನೆಯನ್ನು ಸ್ಥಾಪಿಸುವುದಕ್ಕೆ ಒಂದು ಅದ್ಭುತವನ್ನಾಗಲಿ ಮಹತ್ಕಾರ್ಯವನ್ನಾಗಲಿ ತೋರಿಸಿಕೊಡುತ್ತೇನೆಂದು ಹೇಳಲು ಅವನು ಹೇಳಿದಂತೆಯೇ ನಡೆದರೂ ನೀವು ಅವನ ಮಾತಿಗೆ ಕಿವಿಗೊಡಬಾರದು...... ಆ ಪ್ರವಾದಿ ಅಥವಾ ಕನಸು ಕಂಡವನಿಗೆ ಮರಣ ಶಿಕ್ಷೆಯಾಗಬೇಕು. ಯಾಕೆಂದರೆ, ದಾಸ್ಯತ್ವದಲ್ಲಿದ್ದ ನಿಮ್ಮನ್ನು ಬಿಡುಗಡೆ ಮಾಡಿ ಐಗುಪ್ತದೇಶದೊಳಗಿಂದ ನಿಮ್ಮನ್ನು ಕರೆತಂದ ನಿಮ್ಮ ದೇವರಾದ ಯಹೋವನಿಗೆ ವಿರೋಧವಾಗಿ ಅವನು ದ್ರೋಹದ ಮಾತುಗಳನ್ನಾಡಿ ನಿಮ್ಮ ದೇವರಾದ ಯಹೋವನು ಹೇಳಿದ ಮಾರ್ಗದಿಂದ ನಿಮ್ಮನ್ನು ತಪ್ಪಿಸಬೇಕೆಂದಿದ್ದನಲ್ಲಾ."

ಯೆರೆಮೀಯ 14ನೇ ಅಧ್ಯಾಯದ 14ನೇ ವಚನದಲ್ಲಿ ಈ ರೀತಿ ಪ್ರಸ್ತಾಪಿಸಲಾಗಿದೆ:

> "ಆದುದರಿಂದ ನನ್ನ ಅಪ್ಪಣೆಯಿಲ್ಲದೆ ನನ್ನ ಹೆಸರಿನಿಂದ ಪ್ರವಾದಿಸುತ್ತಾ...... ಬೋಧಿಸುವ ಪ್ರವಾದಿಗಳ ವಿಷಯದಲ್ಲಿ ಯಹೋವನಾದ ನಾನು– ಖಡ್ಗದಿಂದಲೂ ಕ್ಷಾಮದಿಂದಲೂ ಈ ಪ್ರವಾದಿಗಳು ನಿರ್ಮೂಲವಾಗುವರು ಎಂದು ಹೇಳುತ್ತೇನೆ."

ಅದರಲ್ಲೇ 28ನೇ ಅಧ್ಯಾಯದ 15–17 ವಚನಗಳಲ್ಲಿ ನಾವು ಈ ರೀತಿ ಕಾಣುತ್ತೇವೆ:

"ಆಗ ಪ್ರವಾದಿಯಾದ ಯೆರೆಮೀಯನು ಪ್ರವಾದಿಯಾದ ಹನನ್ಯನಿಗೆ–ಹನನ್ಯನೇ ಕೇಳು, ಯೆಹೋವನು ನಿನ್ನನ್ನು ಕಳುಹಿಸಲಿಲ್ಲ. ಈ ಜನರು ಸುಳ್ಳನ್ನು ನಂಬುವಂತೆ ಮಾಡುತ್ತೀ; ಆದ ಕಾರಣ ಯೆಹೋವನು ಇಂತೆನ್ನುತ್ತಾನೆ – ಇಗೋ ನಾನು ನಿನ್ನನ್ನು ಭೂಮಿಯ ಮೇಲಿನಿಂದ ತೊಲಗಿಸುವೆನು; ನೀನು ಯೆಹೋವನಾದ ನನಗೆ ವಿರುದ್ಧವಾಗಿ ದ್ರೋಹದ ಮಾತನ್ನು ಆಡಿದ್ದರಿಂದ ಇದೇ ವರುಷ ಸಾಯುವಿ ಎಂದು ಹೇಳಿದನು. ಅದರಂತೆ ಹನನ್ಯನು ಏಳನೆಯ ತಿಂಗಳಲ್ಲಿ ಸತ್ತನು."

ಮತ್ತೂ, ಅಪೊಸ್ತಲರ ಕೃತ್ಯಗಳು 5ನೇ ಅಧ್ಯಾಯ 36 ಮತ್ತು 37ನೇ ವಾಕ್ಯಗಳಲ್ಲಿ ಈ ರೀತಿ ಕಾಣುತ್ತೇವೆ:

"ಇದಕ್ಕಿಂತ ಮುಂಚೆ ಥೈದನು ಎದ್ದು ತಾನು ದೊಡ್ಡ ಮನುಷ್ಯನೆಂದು ಹೇಳಿಕೊಂಡನು. ಅವನ ಪಕ್ಷಕ್ಕೆ ಸುಮಾರು ನಾನೂರು ಜನರು ಸೇರಿಕೊಂಡರು. ಅವನು ಕೊಲ್ಲಲ್ಪಟ್ಟನು. ಮತ್ತು ಅವನನ್ನು ನಂಬಿದವರೆಲ್ಲರೂ ಚದರಿಸಲ್ಪಟ್ಟು ಇಲ್ಲವಾದರು. ಅವನ ತರುವಾಯ ಖಾನೇಷುಮಾರಿಯ ಕಾಲದಲ್ಲಿ ಗಲಿಲಾಯದ ಯೂದನು ಎದ್ದು ಜನರನ್ನು ತನ್ನ ಸಹಿತ ತಿರುಗಿ ಬೀಳುವುದಕ್ಕೆ ಪ್ರೇರೇಪಿಸಿದನು. ಅವನೂ ಹಾಳಾದನು; ಮತ್ತು ಅವನನ್ನು ನಂಬಿದವರೆಲ್ಲರೂ ಚದರಿ ಹೋದರು."

ಮಿತ್ರರೇ, ಇಸ್ಲಾಂ ಧರ್ಮ ಸ್ಥಾಪಕರಾದ ಪವಿತ್ರ ಪ್ರವಾದಿಯು(ಸ) ತನ್ನ ದೌತ್ಯದಲ್ಲಿ ಮಿಥ್ಯಾವಾದಿಯಾಗಿರುತ್ತಿದ್ದರೆ, "ಸತ್ಯವೇದ"ದ ಮೇಲಿನ ವಾಕ್ಯಗಳಲ್ಲಿ ಸುಳ್ಳು ಪ್ರವಾದಿಗಳ ಬಗ್ಗೆ ಹೇಳಲ್ಪಟ್ಟಿರುವ ಪ್ರಕಾರವೇ ಅವರ ಅಂತ್ಯವೂ ಉಂಟಾಗುತ್ತಿತ್ತು. ಆದರೆ, ಸಂಭವಿಸಿದ್ದು ಸರೀ ವಿಪರೀತ. ಅವರು ತನ್ನ ಗುರಿ ತಲಪುವುದರಲ್ಲಿ ಯಶಸ್ವಿಯಾದರು. ಅವರಲ್ಲಿ ಅರ್ಪಿಸಲ್ಪಟ್ಟ ಆ ಮಹತ್ಕಾರ್ಯದ ನಿರ್ವಹಣೆಯಲ್ಲಿ ಪರಮಾತ್ಮನ ಶಕ್ತಿಯುತವಾದ ಕರಗಳು ಅವರಿಗೆ ಬೆಂಬಲವನ್ನು ನೀಡಿದವು. ಅವರನ್ನು ಹಿಂಬಾಲಿಸಿದವರಾಗಿ ಇಂದು ಲೋಕದಲ್ಲಿ ಅನೇಕ ಕೋಟಿ ಜನರನ್ನು ಕಾಣಬಹುದು. ಆದರೆ, ಕಪಟ ಪ್ರವಾದಿತ್ವವನ್ನು ವಾದಿಸಿದವರ ಅನುಯಾಯಿಗಳು ಎಲ್ಲಿದ್ದಾರೆ? ಈ ಬಗ್ಗೆ ಚೆನ್ನಾಗಿ ಯೋಚಿಸಿ ನೋಡಿರೆಂದು ನಾನು ನಿಮ್ಮೊಡನೆ ವಿನಂತಿಸುತ್ತೇನೆ. ಥಾಮಸ್ ಕಾರ್ಲೈಲ್‌ರವರ ಮಾತುಗಳು ಇಲ್ಲಿ ಉಲ್ಲೇಖಾರ್ಹವಾಗಿದೆ. ಅವರು ಈ ರೀತಿ ಹೇಳುತ್ತಾರೆ:

"ಪ್ರಾಮಾಣಿಕತೆ ಅದರ ಸಂಪೂರ್ಣವಾದ ಅರ್ಥದಲ್ಲಿ ಪವಿತ್ರಖುರ್‌ಆನಿನ ಒಂದು ವೈಶಿಷ್ಟ್ಯವೆಂಬಂತೆ ಎದ್ದು ಕಾಣಿಸುತ್ತದೆ. ಕ್ರೈಸ್ತರಲ್ಲಿ ಯಾರೂ ಕೂಡಾ (ಆಧುನಿಕ ಕಾಲದ "ಪ್ಯೂರಿಟನ್ ಪಕ್ಷ" ಬಹುಶಃ ಇದರಿಂದ ಹೊರತಾಗಿರಬಹುದು) ಮುಸ್ಲಿಮರಂತೆ ಪ್ರಾರಂಭದಿಂದಲೂ ಸ್ವಧರ್ಮದಲ್ಲಿ ನೆಲೆಯೂರಿದವರಲ್ಲ. ಮುಸ್ಲಿಮರಾದರೆ, ಅವರ ಧರ್ಮದಲ್ಲಿ ಸಂಪೂರ್ಣವಾಗಿ ನಂಬಿಕೆಯಿಟ್ಟುಕೊಂಡು ಜೊತೆಯಲ್ಲೇ ಅವರು ಕಾಲದ ಏರುಪೇರುಗಳೊಡನೆ ಸಮರ ಹೂಡುತ್ತಿದ್ದಾರೆ.........ಅರೇಬಿಯರು ಅಂಧಕಾರದಿಂದ ಹೊರಬಂದು ಪ್ರಕಾಶವನ್ನು ಕಂಡರು. ಅದರಿಂದ ಮೊತ್ತಮೊದಲಾಗಿ ಅರೇಬಿಯಾ ದೇಶವು ಜೀವಂತವಾಯಿತು. ಲೋಕಾರಂಭದಿಂದಲೂ ಅಲ್ಲಿನ ಮರುಭೂಮಿಗಳಲ್ಲಿ ಅಲೆದಾಡುತ್ತಿದ್ದ ಹಾಗೂ ಹೊರದೇಶದವರಿಗೆ ಅಜ್ಞಾತರಾಗಿದ್ದ ಆ ಬಡ ಕುರುಬರ ಮಧ್ಯೆ ಒಬ್ಬ ವೀರ ಪ್ರವಾದಿಯು ಒಂದು ದಿವ್ಯ ಸಂದೇಶದೊಂದಿಗೆ ಎದ್ದು ನಿಂತರು. ಆ ಸಂದೇಶದ ಸತ್ಯವನ್ನು ಗ್ರಹಿಸಲು ಅವರಿಗೆ ಸಾಧ್ಯವಾಯಿತು. ನೋಡಿರಿ! ಆ ಅಜ್ಞಾತ ಜನರು ಲೋಕದ ಅಪ್ರತಿಮ ನಾಮಧಾರಿಗಳೂ ಅ ಅಲ್ಪರು ಲೋಕದಲ್ಲಿ ಮಹೋನ್ನತರೂ ಆದರು ಒಂದು ಶತಮಾನದೊಳಗೆ ಅರಬಿಯರು ಒಂದು ಕಡೆ ಗ್ರೆನೇಡಾದವರೆಗೂ ಮತ್ತೊಂದು ಕಡೆ ಡೆಲ್ಲಿಯವರೆಗೂ ತಲಪಿದರು. ಧೀರತೆ, ಪ್ರಭಾವ, ಅಸಮಾನ್ಯವಾದ ಮೇಧಾವಿತ್ವ ಮೊದಲಾದ ಉತ್ಕೃಷ್ಟ ಗುಣಗಳಿಂದ ಅಲಂಕೃತರಾಗಿ ಅರಬಿಯರು ಸುದೀರ್ಘವಾದೊಂದು ಕಾಲಾವಧಿಯ ವರಗೂ ಲೋಕದ ಬಹುಪಾಲು ಭಾಗದಲ್ಲಿ ಶೋಭಿಸುತ್ತಿದ್ದರು."

ಈಗ ನಾನು ನಿಮಗೊಂದು ಶುಭವಾರ್ತೆಯನ್ನು ತಿಳಿಸ ಬಯಸುತ್ತೇನೆ. ಅಪಥದಲ್ಲಿ ಚಲಿಸುವ ಲೋಕವನ್ನು

ಪರಮಾತ್ಮನೆಡೆಗಿರುವ ಆ ಏಕ ಸತ್ಯಪಥಕ್ಕೆ ಆಹ್ವಾನಿಸಲು ಕೃಪಾಳುವಾದ ದೇವನು ಈ ಕಾಲದಲ್ಲೂ ಒಬ್ಬ ಪ್ರವಾದಿಯನ್ನು ನಿಯೋಗಿಸಿರುವನು. ತನ್ನ ದಿವ್ಯ ಸಂದೇಶವನ್ನು ಪ್ರವಾದಿಗಳ ಮುಖಾಂತರ ಲೋಕಕ್ಕೆ ತಲಪಿಸಿಕೊಡುವುದು ದೇವರು ಮೊದಲಿನಿಂದಲೂ ರೂಢಿಗೊಳಿಸಿದ ಒಂದು ನಿಯಮವಷ್ಟೆ. ಲೋಕದಲ್ಲಿ ಆಧ್ಯಾತ್ಮಿಕ ಅವನತಿಯು ಉಂಟಾದಾಗಲೆಲ್ಲಾ ಪ್ರವಾದಿಗಳು ನಿಯೋಜಿಸಲ್ಪಟ್ಟಿರುವುದನ್ನು ನಾವು ಕಾಣುತ್ತೇವೆ. ವೈದ್ಯರು ರೋಗಿಗಳನ್ನು ಔಷಧ ಸೇವನೆಯಿಂದ ಗುಣಪಡಿಸುವಂತೆ ಜನ ಸಮೂಹವನ್ನು ಆಧ್ಯಾತ್ಮಿಕ ರೋಗದಿಂದ ಗುಣಪಡಿಸಲು ದೇವರು ತನ್ನ ಪ್ರವಾದಿಗಳನ್ನು ಸ್ವರ್ಗೀಯ ತೀರ್ಥದೊಂದಿಗೆ ಕಳುಹಿಸಿ ಕೊಡುತ್ತಾನೆ. ಇಂದಿನ ಲೋಕಕ್ಕೆ ಆಧ್ಯಾತ್ಮಿಕವಾದೊಂದು ಪರಿವರ್ತನೆಯು ಅನಿವಾರ್ಯವಾಗಿದೆಯೆಂಬುದನ್ನು ಎಲ್ಲರೂ ಒಪ್ಪುತ್ತಾರೆ. ಮನುಷ್ಯರು ಸೃಷ್ಟಿಕರ್ತನಾದ ದೇವರನ್ನು ಮರೆತು ಕೇವಲ ಪ್ರಾಪಂಚಿಕ ವ್ಯವಹಾರಗಳಲ್ಲಿ ಮಾತ್ರ ಮುಳುಗಿ ಹೋಗಿದ್ದಾರೆ. ಆದುದರಿಂದ ಇಂದಿನ ಜನರಿಗೆ ಧರ್ಮವು ಖಂಡಿತವಾಗಿಯೂ ಅತ್ಯಗತ್ಯವಾಗಿದೆ. ಪವಿತ್ರ "ಸತ್ಯವೇದ"ದಲ್ಲಿ ವಿವರಿಸಲಾದ ಭವಿಷ್ಯವಾಣಿಗಳ ಪ್ರಕಾರ ವಾಗ್ದತ್ತ ಮಸೀಹಾ ಅವತರಿಸಬೇಕಾದ ಕಾಲವು ಇದೇ ಆಗಿರುತ್ತದೆ. ಅಂದರೆ, ಮಸೀಹಾರ ಪುನರಾಗಮನದ ಕುರಿತು ಸತ್ಯವೇದದಲ್ಲಿ ಮಾತ್ರವಲ್ಲ ಇತರ ಮತಗ್ರಂಥಗಳಲ್ಲೂ ಕಾಣಲ್ಪಡುವ ಭವಿಷ್ಯವಾಣಿಗಳು ನೆರವೇರಬೇಕಾದುದು ಇದೇ ಕಾಲದಲ್ಲಾಗಿದೆ.

ಅದರಂತೆ, ಆ ಭವಿಷ್ಯವಾಣಿಗಳೆಲ್ಲವೂ ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಅಹ್ಮದ್‌ರವರಲ್ಲಿ ಈಡೇರಿರುತ್ತವೆ. ತನ್ನನ್ನು ದೇವರು ವಾಗ್ದತ್ತ ಮಸೀಹಾ ಆಗಿ ಕಳುಹಿಸಿರುವನೆಂದೂ ಮನುಷ್ಯರನ್ನು ಆಧ್ಯಾತ್ಮ ಮಂಡಲಕ್ಕೆ ಆಹ್ವಾನಿಸಲು ತನಗೆ ಆಜ್ಞಾಪಿಸಲಾಗಿದೆಯೆಂದೂ ಅವರು 1889ರಲ್ಲಿ ಘೋಷಿಸಿದರು. ತನ್ನ ನಿಯೋಗೋದ್ದೇಶದ ಕುರಿತು ಆ ಮಹಾತ್ಮರು ಈ ರೀತಿ ಹೇಳಿದ್ದಾರೆ:

> "ಅನಾದಿಯಿಂದಲೂ ಅಸ್ತಿತ್ವದಲ್ಲಿರುವ, ಪರಿವರ್ತನೆಗೆ ಗುರಿಯಾಗದ, ಪರಮ ಪವಿತ್ರನಾದ ಹಾಗೂ ಕರುಣಾಳುವೂ ನ್ಯಾಯಮೂರ್ತಿಯೂ ಆದ ಪರಮಾತ್ಮನ ಕುರಿತು ಜನರು ಜಾಗೃತರಾಗುವಂತೆ ಮಾಡಲು ಶಾಂತಿಯಿಂದಲೂ ಸಹನೆಯಿಂದಲೂ ವಿನಯದಿಂದಲೂ ಪರಿಶ್ರಮಿಸುವಂತೆ ದೇವರು ನನ್ನೊಡನೆ ಆಜ್ಞಾಪಿಸಿರುವನು. ಅಂಧಕಾರಮಯವಾದ ಈ ಕಾಲಘಟ್ಟದ ಬೆಳಕು ನಾನಾಗಿರುವೆನು. ನನ್ನನ್ನು ಅನುಕರಿಸುವವರು ಕತ್ತಲೆಯಲ್ಲಿ ಚಲಿಸುವವರಿಗೆ ಸಾತಾನ್ ನಿರ್ಮಿಸಿಟ್ಟಿರುವ ಹೊಂಡ-ಗುಂಡಿಗಳಿಂದ ರಕ್ಷಿಸಲ್ಪಡುವರು. ಶಾಂತವಾಗಿಯೂ ಸಹನೆಯಿಂದಲೂ ಲೋಕವನ್ನು ಸತ್ಯದೇವನ ಕಡೆಗೆ ಮಾರ್ಗದರ್ಶನ ಮಾಡಲು ಹಾಗೂ ಇಸ್ಲಾಮಿಕ ಸ್ವಭಾವಗುಣಗಳನ್ನೂ ಸಂಸ್ಕೃತಿಯನ್ನೂ ಮರುಸ್ಥಾಪನೆಗೊಳಿಸಲು ಆ ಸರ್ವಶಕ್ತನು ನನ್ನನ್ನು ನಿಯೋಗಿಸಿದ್ದಾನೆ. ಸತ್ಯಾನ್ವೇಷಕರಿಗೆ ತೃಪ್ತಿ ಬರುವಂತೆ ಅವನು ನನಗೆ ಸ್ವರ್ಗೀಯವಾದ ಸಾಕ್ಷ್ಯಾಧಾರಗಳನ್ನು ನೀಡಿರುವನು. ನನ್ನ ಸತ್ಯತೆಯನ್ನು ದೃಢೀಕರಿಸಲು ಅವನು ತನ್ನ ಅದ್ಭುತ ಕೃತ್ಯಗಳನ್ನು ತೋರಿಸಿಕೊಟ್ಟಿರುವನು. ದಿವ್ಯ ವೇದ ಗ್ರಂಥಗಳಲ್ಲಿ ಉಲ್ಲೇಖಿಸಲಾದಂತೆ ಸತ್ಯವಾದಿಗಳನ್ನು ಗುರುತಿಸಲು ಸಹಾಯಕವಾದಂತಹ ಚಿಹ್ನೆಗಳನ್ನು ಅವನು ನನಗೆ ನೀಡಿರುವನು. ಅಜ್ಞಾತ ಕಾರ್ಯಗಳನ್ನು ದೇವರು ನನಗೆ ತಿಳಿಸಿಕೊಟ್ಟಿರುವನಲ್ಲದೆ ಭವಿಷ್ಯದ ಬಗ್ಗೆ ಸಹ ಅವನು ನನಗೆ ಅರುಹಿದ್ದಾನೆ. ಪಾವನವಾದ ದಿವ್ಯ ಜ್ಞಾನವನ್ನೂ ತತ್ವಸಾರವನ್ನೂ ನನಗವನು ನೀಡಿರುವನು. ಆದುದರಿಂದ, ಸತ್ಯದ ವೈರಿಗಳೂ ಅಂಧಕಾರದಲ್ಲೇ ತೃಪ್ತರಾಗಿರುವ ಆತ್ಮಗಳೂ ಮಾತ್ರವೇ ನನ್ನನ್ನು ವಿರೋಧಿಸಿದವು. ಸಾಧ್ಯವಾದ ಎಲ್ಲಾ ರೀತಿಯಲ್ಲೂ ಮನುಷ್ಯರಿಗೆ ಸಹಾಯವಾಡಬೇಕೆಂಬುದು ನನ್ನ ಉದ್ದೇಶವಾಗಿದೆ. ಅಂತೆಯೇ ಈ ಕಾಲದಲ್ಲಿ ಕ್ರೈಸ್ತ ಜನಾಂಗಕ್ಕೆ ಮಾಡಬೇಕಾದ ಉಪಕಾರವು, ಜನನ–ಮರಣ–ಕಷ್ಟಾನುಭವಗಳೆಂಬ ನ್ಯೂನತೆಗಳಿಂದೆಲ್ಲಾ ಅತೀತನಾಗಿರುವ ಆ ಸತ್ಯದೇವನ ಕಡೆಗೆ ಅವರನ್ನು ಜಾಗೃತಗೊಳಿಸುವುದೇ ಆಗಿರುತ್ತದೆ."

(ಮಸೀಹ್ ಹಿಂದೂಸ್ತಾನ್ ಮೇ; ಪುಟ 11)

ಇನ್ನೊಂದೆಡೆ ಆ ಮಹಾತ್ಮರು ಈ ರೀತಿ ಹೇಳಿದ್ದಾರೆ:

"ಪರಮಾತ್ಮನಿಗೂ ಮನುಷ್ಯರಿಗೂ ಮಧ್ಯೆ ಉಂಟಾಗಿರುವ ಸಂಪರ್ಕಲೋಪವನ್ನು ನಿವಾರಿಸಿ ಸ್ನೇಹ ಮತ್ತು ಆತ್ಮೀಯತೆಯಿಂದ ಕೂಡಿದ ಒಂದು ಸಂಬಂ

ಥವನ್ನು ಮರುಸ್ಥಾಪನೆಗೊಳಿಸಲಿಕ್ಕೂ ಪಾರಮಾರ್ಥಿಕ ಸತ್ಯಗಳನ್ನು ಪ್ರಕಾಶಗೊಳಿಸುವುದರ ಮೂಲಕ ಮಾತಕಲಹಗಳನ್ನು ಕೊನೆಗೊಳಿಸಿ ಮೈತ್ರಿ ಮತ್ತು ಸೌಹಾರ್ದಮಯ ವಾತಾವರಣದ ನಿರ್ಮಾಣಕ್ಕೆ ಬುನಾದಿಯನ್ನು ಹಾಕಲಿಕ್ಕೂ ಲೋಕದಿಂದ ಕಣ್ಮರೆಯಾಗಿರುವ ಧಾರ್ಮಿಕ ಮೌಲ್ಯಗಳನ್ನು ಪುನಃ ಸ್ಥಾಪಿಸಲಿಕ್ಕೂ ಇಂದ್ರಿಯೇಚ್ಛೆಗಳೆಂಬ ಅಂಧಕಾರದಲ್ಲಿ ಅದುಮಿ ಹೋಗಿರುವ ಆಧ್ಯಾತ್ಮ ಶಕ್ತಿಗಳ ಜೀವನ ಮಾದರಿಯನ್ನು ತೋರಿಸಿ ಕೊಡಲಿಕ್ಕೂ ಮನುಷ್ಯರ ಅಂತಃಕರಣದಲ್ಲಿ ಪಸರಿಸಿರುವ ಹಾಗೂ ಅವರ ಧ್ಯಾನ ಅಥವಾ ಪ್ರಾರ್ಥನೆಗಳ ಮೂಲಕ ಪ್ರತ್ಯಕ್ಷವಾಗುವಂತಹ ದೈವಿಕ ಶಕ್ತಿ ಸ್ವರೂಪವನ್ನು, ಕೇವಲ ಮಾತುಗಳಿಂದಲ್ಲ– ಸ್ವಂತ ಜೀವನ ಮಾದರಿಯಿಂದ ವಿವರಿಸಿಕೊಡಲಿಕ್ಕೂ ಎಲ್ಲಕ್ಕಿಂತಲೂ ಮಿಗಿಲಾಗಿ, ಲೋಕದಿಂದ ಮರೆಯಾಗಿರುವ, ಶಿರ್ಕ್‌ನ (ದೇವರಿಗೆ ಸಮಾನತೆ ಕಲ್ಪಿಸುವುದು) ಛಾಯೆಯಿಂದ ಸಂಪೂರ್ಣ ಮುಕ್ತವಾಗಿ ಎಲ್ಲಾ ವಿಧ ಲೋಪದೋಷಗಳಿಂದಲೂ ಪರಿಶುದ್ಧವಾಗಿ ಶೋಭಿಸುವ, ಪಾವನವಾದ ಏಕದೈವ ವಿಶ್ವಾಸವನ್ನು (ತೌಹೀದ್) ಜನರೆಡೆಯಲ್ಲಿ ನೆಲೆಗೊಳಿಸಲಿಕ್ಕೂ ಸರ್ವಲೋಕ ಪಾಲಕನಾದ ಆ ದೇವರು ನನ್ನನ್ನು ನಿಯೋಗಿಸಿರುವನು. ಇವೆಲ್ಲವೂ ನನ್ನ ಶಕ್ತಿ ಸಾಮರ್ಥ್ಯಗಳಿಂದಲ್ಲ, ಆಕಾಶ ಭೂಮಿಗಳ ಒಡೆಯನಾದ ಆ ದೇವರ ಶಕ್ತಿ ಸಾಮರ್ಥ್ಯಗಳಿಂದಷ್ಟೇ ಉಂಟಾಗುವುದು." (ಲೆಕ್ಚರ್ ಇಸ್ಲಾಂ : ಪುಟ 34)

ಇದು ನಿಜಕ್ಕೂ ಅದ್ಭುತಕರವಾದೊಂದು ಸಂದೇಶವಲ್ಲವೇ ? ಒಂದು ಆಧ್ಯಾತ್ಮಿಕ ಪರಿವರ್ತನೆಯ ಆವಶ್ಯಕತೆಯನ್ನು ಇಂದಿನ ಲೋಕವು ಕೂಗಿ ಹೇಳುತ್ತಿದ್ದು ಕ್ರೈಸ್ತ ಜನಾಂಗವು ಮಸೀಹಾರ ಎರಡನೆಯ ಬರುವಿಕೆಯನ್ನು ಆತುರದಿಂದ ಕಾಯುತ್ತಲೂ ಇದೆ. ಅಂತಹ ಈ ಕಾಲಘಟ್ಟವನ್ನೇ ದೇವರು ವಾಗ್ದತ್ತ ಮಸೀಹಾರ ಅವತಾರ ಕಾಲವಾಗಿ ನಿಶ್ಚಯಿಸಿದನು. ಸರ್ವಶಕ್ತನಾದ ಆ ಪರಮಾತ್ಮನು ಅಸಾಮಾನ್ಯವಾದ ದೃಷ್ಟಾಂತಗಳ ಮೂಲಕ ಈ ಆಗಮಿಸಿರುವ ಮಸೀಹಾರ ಸತ್ಯತೆಯನ್ನು ಸಾಬೀತುಪಡಿಸಿರುವನು. ಅವರ ವಾದವು, ಅಂದು ಸ್ನಾನಿಕನಾದ ಯೋಹಾನನು ಎಲೀಯನ "ಗುಣ ಶಕ್ತಿಗಳಿಂದ ಕೂಡಿದವನಾಗಿ" ಬಂದಿದ್ದ ಹಾಗೆ, ತಾನು ಯೇಸು ಮಸೀಹಾರ ಗುಣ ಶಕ್ತಿಗಳಿಂದ ಕೂಡಿದವನಾಗಿ ಆಗಮಿಸಿರುವೆನು ಎಂದಾಗಿದೆ. ಎಲೀಯ ಪ್ರವಾದಿಯು ಶರೀರದೊಂದಿಗೆ ಆಕಾಶಕ್ಕೆ ಏರಿ ಹೋದನೆಂಬುದಾಗಿ ಬೈಬಲ್ ಹೇಳುತ್ತಿರುವುದನ್ನು ನೀವು ಗಮನಿಸಿರಬೇಕು. ಉದಾಹರಣೆಗೆ– 2ನೇ ಅರಸುಗಳು 2 : 11ರಲ್ಲಿ "ಎಲೀಯನು ಸುಳಿಗಾಳಿಯ ಮುಖಾಂತರವಾಗಿ ಪರಲೋಕಕ್ಕೆ ಹೋದನು" ಎಂಬುದಾಗಿ ಬರೆದಿದೆ. ಇದಕ್ಕೆ ಅಕ್ಷರಾರ್ಥ ಕಲ್ಪಿಸಿದ ಯೆಹೂದ್ಯರ ವಿಶ್ವಾಸ ಪ್ರಕಾರ ಮಸೀಹಾರ (ಯೇಸು ಕ್ರಿಸ್ತರ) ಆಗಮನದ ಮೊದಲು ಆಕಾಶದಿಂದ ಎಲೀಯ ಭೂಮಿಗೆ ವಾಪಸು ಬರಬೇಕಾಗಿತ್ತು, ಆಕಾಶದಿಂದ ಎಲೀಯನ ಆಗಮನವಾಗದೆ ಇದ್ದುದರಿಂದ ಯೇಸು ಮಸೀಹಾರ ದೌತ್ಯವನ್ನು ಯಹೂದ್ಯರು ನಿರಾಕರಿಸಿ ಬಿಟ್ಟರು! ಯಾಕೆಂದರೆ, ಬೈಬಲಿನಲ್ಲಿ ಬಹಳ ಸ್ಪಷ್ಟವಾಗಿ ಹೇಳಲಾಗಿದೆ – "ಯಹೋವನ ಆಗಮನದ ಭಯಂಕರವಾದ ಮಹಾದಿನವು ಬರುವದಕ್ಕೆ ಮುಂಚೆಯೇ ಪ್ರವಾದಿಯಾದ ಎಲೀಯನನ್ನು ನಿಮ್ಮ ಬಳಿಗೆ ಕಳುಹಿಸುವೆನು." (ಮಲಾಕಿಯ 4 : 5).

ಆದರೆ! ಪ್ರವಾದಿಯಾದ ಎಲೀಯ (ಇಲ್ಯಾಸ್) ಸ್ವಶರೀರದೊಂದಿಗೆ ಆಕಾಶಕ್ಕೇರಿರುವರೆಂದೂ ಅವರೇ ಪುನಃ ದೇಹಸಹಿತ ಆಕಾಶದಿಂದ ಇಳಿದು ಬರುವರೆಂದೂ ನಂಬಿದ್ದ ಯಹೂದ್ಯರ ವಿಶ್ವಾಸವು ಕೇವಲ ಅಬದ್ಧವಾಗಿತ್ತು! ಮೇಲಿನ ಸತ್ಯವೇದದ ವಾಕ್ಯಗಳು ಎಲೀಯ ಸ್ವಶರೀರದೊಂದಿಗೆ ಆಕಾಶದಿಂದ ಇಳಿದುಬರುವುದರ ಮೂಲಕ ಪೂರ್ತಿಯಾಗಬೇಕಾದುದಲ್ಲ. ಅದು, ಎಲೀಯ ಪ್ರವಾದಿಯ "ಗುಣ ಶಕ್ತಿಗಳಿಂದ ಕೂಡಿದ" ಮತ್ತೊಬ್ಬ ಪ್ರವಾದಿಯ ಕುರಿತು ಭವಿಷ್ಯವಾಣಿಯಾಗಿತ್ತು. ಹಾಗೆಯೇ ಆ ಭವಿಷ್ಯವಾಣಿಯು ಸ್ನಾನಿಕನಾದ ಯೋಹಾನನ (ಯಹ್ಯಾ) ಬರುವಿಕೆಯೊಂದಿಗೆ ಪೂರ್ತಿಯಾಯಿತು ಎಂಬುದನ್ನು ನಾವು ಬೈಬಲಿನ ಲೂಕ 1:17ರಲ್ಲಿ ಓದುತ್ತೇವೆ. ಕರ್ತನ ದೂತ ಜಕರೀಯ ಪ್ರವಾದಿಗೆ ಪ್ರತ್ಯಕ್ಷಪಟ್ಟು ಹೇಳಿದ ಮಾತುಗಳಿವು– "ಅವನು (ಯೋಹಾನನು) ಆತನ ಮುಂದೆ ಹೋಗಿ ಎಲೀಯನ ಗುಣ ಶಕ್ತಿಗಳಿಂದ ಕೂಡಿದವನಾಗಿ ತಂದೆಗಳ ಹೃದಯವನ್ನು ಮಕ್ಕಳ ಕಡೆಗೂ ಹಟಹಿಡಿದವರನ್ನು ನೀತಿವಂತರ ಜ್ಞಾನದ ಕಡೆಗೂ ತಿರುಗಿಸಿ ಸಿದ್ಧವಾದ ಜನವನ್ನು ಕರ್ತನಿಗೆ ಒದಗಿಸುವನು." (ಲೂಕ 1:17).

ಪ್ರಿಯರೇ, ಇದೇ ರೀತಿಯಲ್ಲಿ ಯೇಸು ಮಸೀಹಾರ ಪುನರಾಗಮನದ ಕುರಿತ ಪ್ರವಾದನವು ತನ್ನ ಆಗಮನ ದೊಂದಿಗೆ ಪೂರ್ತಿಯಾಗಿರುವುದಾಗಿ ವಾಗ್ದತ್ತ ಮಸೀಹಾ ಹಝ್ರತ್ ಅಹ್ಮದ್‌ರವರು ಘೋಷಿಸಿದರು. ಪೂರ್ವ ಮಸೀಹಾರೇ ಪಾರ್ಥಿವ ಶರೀರದೊಂದಿಗೆ ಆಕಾಶದಿಂದ ಬರುವರೆಂದು ಕ್ರೈಸ್ತ ಜನಾಂಗವು ನಂಬುವುದಿದ್ದರೆ ಅದು, ಎಲೀಯ ಪ್ರವಾದಿಯು ಶರೀರಗೊಂದಿಗೆ ಆಕಾಶದಿಂದ ಇಳಿದು ಬರುವರೆಂಬುದಾಗಿ ಯಹೂದ್ಯರು ನಂಬಿದಂತಹ ಒಂದು ಮಿಥ್ಯಾ ವಿಶ್ವಾಸವಾಗಿದೆ ಎಂದು ಅವರು ಕ್ರೈಸ್ತರಿಗೆ ಬೋಧಿಸಿದರು. ಮಾತ್ರವಲ್ಲ, ಯೇಸು ಮಸೀಹಾರು ಕೂಡಾ ತನ್ನ ನಾಮದಲ್ಲಿ ಇನ್ನೊಬ್ಬರ ಬರುವಿಕೆಯನ್ನು ಸೂಚಿಸಿ ಕೊಟ್ಟಿರುವರು. ಯೇಸು ಹೇಳುತ್ತಾರೆ: "ಕರ್ತನ ಹೆಸರಿನಲ್ಲಿ ಬರುವವನಿಗೆ ಆಶೀರ್ವಾದ ಎಂದು ನೀವು ಹೇಳುವ ತನಕ ನೀವು ನನ್ನನ್ನು ನೋಡುವುದೇ ಇಲ್ಲವೆಂದು ನಿಮಗೆ ಹೇಳುತ್ತೇನೆ." (ಮತ್ತಾಯ 23:39)

ಈ ವಾಕ್ಯದ ಸ್ಪಷ್ಟವಾದ ಅರ್ಥವು ಯೇಸು ಮಸೀಹಾರ ನಾಮದಲ್ಲಿ ಮತ್ತೊಬ್ಬರ ಅವತಾರವುಂಟಾಗುವುದು ಎಂದಾಗಿದೆ. ಅವರೇ ಸ್ವಯಂ ಶರೀರದೊಂದಿಗೆ ಆಕಾಶದಿಂದ ಇಳಿದು ಬರುವರೆಂದು ಕಾದು ಕುಳಿತವರ ನಿರೀಕ್ಷೆಯು ನಿಷ್ಫಲವಾಗಿದೆ. ಆದುದರಿಂದ ವಾಗ್ದತ್ತ ಮಸೀಹಾ ಆಗಿ ಅವತರಿಸಿರುವ ಆ ಮಹಾ ಪುರುಷರ ಆಮಂತ್ರಣದ ಕಡೆಗೆ ಗಮನ ಹರಿಸುವಂತೆಯೂ ಅದನ್ನು ತಿರಸ್ಕರಿಸಿ ಬಿಡದಂತೆಯೂ ನಿಮ್ಮೆಲ್ಲರೊಡನೆ ನಾನು ಹೃತ್ಪೂರ್ವಕವಾಗಿ ಅಪೇಕ್ಷಿಸುತ್ತೇನೆ. ಭೂಮಿಯಲ್ಲಿರುವ ಎಲ್ಲಾ ಜೀವಾತ್ಮಗಳಿಗೋಸ್ಕರವಾಗಿ ಒಂದು ಶಾಂತಿ ಸಂದೇಶದೊಂದಿಗೆ, ಶ್ರೇಷ್ಠರಾದ ಈ ವಾಗ್ದತ್ತ ಮಸೀಹಾ ಆಗಮಿಸಿದ್ದಾರೆ. ಅವರ ಸತ್ಯತೆಯ ಬಗ್ಗೆ ಯಾವುದೇ ಸಂದೇಹಕ್ಕೂ ಅವಕಾಶ ವಿಲ್ಲ. ತನ್ನ ಸತ್ಯತೆಯ ಕುರಿತು ಸಂಶಯಗೊಂಡು ತನ್ನನ್ನು ಸ್ವೀಕರಿಸದೆ ಇರುವವರನ್ನು ತನ್ನೊಡನೆ ಒಂದು ಆಧ್ಯಾತ್ಮಿಕ ಸಮರಕ್ಕಾಗಿ ಅವರು ಆಹ್ವಾನಿಸಿದರು. ಅವರು 1908ರಲ್ಲಿ ದಿವಂಗತರಾದರೂ ಕೂಡಾ ಈಗಲೂ ಸದರಿ ಆಹ್ವಾನವು ಜಾರಿಯಲ್ಲಿದೆ. ವೇಲ್ಸ್ ರಾಜಕುಮಾರ (Prince of Wales) 1922ರಲ್ಲಿ ಭಾರತವನ್ನು ಸಂದರ್ಶಿಸಿದಾಗ ಅವರಿಗೆ ವಾಗ್ದತ್ತ ಮಸೀಹಾರ ಎರಡನೆಯ ಖಲೀಫ (ಪ್ರತಿ ಪುರುಷ) ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹಮೂದ್ ಅಹ್ಮದ್ ನೀಡಿದ ಒಂದು ಸಂದೇಶದಲ್ಲಿ ವಿವರಿಸಲಾದ ಆಹ್ವಾನವನ್ನು ನಾನಿಲ್ಲಿ ಸೇರಿಸಿಕೊಳ್ಳುತ್ತೇನೆ. ಯುವರಾಜನನ್ನು ಸಂಬೋಧಿಸಿ ಅವರು ಈ ರೀತಿ ಹೇಳಿದರು :

"ಎಲೈ ಬಹುಮಾನ್ಯ ರಾಜಕುಮಾರ, ಮೇಲೆ ವಿವರಿಸಿದ ದೃಷ್ಟಾಂತಗಳಿಗೂ ಸಾಕ್ಷ್ಯಾಧಾರಗಳಿಗೂ ಹೊರತಾಗಿ, ದೇವರ ಸ್ನೇಹಾದರಗಳನ್ನು ತಿಳಿದುಕೊಳ್ಳಲಿಕ್ಕಾಗಿ ಮತ್ತೊಂದು ಸರಳವಾದ ದೃಷ್ಟಾಂತದ ಆವಶ್ಯಕತೆಯೂ ಇದೆಯೆಂದು ತಾವು ತಿಳಿಯುವುದಿದ್ದಲ್ಲಿ, ಕಠಿಣವಾದ ಕೆಲವು ಕಾರ್ಯಗಳಿಗಾಗಿ ದೇವರೊಡನೆ ಪ್ರಾರ್ಥಿಸುವಂತೆ, ತಮಗಿರುವ ಪ್ರಭಾವವನ್ನು ಬೀರಿ, ಪಾದ್ರಿಗಳನ್ನು ತಾವು ಪ್ರೇರೇಪಿಸಬೇಕಾಗಿ ನಾನು ಅಪೇಕ್ಷಿಸುತ್ತೇನೆ. ಅದೇ ರೀತಿಯ ವೈಷಮ್ಯದ ಕಾರ್ಯಗಳಿಗಾಗಿ ಅಹ್ಮದಿಯಾ ಸಂಘವೂ ದೇವರೊಡನೆ ಪ್ರಾರ್ಥಿಸುವುದು. ಉದಾಹರಣೆಗೆ ಭೀಕರ ವ್ಯಾಧಿಯಿಂದ ಪೀಡಿತರಾದ ಕೆಲವು ರೋಗಿಗಳನ್ನು ಎರಡು ವಿಭಾಗದವರೂ ಚೀಟಿ ಹಾಕಿ ಸಮನಾಗಿ ಹಂಚಿಕೊಂಡು, ಅವರವರ ಪಾಲಿಗೆ ಬರುವ ರೋಗಿಗಳ ಸೌಖ್ಯಕ್ಕಾಗಿ ಎರಡು ವಿಭಾಗದವರೂ ದೇವರೊಡನೆ ಪ್ರಾರ್ಥಿಸಲಿ. ಆಗ, ಯಾರ ಪ್ರಾರ್ಥನೆಯನ್ನು ದೇವರು ಸ್ವೀಕರಿಸುವನೆಂದೂ ಯಾರಿಗೆ ದಿವ್ಯ ಕವಾಟವು ಮುಚ್ಚಲ್ಪಟ್ಟಿದೆಯೆಂದೂ ತಮಗೆ ಕಾಣಲು ಸಾಧ್ಯವಾಗುವುದು. ಆದರೆ, ಇದಕ್ಕೆ ಪಾದ್ರಿಗಳು ತಯಾರಿಲ್ಲವಾದರೆ–ಖಂಡಿತವಾಗಿಯೂ ಅವರು ಇದಕ್ಕೆ ಒಪ್ಪಲಾರರು, ದೈವಾನುಗ್ರಹವು ತಮ್ಮಿಂದ ದೂರ ಸರಿದಿದೆಯೆಂದು ಅವರಿಗೆ ಚೆನ್ನಾಗಿ ತಿಳಿದಿದೆ– ಎಲೈ ರಾಜಕುಮಾರ, ಹಾಗಿದ್ದರೆ, ದೇವರು ಕ್ರೈಸ್ತ ಮತವನ್ನು ಕೈಬಿಟ್ಟಿರುವನೆಂದೂ ಇಸ್ಲಾಂ ಧರ್ಮವನ್ನು ಆಶೀರ್ವದಿಸಿರುವನೆಂದೂ ತಾವು ತಿಳಿದು ಕೊಳ್ಳಬೇಕಾಗಿದೆ." (A Present to the Prince of Wales).

ನನ್ನ ಈ ಸಂದೇಶವನ್ನು ಸಮಾಪ್ತಿಗೊಳಿಸುವ ಮೊದಲು, ನೀವು ಈ ವಿಷಯದಲ್ಲಿ ಗಂಭೀರವಾಗಿ ಆಲೋಚಿಸಿ ನೋಡಬೇಕೆಂದು ನಾನು ನಿಮ್ಮೆಲ್ಲರೊಡನೆಯೂ ಸ್ನೇಹಪೂರ್ವಕವಾಗಿ ವಿನಂತಿಸಿಕೊಳ್ಳುತ್ತೇನೆ.

★

# ಹಜ್ಜ್‌ಕರ್ಮದ ಮಹತ್ವ

★ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್

ಹಜ್ಜ್ ಇಸ್ಲಾಮಿನ ಅತಿ ಪ್ರಧಾನವಾದೊಂದು ಆರಾಧನಾಕರ್ಮವಾಗಿದೆ. ಲಕ್ಷಗಟ್ಟಲೆ ಮುಸ್ಲಿಮರು ಲೋಕದ ನಾನಾ ಕಡೆಗಳಿಂದ ಬಂದು ಹಜ್ಜ್ ವೇಳೆಯಲ್ಲಿ ಪವಿತ್ರ ಮಕ್ಕಾದಲ್ಲಿ ಒಟ್ಟುಗೂಡುತ್ತಾರೆ. ಅವರು ವಿವಿಧ ರಾಜ್ಯದವರೂ ವಿವಿಧ ರಾಷ್ಟ್ರಗಳಿಂದ ಬಂದವರೂ ವಿವಿಧ ಆಚಾರ ಸಂಪ್ರದಾಯಗಳನ್ನು ಕೈಗೊಂಡವರೂ ವಿವಿಧ ಭಾಷೆಗಳನ್ನಾಡುವವರೂ ಪರಸ್ಪರ ಪರಿಚಯವಿಲ್ಲದವರೂ ಆಗಿರಬಹುದು. ಭಾಷೆಯ ವ್ಯತ್ಯಾಸವಾಗಲಿ ವಿಶ್ವಾಸಪರವಾದ ಭಿನ್ನತೆಯಾಗಲಿ ವರ್ಣ ವರ್ಗ ಭೇದವಾಗಲಿ ವೈಚಾರಿಕ ಅಂತರವಾಗಲಿ ಕಾಲಾವಸ್ಥೆಯ ಏರುಪೇರಾಗಲಿ ಯಾವುದನ್ನೂ ಗಣ್ಯ ಮಾಡದ ರೀತಿಯಲ್ಲಿ ಮುಸಲ್ಮಾನರ ಹೃದಯಗಳನ್ನು ಏಕದೇವತತ್ವ ಐಕ್ಯಗೊಳಿಸಿದೆಯೆಂದೂ ದೇವನ ಕರೆಗೆ ಓಗೊಟ್ಟು ಯಾವುದೇ ತ್ಯಾಗಕ್ಕೂ ಸನ್ನದ್ಧರಾಗಿ ತಾವು ಒಂದು ಕಡೆಯಲ್ಲಿ ಸಮ್ಮೇಳಿಸಿರುತ್ತೇವೆಂದೂ ಅವರು ಆ ಮೂಲಕ ಘೋಷಿಸುತ್ತಾರೆ. ಅದೇ ಪ್ರಕಾರ ಮುಸ್ಲಿಮರು ತಮ್ಮ ಈ ಪ್ರವರ್ತನೆ ಮುಖಾಂತರ ಬಾಹ್ಯವಾದ ಹಜ್ಜ್‌ಕರ್ಮ ಅಲ್ಲದೆ ಬೇರೊಂದು ವಿಚಾರ ಸಹ ಬಹಿರಂಗಪಡಿಸುತ್ತಾರೆ. ಅದೇನೆಂದರೆ, ಕಅಬಾ ದೇವ ಮಂದಿರದ ಸಂರಕ್ಷಣೆಗಾಗಿ ತಾವು ಜೀವಾರ್ಪಣೆಮಾಡಲು ಸನ್ನದ್ಧರೆಂದು. ಮುಸ್ಲಿಮರಲ್ಲಿ ಈ ಚೇತನ ಎಷ್ಟರ ವರೆಗೆ ಬಾಕಿಯಿರುವುದೋ ಅಷ್ಟರ ತನಕ ಲೋಕದಲ್ಲಿ ಯಾವ ಶತ್ರುವಿಗೂ ಕಅಬದ ಮೇಲೆ ಕಣ್ಣಿಡಲಿಕ್ಕಾಗಲಿ ಮುಸಲ್ಮಾನರ ಐಕ್ಯವನ್ನು ಶಿಥಿಲೀಕರಿಸಕ್ಕಾಗಲಿ ಸಾಧ್ಯವಾಗದು. ಕಅಬ ನೆಲೆಗೊಂಡಿರುವ ಕಾಲದ ವರೆಗೆ ಮುಸ್ಲಿಂ ಲೋಕದ ಐಕ್ಯವೂ ಬಾಕಿಯುಳಿದೀತು. ಜಗತ್ತಿನ ಯಾವ್ಯಾವ ಭಾಗಗಳಲ್ಲಿ ದೇವರು ಮನುಷ್ಯರನ್ನು ಹರಡಿಸಿದ್ದಾನೆಂದು ಹಜ್ಜ್ ಮೂಲಕ ಲೋಕಕ್ಕೆ ಕಾಣಲು ಸಾಧ್ಯವಾಗುತ್ತದೆ. ವಿಜನವಾದ ಒಂದು ಮರುಭೂಮಿಯಿಂದ ಎದ್ದ ಆ ಇಸ್ಲಾಮಿಕ ಶಬ್ದ, ಸ್ವಜನರೇ ಅದನ್ನು ಕೇಳಲು ಸಿದ್ಧರಿಲ್ಲದಿದ್ದರೂ ಆ ಶಬ್ದವನ್ನು ಎತ್ತಿದ ವ್ಯಕ್ತಿಗೆ ಎಲ್ಲಾ ತರ ಕಷ್ಟಾನುಭವಗಳನ್ನು ಸಹಿಸಬೇಕಾಗಿ ಬಂದಿದ್ದರೂ, ಪ್ರಪಂಚದ ಎಲ್ಲಾ ಭಾಗಗಳಲ್ಲೂ ಪ್ರತಿಧ್ವನಿಸಿ ಲಕ್ಷಗಟ್ಟಲೆ ಜನರು ಸಮ್ಮೇಳಿಸಲಿಕ್ಕೆ ಹೇತುವಾಯಿತು. ಅವರು ಅಲ್ಲಾಹನ ಅತಿ ಮಹತ್ವಾದ ಒಂದು ದೃಷ್ಟಾಂತಕ್ಕೆ ದೃಕ್‌ಸಾಕ್ಷಿಗಳಾಗಿದ್ದು ಅದು ಅವರ ಸತ್ಯ ವಿಶ್ವಾಸವನ್ನು ದೃಢಪಡಿಸಿ ನವಚೈತನ್ಯವನ್ನು ನೀಡುತ್ತದೆ. ಮುಹಮ್ಮದ್ ಮುಸ್ತಫಾ (ಸ.) ಎಲ್ಲಿ ಭೂಜಾತರಾದರೋ, ಲೋಕದಲ್ಲೆಲ್ಲಾ ಪ್ರತಿಧ್ವನಿಯ ಅಲೆಯೆಬ್ಬಿಸಿದ ಆ ಶಬ್ದ ಎಲ್ಲಿ ಮೊಳಗಿತೋ, ಆ ಸ್ಥಳಕ್ಕೆ ವಿದೂರ ವಿದೂರ ದೇಶಗಳಿಂದ ಲಕ್ಷಾನುಲಕ್ಷ ಜನರು ಆಕರ್ಷಿಸಲ್ಪಡುತ್ತಾರೆ. ಯಾವ ಪ್ರದೇಶದಲ್ಲಿ ಜನರ ದೌರ್ಜನ್ಯ ಮತ್ತು ಅತ್ಯಾಚಾರ ನಿಮಿತ್ತ ಮುಸ್ಲಿಮರಿಗೆ ತಮ್ಮ ತಾಯಿನಾಡು ಪರಿತ್ಯಜಿಸಬೇಕಾಯಿತೋ, ಎಲ್ಲಿ "ಲಾ ಇಲಾಹ ಇಲ್ಲಲ್ಲಾಹ್" ಎಂಬ ಧ್ವನಿ ಮೊಳಸುವರೆ ಅನುಮತಿ ಇರಲಿಲ್ಲವೋ ಅದೇ ಮಕ್ಕಾ ನಗರದಲ್ಲಿ ಜನರು ಗುಂಪು ಗುಂಪಾಗಿ ಸಮ್ಮೇಳಿಸಿ ಪ್ರತಿಯೊಬ್ಬನ ನಾಲಗೆಯಿಂದ "ಅಲ್ಲಾಹು ಅಕ್‌ಬರ್, ಅಲ್ಲಾಹು ಅಕ್‌ಬರ್, ಲಾ ಇಲಾಹ ಇಲ್ಲಲ್ಲಾಹು ಅಲ್ಲಾಹು ಅಕ್‌ಬರ್, ಅಲ್ಲಾಹು ಅಕ್‌ಬರ್ ವಲಿಲ್ಲಾಹಿಲ್ ಹಮ್ದ್" ಮತ್ತು "ಲಬ್ಬೈಕ ಅಲ್ಲಾಹುಮ್ಮ ಲಬ್ಬೈಕ" ಎಂಬ ಶಬ್ದಗಳು ಹೊರಟು ಮುಗಿಲು ಮುಟ್ಟುತ್ತವೆ. ಅಲ್ಲಾಹನ ಮುಂದೆ ಸನ್ನದ್ಧರಾಗಿ ಅವರು ಈ ರೀತಿ ಹೇಳುವಂತೆ ತೋಚುವುದು: "ಓ ನಮ್ಮ ರಕ್ಷಕನೇ, ನಾವಿದೋ ನಿನ್ನ ಮುಂದೆ ಹಾಜರಾಗಿದ್ದೇವೆ. ನಿನಗೆ ಸಮಾನ ಯಾರೂ ಇಲ್ಲವೆಂದು ನಾವು ಸಾರುತ್ತೇವೆ. ದಾಸರನ್ನು ಕರೆದು ಒಂದುಗೂಡಿಸುವ ಅಧಿಕಾರ ನಿನಗೆ ಮಾತ್ರವೇ ಇದೆ."

ಪ್ರತಿ ವರ್ಷ ಲಕ್ಷೋಪಲಕ್ಷ ಮುಸ್ಲಿಮರು ಸಮ್ಮೇಳಿಸುವ ಪವಿತ್ರ ಕ್ಷೇತ್ರವಾಗಿದೆ ಮಕ್ಕ. ಪ್ರವಾದಿ ಮುಹಮ್ಮದ್ (ಸ.) ತಂದ ಧರ್ಮ ಇಂದು ಸಹ ಜೀವಂತವಿದೆಯೆಂದು ಅವರು ಆ ಮೂಲಕ ಸಾಕ್ಷ್ಯಪಡಿಸುತ್ತಾರೆ. ಪೈಗಂಬರರ ದಾಸವೃಂದವು ಇಂದು ಸಹ ಆ ಶಬ್ದವನ್ನು ಎತ್ತರಿಸಲು ಬದುಕಿರುತ್ತದೆ. ಇಸ್ಲಾಮಿನ ಸಿರಗಳಲ್ಲಿ ಜೀವರಕ್ತ ಇಂದು ಕೂಡ ಹರಿಯುತ್ತಿದೆಯೆಂದಾಗಿದೆ ಲೋಕಕ್ಕೆ ಹಜ್ಜ್ ನೀಡುವ ಸಂದೇಶ. ಪ್ರವಾದಿ ಮುಹಮ್ಮದ್ (ಸ.) ರವರ ಮೇಲೆ ಪ್ರೀತಿಯಿರುವ ಜನರು ಇಸ್ಲಾಮಿಕ ಕೇಂದ್ರವಾದ ಪವಿತ್ರ ಮಕ್ಕದಲ್ಲಿ ಒಟ್ಟುಗೂಡುತ್ತಾರೆ. ಇಸ್ಲಾಂ ಧರ್ಮದೊಡನೆ ಮತ್ತು ಮುಹಮ್ಮದ್ ಪೈಗಂಬರರ ವ್ಯಕ್ತಿತ್ವದೊಡನೆ ತಮಗಿರುವ ಸಂಬಂಧವನ್ನು ಅವರು ಆ ಮೂಲಕ ಬಹಿರಂಗಪಡಿಸುತ್ತಾರೆ. ತಾವೆಷ್ಟು ದುರ್ಬಲರಾಗಿದ್ದರೂ ಮುಹಮ್ಮದ್ ಪೈಗಂಬರರ ಹೆಸರಿನಲ್ಲಿ ಅಭಿಮಾನಪಡುವವರೆಂದೂ ಸಾಮುದಾಯಿಕ ಜೀವಿತದ ಚೈತನ್ಯ ತಮ್ಮಲ್ಲಿ ಇಂದು ಸಹ ನೆಲೆಗೊಂಡಿರುತ್ತದೆಂದೂ ಅವರು ಆ ಮೂಲಕ ಸ್ಪಷ್ಟಪಡಿಸುತ್ತಾರೆ. ಆದ್ದರಿಂದಲೇ ಇಸ್ಲಾಂ ಧರ್ಮವು ಪ್ರಾರ್ಥನೆ, ವ್ರತ, ಝಕಾತಿನಂತೆ ಹಜ್ಜ್ ಕರ್ಮವನ್ನೂ ಕಡ್ಡಾಯಗೊಳಿಸಿದೆ. ಮನುಷ್ಯರು ಎಲ್ಲಾ ವಿಧ ಬಂಧಗಳನ್ನು ಬೇರ್ಪಡಿಸಿ ಹೃದಯವನ್ನು ದೇವನಲ್ಲಿ ಲೀನಗೊಳಿಸಬೇಕಾಗಿದೆಯೆಂದಷ್ಟೇ ಹಜ್ಜ್ ಕರ್ಮದ ಆಧ್ಯಾತ್ಮ ಲಕ್ಷ್ಯ. ಈ ಉದ್ದೇಶವನ್ನು ಈಡೇರಿಸಲಿಕ್ಕಾಗಿ ಹಜ್ಜ್ ಕರ್ಮವನ್ನು ವಿಧಿಸಲಾಗಿದ್ದು, ಸಾಮರ್ಥ್ಯವಿದ್ದವರು ತಮ್ಮ ಮನೆಮಾರುಗಳನ್ನು ಬಿಟ್ಟು ಪರಿಶುದ್ಧ ಮಕ್ಕಾದಲ್ಲಿ ಸಮ್ಮೇಳಿಸಬೇಕೆಂದು ಆದೇಶಿಸಿ, ಹಾಗೆ ಸ್ವಂತ ರಾಜ್ಯವನ್ನೂ ಬಂಧುಮಿತ್ರಾದಿಗಳನ್ನೂ ಒಡಹುಟ್ಟಿದವರನ್ನೆಲ್ಲಾ ತ್ಯಜಿಸಲು ತಯಾರಾಗಬೇಕೆಂದು ಆಹ್ವಾನಿಸಲಾಗಿದೆ.

ನಾಲ್ಕು ಸಾವಿರ ವರ್ಷಗಳ ಮೊದಲು ಪ್ರವಾದಿ ಇಬ್ರಾಹೀಂ (ಅ) ಗೈದ ಮಹತ್ತಾದೊಂದು ತ್ಯಾಗದ ಕುರಿತು ಸ್ಮರಣೆಯನ್ನು ಹಜ್ಜ್ ನಮ್ಮ ಸ್ಮೃತಿಪಟಲದಲ್ಲಿ ಉಂಟುಮಾಡುತ್ತದೆ. ಆ ತ್ಯಾಗದ ಮಹತ್ತಾದ ಫಲಗಳನ್ನು ನಾವಿಂದು ಸಹ ಕಾಣುತ್ತಿದ್ದೇವೆ. ಊರ್ ಎಂಬ ರಾಜ್ಯದಲ್ಲಿ ನಾಲ್ಕು ಸಾವಿರ ವರ್ಷ ಮುಂಚೆ ಒಬ್ಬ ವಿಗ್ರಹಾರಾಧಕನ ಗೃಹದಲ್ಲಿ ಒಂದು ಶಿಶು ಹುಟ್ಟಿತು. ರಾತ್ರಿ ಹಗಲು ಮೂರ್ತಿ ಸೇವೆ ಮಾಡುತ್ತಾ ಬಿಂಬಾರಾಧನೆಯಲ್ಲಿ ಮುಳುಗಿದ್ದ ಒಂದು ಸಮಾಜದಲ್ಲಿ ಆ ಮಗು ಬೆಳೆಯಿತು. ಪ್ರಕಾಶೋಜ್ವಲವಾದ ಆತ್ಮದೊಂದಿಗೆ ಆ ಶಿಶು ಜನ್ಮತಾಳಿತ್ತು. ಬಾಲ್ಯದಲ್ಲೇ ವಿಗ್ರಹಗಳನ್ನು ಆ ಮಗು ದ್ವೇಷಿಸಿತು. ಲೋಕದಲ್ಲಿ ಅಧರ್ಮವೂ ಮಾರ್ಗಭ್ರಷ್ಟತೆಯೂ ವೃದ್ಧಿಗೊಂಡಾಗ, ದೇವನು ಅವನ ನಿಯಮಾನುಸಾರ ಒಬ್ಬ ಸುಧಾರಕನನ್ನು ನಿಯೋಜಿಸಲು ನಿಶ್ಚಯಿಸಿದಾಗ, ಹಝ್ರತ್ ಇಬ್ರಾಹೀಂ (ಅ)ರನ್ನು ಅದಕ್ಕಾಗಿ ಆರಿಸಿದನು. ಅವರನ್ನು ತನ್ನ ಅನುಗ್ರಹಗಳಿಂದ ಅಭಿಷೇಕ ಮಾಡಿದನು. ಅವನು ಇಬ್ರಾಹೀಂ (ಅ)ರನ್ನು ಕರೆದು ಹೇಳಿದನು: "ಇಬ್ರಾಹೀಂ ನೀನು ಹೋಗು; ನಿನ್ನ ಪುತ್ರನನ್ನು ಬಲಿಕೊಡು!" ಪ್ರವಾದಿ ಇಬ್ರಾಹಿಂ ಅದಕ್ಕೆ ಸನ್ನದ್ಧರಾದರು. ವೃದ್ಧಾಪ್ಯ ಕಾಲದಲ್ಲಿ ತನಗೆ ಹುಟ್ಟಿದ ಏಕ ಪುತ್ರನನ್ನು ಆ ಮರಳುಗಾಡಿನಲ್ಲಿ ಅವರು ಕೊಂಡುಹೋಗಿ ಬಿಟ್ಟರು. ಅಲ್ಲಿ ತಿನ್ನಲಿಕ್ಕಾಗಲಿ ಕುಡಿಯಲಿಕ್ಕಾಗಲಿ ಏನೂ ಇರಲಿಲ್ಲವೆಂದು ಖುರ್‌ಆನ್ ಹೇಳುತ್ತದೆ. ಆಪತ್ಕರವೂ ಭಯಾನಕವೂ ಆದ ಒಂದು ಕಣಿವೆಯಾಗಿತ್ತು ಅದು. ದೇವರ ಮಹತ್ವವು ಪುನಃಸ್ಥಾಪಿಸಲ್ಪಡಲಿಕ್ಕೂ ದೇವರ ಶಬ್ದ ಎತ್ತರಿಸಲ್ಪಡಲಿಕ್ಕೂ ಆಗಿತ್ತು ಇಬ್ರಾಹೀಂ (ಅ) ತನ್ನ ಸುತನನ್ನೂ ಆ ಸುತನ ತಾಯಿಯನ್ನೂ ಅಲ್ಲಿ ತ್ಯಜಿಸಿದ್ದು, ಒಂದು ಚರ್ಮದ ಚೀಲದಲ್ಲಿ ನೀರು ಮತ್ತು ಖರ್ಜೂರದ ಒಂದು ಬುತ್ತಿ ಮಾತ್ರ ಆ ಮಗುವಿಗೂ ತಾಯಿಗೂ ನೀಡಲಾಗಿತ್ತು. ಈ ಮರಳುಗಾಡಿನಲ್ಲಿ ಅವರು ತಮ್ಮ ಜೀವಿತವನ್ನು ನಡೆಸಬೇಕೆಂದಾಗಿತ್ತು ದೈವೇಚ್ಛೆ. ಸ್ವಲ್ಪವೇ ನೀರು ಮತ್ತು ಖರ್ಜೂರ ಎಷ್ಟು ದಿನಕ್ಕೆ ಸಾಕಾದೀತೆಂದು ಅವರು ಯೋಚಿಸದಿರಲಿಲ್ಲ. ಮರಳ ಹರಳುಗಳು ಮತ್ತು ಸೂರ್ಯಪ್ರಕಾಶ ಹೊರತು ತನ್ನ ಮಗನಿಗೂ ಪತ್ನಿಗೂ ಬೇರೇನೂ ಆ ಮರುಭೂಮಿಯಲ್ಲಿ ಇಲ್ಲವೆಂದು ಇಬ್ರಾಹೀಂ (ಅ) ಮನಗಂಡಾಗ ಅವರಿಗೆ ಎದೆಗುದಿಯುಂಟಾಯಿತು. ಕಣ್ಣುಗಳಲ್ಲಿ ನೀರು ತುಂಬಿ ಬಂತು. ಬಾಷ್ಪದಿಂದ ತುಂಬಿದ ಅವರ ದೃಷ್ಟಿಯನ್ನೂ ಕಂಪಿಸುವ ಅದರಗಳನ್ನೂ ಹಝ್ರತ್ ಹಾಜರ (ರ) ಕಂಡರು. ಇದು ಭಯಾನಕವಾದ ಕೃತ್ಯವೆಂದು ಅವರಿಗೆ ತೋಚಿತು. ಅವರು ತನ್ನ ಪತಿಯ ಹಿಂದೆಯೇ ಹೋಗಿ ಎಲ್ಲಿ ನಮ್ಮನ್ನು ಬಿಟ್ಟು ಹೋಗುತ್ತಿದ್ದೀರೆಂದು ಕೇಳಿದರು. ಕುಡಿಯಲಿಕ್ಕೆ ನೀರಿಲ್ಲ; ತಿನ್ನಲಿಕ್ಕೆ ಆಹಾರವಿಲ್ಲ! ಇಬ್ರಾಹೀಂ (ಅ) ಉತ್ತರ ಹೇಳಲು ಪ್ರಯತ್ನಿಸಿದರೂ ಮಾತು ಹೊರಡಲಿಲ್ಲ. ಹಾಜರ ಆಗ ಕೇಳಿದರು: "ತಾವು ದೇವಾಜ್ಞೆಯಂತೆ ಈ ರೀತಿ ಮಾಡುತ್ತಿ

ದ್ದೀರಾ? ಅಥವಾ ಸ್ವಇಚ್ಛೆಯಿಂದಲೋ?" ಇಬ್ರಾಹೀಂ (ಅ) ಆಕಾಶದೆಡೆ ತನ್ನ ಎರಡು ಕೈಗಳನ್ನೂ ಎತ್ತಿ ತೋರಿಸಿದರು. ತಾನು ದೈವಾಜ್ಞೆಯಂತೆ ಆ ರೀತಿ ಮಾಡುತ್ತಿದ್ದೇನೆಂದು ಅವರು ವ್ಯಕ್ತಪಡಿಸಿದರು. ಅದನ್ನರಿತಾಗ ವಿಶ್ವಾಸಿನಿಯೂ ದೃಢಚಿತ್ತೆಯೂ ಆಗಿದ್ದ ಆ ತರುಣೀಮಣಿಯಲ್ಲಿ ಒಂದು ಮಾರ್ಪಾಟು ಉಂಟಾಯಿತು. ಅವರು ಯುವತಿಯಾಗಿದ್ದರು. ಏಕ ಸಂತಾನ ಜೊತೆಯಲ್ಲಿ. ಅವರ ಮುಂದೆ ಮೃತ್ಯು ಗೋಚರವಾಗುತ್ತಿತ್ತು. ಆದರೂ ಆ ಸ್ತ್ರೀರತ್ನ ಕೂಡಲೇ ಧೈರ್ಯದಿಂದ ಹೇಳಿದರು: "ಹಾಗಾದರೆ ಮತ್ತೆ ಅಲ್ಲಾಹನೇ ನಮ್ಮನ್ನು ರಕ್ಷಿಸಿಕೊಳ್ಳುವನು! ಅವನು ನಮ್ಮ ಕೈಬಿಡಲಾರ."

ಕೊನೆಗೆ ನೀರು ಮುಗಿಯಿತು. ಖರ್ಜೂರ ಕೂಡ ಬಾಕಿಯುಳಿಯಲಿಲ್ಲ. ದೃಷ್ಟಿ ತಲಪುವ ದೂರದಲ್ಲೆಲ್ಲೂ ಜನಸಂಚಾರವಾಗಲಿ ಭಕ್ಷ್ಯ ವಸ್ತುಗಳಾಗಲಿ ಕಾಣಸುವುದಿಲ್ಲವಾದರೂ ನೀರಡಿಕೆಯಿಂದ ನರಳಾಡುತ್ತಿರುವ ತನ್ನ ಮಗುವಿನ ಕ್ಲೇಶವನ್ನು ಕಂಡು ಸಹಿಸದೆ ಅವರು ಒಂದು ಗುಡ್ಡೆಯ ಮೇಲೆ ಹತ್ತಿ ನೋಡಿದರು. ಯಾರಾದರೂ ಮನುಷ್ಯ ಜೀವಿ ಕಾಣಸುತ್ತಾನೆಯೇ? ಹಾ! ಒಬ್ಬನಾದರೂ ಕಾಣಸಿಕ್ಕಿದರೆ ಸ್ವಲ್ಪ ನೀರು ಕೇಳಬಹುದಾಗಿತ್ತು! ಆದರೆ ಎಷ್ಟು ಶ್ರಮಿಸಿದರೂ ನೀರು ದೊರೆಯುವ ಯಾವ ಮಾರ್ಗವೂ ಕಾಣಲಿಲ್ಲ, ವ್ಯಾಕುಲತೆಯಿಂದಲೂ ದಿಗ್ಭ್ರಾಂತಿಯಿಂದಲೂ ಆ ಗುಡ್ಡೆಯಿಂದ ಇಳಿದು ಮತ್ತೊಂದು ಗುಡ್ಡೆಯನ್ನು ಹತ್ತಿನೋಡಿದರು. ಅಲ್ಲಿ ಸಹ ಜಲ ಸಿಕ್ಕುವ ಲಕ್ಷಣವೇನೂ ಕಾಣಲಿಲ್ಲ. ಈ ಉದ್ವಿಗ್ನತೆ ಮತ್ತು ಕಳವಳದಿಂದ ಅವರು ಏಳು ಸಲ ಗುಡ್ಡೆಗಳನ್ನು ಹತ್ತಿ ಇಳಿದರು. ಕೊನೆಗೆ ಏನು ಮಾಡಬೇಕೆಂದು ತೋಚದೆ ಪೇಚಾಡಿದರು. ಅವರು ದೇವರಿಗೆ ಮೊರೆಯಿಟ್ಟರು. ಆ ಸಂದಿಗ್ಧ ಘಟ್ಟದಲ್ಲಿ ಅವರಿಗೆ ದೇವವಾಣಿ ಕೇಳಿಸಿತು: "ಓ ಹಾಜರಾ ನಿನ್ನ ಮಗುವಿಗಾಗಿ ಅಲ್ಲಾಹನು ಮಾರ್ಗ ತೆರೆದಿರುವನು. ಹೋಗು, ಮಗುವನ್ನು ನೋಡು......" ಹಝ್ರತ್ ಹಾಜರ (ರ) ಮಗುವಿನ ಬಳಿ ಹಿಂತಿರುಗಿ ಬಂದಾಗ, ಮಗು ದಾಹದಿಂದ ನರಳಿದ ಜಾಗದಲ್ಲಿ ನೀರಬುಗ್ಗೆಯೊಂದು ಸ್ಫುಟಿಯುತ್ತಿರುವುದನ್ನು ಕಂಡರು. ಅದೊಂದು ಜಲಧಾರೆಯಾಯಿತು. ಇದೇ ಜಲಧಾರೆ ನಂತರ "ಝಂ ಝಂ" ಎಂಬ ಹೆಸರಿನಿಂದ ಕರೆಯಲ್ಪಟ್ಟಿತು. ಸಂತೋಷಾಧಿಕ್ಯದಿಂದ ಹೊರಡುವ ಗಾನಕ್ಕೆ "ಝಂ ಝಂ" ಎಂದು ಹೇಳಲಾಗುತ್ತದೆ. ಹಾಜರರವರೇ ಈ ನೀರ ಚಿಲುಮೆಗೆ ಝಂ ಝಂ ಎಂದು ನಾಮಕರಣ ಮಾಡಿದರು. ಈ ಊಟೆಯಿಂದ ತನ್ನ ಪ್ರೀತಿಯ ಕಂದನಿಗೆ ರಕ್ಷೆ ದೊರೆತ ಅಮಿತ ಸಂತೋಷದಿಂದ ಆನಂದ ಗಾನ ಹಾಡಲು ತನಗೆ ಸಂದರ್ಭವೊದಗಿತ್ತಲ್ಲವೇ! ನೀರಿನ ಬಗ್ಗೆ ಅಲ್ಲಾಹನು ಈ ರೀತಿ ಒಂದು ಏರ್ಪಾಡು ಮಾಡಿದನು. ಇನ್ನು ಬೇಕಾದುದು ಆಹಾರ. ಅದೃಷ್ಟವಶಾತ್ ಒಂದು ವ್ಯಾಪಾರ ಸಂಘ ದಾರಿ ತಪ್ಪಿ ಹಝ್ರತ್ ಹಾಜರ (ರ) ವಾಸ ಹೂಡಿರುವ ಸ್ಥಳಕ್ಕೆ ಬಂದು ಮುಟ್ಟಿದರು. ಆ ಯಾತ್ರಿಕ ಸಂಘಕ್ಕೆ ನೀರು ಬೇಕಾಗಿತ್ತು. ಅಲ್ಲಿ ಒಂದು ಜಲಾಶಯ ಕಂಡಾಗ ಆ ಸಂಘ ಅಲ್ಲಿ ಶಿಬಿರ ಹೂಡಲು ಇಚ್ಛಿಸಿ, ಹಾಜರರೊಡನೆ ಅವರ ಪ್ರಜೆಗಳಾಗಿ ವಾಸ ಮಾಡಲು ತಮಗೆ ಅನುಮತಿ ನೀಡಬೇಕೆಂದು ಕೋರಿದರು. ಹಝ್ರತ್ ಹಾಜರ(ರ) ಅವರಿಗೆ ಒಪ್ಪಿಗೆ ನೀಡಿದಾಗ, ಅವರೀರ್ವರ ಪ್ರಜೆಗಳಾಗಿ ಅವರಲ್ಲಿ ಬೀಡುಬಿಟ್ಟರು. ಹೀಗೆ ಪ್ರಾಯಕ್ಕೆ ಬರುವ ಮೊದಲೇ ಅಲ್ಲಾಹನು ಹಝ್ರತ್ ಇಸ್ಮಾಯಿಲರನ್ನು ರಾಜನನ್ನಾಗಿ ಮಾಡಿದನು!

ಇಂದು ಕೂಡ ಹಜ್ಜ್ ವೇಳೆಯಲ್ಲಿ ಹಝ್ರತ್ ಹಾಜರರವರ ಈ ಘಟನೆಯನ್ನು ಸ್ಮರಿಸಿಕೊಂಡು ಹಾಜಿಗಳು ಸಫಾ, ಮರ್ವಾ ಎಂಬ ಎರಡು ಗುಡ್ಡೆಗಳ ಮಧ್ಯೆ ಏಳು ಸಲ ಅತ್ತಿತ್ತ ಓಡುತ್ತಾರೆ. ತಾವು ಹಾಜರ(ರ) ಅವರ ಕಾಲ ಹೆಜ್ಜೆಗಳನ್ನು ಹಿಂಬಾಲಿಸುತ್ತೇವೆಂದು ಈ ಓಟ ಮೂಲಕ ಅವರು ಬಹಿರಂಗಪಡಿಸುತ್ತಾರೆ. ಅಲ್ಲಾಹನ ಮಾರ್ಗದಲ್ಲಿ ಯಾವಾಗಲಾದರೂ ತಮ್ಮ ಬಂಧುಬಳಗವನ್ನೆಲ್ಲಾ ಬಿಟ್ಟು ಬಿಡಬೇಕಾದ ಸಂದರ್ಭ ಬಂದರೆ ತಾವು ವೈಮನಸ್ಯ ತೋರಿಸಲಿಕ್ಕಿಲ್ಲವೆಂದು ಅವರು ಈ ಮೂಲಕ ಪ್ರಕಟಪಡಿಸುತ್ತಾರೆ.

ಸಂಕ್ಷಿಪ್ತವಾಗಿ, ಹಜ್ಜ್ ಇಸ್ಲಾಮಿನಲ್ಲಿ ವಿಧಿಸಲಾದ ಅತಿ ಪ್ರಧಾನವಾದ ಒಂದು ಆರಾಧನಾಕರ್ಮವಾಗಿದೆ. ಅಲ್ಲಾಹನಿಗೋಸ್ಕರ ಜೀವಿತವನ್ನು ಬಲಿ ಕೊಡುವವರು ಸದಾ ಜೀವಂತರಾಗಿರುವುದು ಹೇಗೆಂಬ ಈ ಚಿತ್ರ ಮಕ್ಕಾಕ್ಕೆ ಹೋಗಿ ಹಜ್ಜ್ ಅನುಷ್ಠಿಸುವ ಪ್ರತಿಯೊಬ್ಬನ ಕಣ್ಮುಂದೆ ಪ್ರತ್ಯಕ್ಷವಾಗುತ್ತದೆ.

ಹಜ್ಜ್ ಮೂಲಕ ಮುಸ್ಲಿಮರೆಡೆಯಲ್ಲಿ ಒಂದು ಕೇಂದ್ರ ಪ್ರಜ್ಞೆ ಜನ್ಮತಾಳುತ್ತದೆ. ತಮ್ಮ ಹಾಗೂ ಬಾಹ್ಯ ಲೋಕದ ಆವಶ್ಯಕತೆಗಳ ಕುರಿತು ಆಲೋಚಿಸುವರೆ ಅವರಿಗೆ ಅದರ ಮೂಲಕ ಸಂದರ್ಭ ಒದಗುತ್ತದೆ. ಪರಸ್ಪರ

# ಪಾಕಿಸ್ತಾನದಲ್ಲಿ ಕಿರಾತ ಆಡಳಿತೆ

★ ಎನ್. ಅಬ್ದುರ್ರಹೀಂ

ಎಪ್ರಿಲ್ 26ರಂದು ಪಾಕಿಸ್ತಾನದ ಸೇನಾಡಳಿತಾಧಿಕಾರಿ ಜನರಲ್ ಜಿಯಾಉಲ್‌ಹಕ್ ಅಹ್ಮದೀಯರ ವಿರುದ್ಧ ಜಾರಿಗೆ ತಂದ ವಿಶೇಷಾಜ್ಞೆ ಮಾನವ ಹಕ್ಕನ್ನು ನಿರಾಕರಿಸುವಂಥದ್ದೂ ಮತಸ್ವಾತಂತ್ರ್ಯ ಧ್ವಂಸಕವೂ ನೀತಿವಿರುದ್ಧವೂ ಆದ ಒಂದು ಕಿರಾತ ನಿಯಮವೆಂದು ಮೊದಲ ನೋಟದಲ್ಲೇ ಯಾರಿಗೂ ಮನವರಿಕೆಯಾಗಬಹುದು. ಇದು ಪಾಕಿಸ್ತಾನದ ಜನರ ಕ್ಷೇಮ ಸಮಾಧಾನವನ್ನು ಅನುಲಕ್ಷ್ಯಿಸಿ ಜಾರಿಗೆ ತಂದ ನಿಯಮವಲ್ಲವೆಂದೂ ಒಂದು ಜನವಿಭಾಗವನ್ನು ನಿರ್ಮೂಲನಗೊಳಿಸುವ ಉದ್ದೇಶದಿಂದ ಮಾತ್ರ ಹೊರಡಿಸಿದ ಆಜ್ಞೆಯೆಂದೂ ಇದಕ್ಕೆ ತುಲ್ಯವಾದ ಒಂದು ಅನೀತಿ ಲೋಕ ಚರಿತ್ರೆಯಲ್ಲಿ ಬೇರೆ ಯಾವುದೇ ಆಡಳಿತಕ್ರಮದಲ್ಲಿ ಕಾಣಲು ಅಸಾಧ್ಯವೆಂದೂ ಮನಗಾಣಲು ಪ್ರಯಾಸವಿಲ್ಲ. ಪಾಕಿಸ್ತಾನದ ಸೈನ್ಯಾಡಳಿತಾಧಿಕಾರಗೊಡ್ಡು ಮುಲ್ಲಾಯಿಸಮಿನ ಮುಂದೆ ಮೊಣಕಾಲೂರಿದೆಯೆಂದೂ ಅಧಿಕಾರವನ್ನು ಬಾಕಿಯುಳಿಸಲು ಎಂತಹ ಅನೀತಿಯಿಂದ ವರ್ತಿಸಲಿಕ್ಕೂ ಜನರಲ್ ಜಿಯಾಉಲ್‌ಹಕ್ ಸಿದ್ಧನೆಂದೂ ವಿಶೇಷಾಜ್ಞೆಯಿಂದ ವ್ಯಕ್ತವಾಗುತ್ತದೆ.

ವಿಶೇಷಾಜ್ಞೆಯ ಮುಖ್ಯಾಂಶ ಈ ರೀತಿ ಇದೆ :

"Any person of the Qadiani group or Lahori group (who call themselves 'Ahmadis' or any other name) who by words, either spoken, written or by visible representation refers to the mode or form of call to prayers followed by his faith as 'Azan' or recites Azan as used by the Muslims, shall be punished with imprisonment of either description for a term which may extend to three years, and shall also be liable to fine."

"Any person of the Qadiani group or the Lahori group (who call themselves 'Ahmadis' or by any other name) who directly or indirectly posed himself as a Muslim, or calls or refers to his faith as Islam or preaches or propagates his faith or invites others to accept his faith by words either spoken or written, by visible representation, or in any manner whatsoever outrages the religious feelings of Muslims shall be punished with imprison ment of either description for a term which may extend to three years and shall also be liable to fine."

"ಖಾದಿಯಾನಿ ಗ್ರೂಪಿನ ಅಥವಾ ಲಾಹೋರಿ ಗ್ರೂಪಿನ ಯಾವ ವ್ಯಕ್ತಿಯೂ (ಅಹ್ಮದಿಯೆಂದಾಗಲಿ ಬೇರೆ ಯಾವುದೇ ಹೆಸರಿನಿಂದಾಗಲಿ ಸ್ವಯಂ ಕರೆಯುವವರು) ಮಾತಿನಿಂದ, ಬರಹದಿಂದ ಅಥವಾ ಪ್ರತ್ಯಕ್ಷವಾದ ಇನ್ನಿತರ ರೀತಿಯಲ್ಲಿ ತನ್ನ ಮತವಿಶ್ವಾಸ ಪ್ರಕಾರದ ಪ್ರಾರ್ಥನೆಯ ಕರೆಗೆ 'ಅಝಾನ್' (Azan) ಎಂದು ಹೇಳುವುದಾಗಲಿ ಮುಸ್ಲಿಮರು ಹೇಳುವ ಕ್ರಮದಲ್ಲಿ ಅಝಾನ್ ಹೇಳುವುದಾಗಲಿ ಮಾಡುವುದಾದರೆ ಮೂರು ವರ್ಷಗಳ ವರೆಗಿನ ಎರಡರಲ್ಲೊಂದು ಬಗೆಯ ಸೆರೆಮನೆವಾಸ ಮತ್ತು ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

"ಖಾದಿಯಾನಿ ಗ್ರೂಪಿನ ಆಥವಾ ಲಾಹೋರಿ ಗ್ರೂಪಿನ ಯಾವ ವ್ಯಕ್ತಿಯೂ ಪ್ರತ್ಯಕ್ಷವಾಗಿ ಅಥವಾ

---

(15ನೇ ಪುಟದಿಂದ)

ಪರಿಚಯಪಡಲಿಕ್ಕೂ ಅನ್ಯೋನ್ಯ ಒಳಿತುಗಳನ್ನು ವಿನಿಮಯ ಮಾಡಲಿಕ್ಕೂ ಅದು ಅವಕಾಶ ಮಾಡಿ ಕೊಡುತ್ತದೆ. ಆ ಮೂಲಕ ಸಾಹೋದರ್ಯ ಮತ್ತು ಪ್ರೀತಿ ಬಲಗೊಳ್ಳುತ್ತದೆ. ಆರ್ಥಿಕ ಸಾಮರ್ಥ್ಯವಿದ್ದು ಯಾತ್ರೆ ಮಾಡಲು ದೇಹಾರೋಗ್ಯವಿರುವ ಪ್ರತಿಯೊಬ್ಬ ಮುಸ್ಲಿಂ ಇಸ್ಲಾಮಿನ ಈ ಅತಿಪ್ರಧಾನವಾದ ಕರ್ಮವನ್ನು ಅನುಷ್ಠಿಸಲು ಬಾಧ್ಯನು. ಈ ಕಾಲದ ಧನಾಢ್ಯರ ಸಂಬಂಧಿಸಿದ ಮಟ್ಟಿಗೆ ಅತ್ಯಂತ ಹಿರಿದಾದ ಒಂದು ಸತ್ಕರ್ಮವು ಹಜ್ಜ್ ಎಂದು ನಾನು ತಿಳಿದಿದ್ದೇನೆ.

(ತಫ್ಸೀರ್ ಕಬೀರ್‌ನಿಂದ) ★

ಪರೋಕ್ಷವಾಗಿ ಸ್ವಯಂ ಮುಸ್ಲಿಂ ಎಂಬ ರೀತಿಯಲ್ಲಿ ಅಭಿವ್ಯಕ್ತಗೊಳಿಸುವುದಾಗಲಿ, ತನ್ನ ಮತವಿಶ್ವಾಸವನ್ನು ಇಸ್ಲಾಂ ಎಂದು ಹೆಸರಿಸುವುದಾಗಲಿ, ತನ್ನ ಮತವಿಶ್ವಾಸವನ್ನು ಸ್ವೀಕರಿಸಲಿಕ್ಕೋಸ್ಕರ ಮಾತಿನಿಂದ, ಬರಹದಿಂದ ಯಾ ಇನ್ನಿತರ ಪ್ರಕಟನ ರೂಪದಲ್ಲಿ ಅಥವಾ ಮುಸ್ಲಿಮರ ಧಾರ್ಮಿಕ ಭಾವನೆಗಳನ್ನು ನೋಯಿಸುವಂಥ ಬೇರಾವುದೇ ರೀತಿಯಲ್ಲಿ ಇತರರನ್ನು ಆಹ್ವಾನಿಸುವುದಾಗಲಿ ಮಾಡಿದ ಪಕ್ಷದಲ್ಲಿ ಮೂರು ವರ್ಷಗಳ ವರೆಗಿನ ಎರಡರಲ್ಲೊಂದು ಬಗೆಯ ಸೆರೆಮನೆವಾಸ ಮತ್ತು ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು."

"ಖಾದಿಯಾನಿ-ಲಾಹೋರಿ ಪಂಗಡಗಳಿಗೆ ಸೇರಿದ ಅಹ್ಮದೀಯರ ಅನಿಸ್ಲಾಮಿಕ ಪ್ರವರ್ತನೆ ನಿರೋಧ ಮತ್ತು ಶಿಕ್ಷೆ-ಆರ್ಡಿನನ್ಸ್ 1984" ಎಂದು 84 ಎಪ್ರಿಲ್ 26ರಂದು ಹೊರಡಿಸಿದ ಈ ಆಜ್ಞೆಯನ್ನು ಹೆಸರಿಸಲಾಗಿದೆ. ಅನಿಸ್ಲಾಮಿಕ ಪ್ರವರ್ತನೆಗಳನ್ನು ನಿರೋಧಿಸಲಿಕ್ಕಲ್ಲ, ಒಂದು ಮತ ವಿಭಾಗದ ಇಸ್ಲಾಮಿಕ ರೀತಿಯಲ್ಲಿರುವ ಪ್ರವರ್ತನೆಗಳನ್ನು ತಡೆಯುವುದಾಗಿದೆ ಆರ್ಡಿನನ್ಸಿನ ಉದ್ದೇಶವೆಂದೂ ಅಹ್ಮದೀಯರನ್ನು ಶಿಕ್ಷೆಗೊಳಪಡಿಸುವುದು ಮತ್ತು ಅಹ್ಮದಿಯಾ ಸಂಘಟನೆಯನ್ನು ನಿಶ್ಚೇಷ್ಟಗೊಳಿಸುವುದು ಆಜ್ಞೆಯ ಉದ್ದೇಶವೆಂದೂ ಹೊರನೋಟದಲ್ಲೇ ಸ್ಪಷ್ಟವಾಗುತ್ತದೆ.

## ಆಜ್ಞೆಯ ನಿರ್ಬಂಧಗಳು

ಆರ್ಡಿನನ್ಸ್‌ನ ಮೂಲಕ ನಿರ್ಬಂಧಗೊಳಿಸಲಾದ ವಿಚಾರಗಳು ಇಂತಿವೆ:

1. "ಅಲ್ಲಾಹನಲ್ಲದೆ ಬೇರೆ ಆರಾಧ್ಯನಿಲ್ಲ; ಮುಹಮ್ಮದ್ ಅಲ್ಲಾಹನ ಪ್ರವಾದಿ" ಎಂದು ನಾನು ಸಾಕ್ಷ್ಯವಹಿಸುತ್ತೇನೆ ಎಂಬ 'ಕಲಿಮ' (ಮೂಲಮಂತ್ರ)ವನ್ನು ಒಬ್ಬ ಅಹ್ಮದಿಗೆ ಗಟ್ಟಿಯಾಗಿ ಯಾ ಇನ್ನೊಬ್ಬ ಕೇಳುವ ರೀತಿಯಲ್ಲಿ ಹೇಳಲಿಕ್ಕಾಗಲಿ, ಬರೆಯಲಿಕ್ಕಾಗಲಿ, ಹಾಗೆ ಬರೆದುದನ್ನು ಶರೀರದಲ್ಲಿ ಧರಿಸುವುದಾಗಲಿ ಸಾಧ್ಯವಿಲ್ಲ.

2. ಇಸ್ಲಾಂ ತನ್ನ ಧರ್ಮವೆಂದು ಮಾತಿನಲ್ಲಾಗಲಿ ಬರೆಹದಿಂದಾಗಲಿ ದೃಗ್ಗೋಚರವಾಗುವಂಥ ಬೇರಾವ ರೀತಿಯಲ್ಲಾಗಲಿ, ಚಿಹ್ನೆಗಳನ್ನು ಧರಿಸಿಯಾಗಲಿ ಪ್ರಕಟಗೊಳಿಸಬಾರದು.

3. ಅಹ್ಮದಿಯಾ ಮಸೀದಿಗೆ "ಮಸ್ಜಿದ್" ಎಂದು ಹೆಸರಿಡಬಾರದು,

4. ಇಸ್ಲಾಮಿಕ ಸಾಂಕೇತಿಕ ನಾಮಗಳನ್ನು ಪ್ರಯೋಗಿಸಬಾರದು.

5. ಮನಸ್ಸಾಕ್ಷಿ ಪ್ರಕಾರ ಮನಸ್ಸಿನಲ್ಲಿ ದೃಢಪಡಿಸಿದ ತನ್ನ ಮತವಿಶ್ವಾಸವನ್ನು ಹೊರಗೆ ಹೇಳುವ ಮತ್ತು ಪ್ರಚಾರ ಮಾಡುವ ಮೂಲಭೂತ ಮಾನವ ಹಕ್ಕು ಚಲಾವಣೆ ಅಹ್ಮದೀಯರು ಮಾಡಬಾರದು.

ಇವೆಲ್ಲಾ ಅಪರಾಧವಾಗುತ್ತವೆ. ಅಹ್ಮದೀಯರು ಹೀಗೆ ಮಾಡಿದರೆ ಅದು ನಿಯಮದ ಕಣ್ಣಿನಲ್ಲಿ ಅಪರಾಧವಾಗಿ ಮಾರ್ಪಡುತ್ತದೆ. ಒಂದೇ ಕ್ರಿಯೆ ಅಹ್ಮದೀಯರು ಮಾಡುವಾಗ ಅನಿಸ್ಲಾಮಿಕ ಪಾತಕ, ಇತರ ಮುಸ್ಲಿಮರು ಮಾಡುವಾಗ ಇಸ್ಲಾಮಿಕ ಸದ್ವರ್ತನೆ! ಒಂದೇ ಕ್ರಿಯೆ ಒಂದೇ ಸಂದರ್ಭದಲ್ಲಿ ಸತ್ಕರ್ಮ ಮತ್ತು ದುಷ್ಕೃತ್ಯವಾಗುತ್ತದೆಯೆಂದು ವಿಶೇಷಾಜ್ಞೆ ಸಾರುತ್ತದೆ. ಅಂದರೆ ವ್ಯಕ್ತಿಯನ್ನು ನೋಡಿ ಅಪರಾಧವೋ ಅಲ್ಲವೋ ಎಂದು ನಿರ್ಧರಿಸಲಾಗುತ್ತದೆ ಎಂದರ್ಥ. ಈ ಕೃತ್ಯಗಳನ್ನು ಅಹ್ಮದಿ ಅಲ್ಲದ ಒಬ್ಬ ಅಮುಸ್ಲಿಂ ಮಾಡಿದರೆ ಅದು ಅಪರಾಧಕರವಾಗುವುದೆಂದು ವಿಶೇಷಾಜ್ಞೆ ಹೇಳುವುದಿಲ್ಲ. ಒಬ್ಬ ಅಮುಸ್ಲಿಂ ಇಸ್ಲಾಂ ಧರ್ಮಕ್ಕೆ ಪ್ರವೇಶಿಸುವಾಗ 'ಕಲಿಮ'ಹೇಳಬೇಕು. ಹಾಗಿರುವಾಗ ಅದು ಅಪರಾಧವಾಗಲಿಕ್ಕೆ ಎಡೆಯಿಲ್ಲ. ಅಹ್ಮದೀಯರು ಪಶ್ಚಾತ್ತಾಪಪಟ್ಟು ಇಸ್ಲಾಮಿಕ ವೃತ್ತದೊಳಗೆ ಬರಬೇಕೆಂದಲ್ಲವೇ ಜಿಯಾಉಲ್‌ಹಕ್ ನಿರ್ದೇಶಿಸಿರುವುದು. 'ಕಲಿಮ' ಉಚ್ಚರಿಸುವಾಗಲೇ ಅವರು 'ಅಪರಾಧ'ವೆಸಗುತ್ತಾರೆ. ಮತ್ತೆ ಅವರು "ಪಶ್ಚಾತ್ತಾಪಪಟ್ಟು ಇಸ್ಲಾಂ ಧರ್ಮವನ್ನು ಆಶ್ಲೇಷಿಸುವುದು" ಹೇಗೆ? ನ್ಯಾಯವಾದಗಳಿಗೇನೂ ಇಲ್ಲಿ ಸ್ಥಾನವಿಲ್ಲ. ಹಳೆಯ ಕಾಲದ ತೋಳನ ನ್ಯಾಯ–ಕಿರಾತ ನಿಯಮದ ಪುನರಾವರ್ತನೆ. ಇದು ಅಹ್ಮದೀಯರನ್ನು ಶಿಕ್ಷೆಗೊಳಪಡಿಸಲಿಕ್ಕೆ ಮಾತ್ರವಿರುವ ಒಂದು ಆರ್ಡಿನನ್ಸ್. ಜಾಮೀನು ರಹಿತ ಅಪರಾಧ. ಯಾವ ನ್ಯಾಯಾಲಯದಲ್ಲೂ ಅಪೀಲು ಸಲ್ಲಿಸಲು ಅವಕಾಶವಿಲ್ಲ. ಯಾವ ಕ್ಷಣದಲ್ಲೂ ಒಬ್ಬ ಅಹ್ಮದಿಯನ್ನು ದಸ್ತಗಿರಿ ಮಾಡಿ ಜೀವನ ಪರ್ಯಂತ ಶಿಕ್ಷೆಗೆ ಗುರಿಪಡಿಸಬಹುದಾದ ಅಪರಾಧವಿದು. ಕಾರಣವೇನೆಂದರೆ ಅಹ್ಮದಿ ಅಪರಾಧವನ್ನು ಅಲ್ಲಗಳೆಯಲಿಕ್ಕಿಲ್ಲ. ಸುಳ್ಳು ಹೇಳದೆ ಅಪರಾಧವನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಮೂರು ವರ್ಷ ಶಿಕ್ಷೆ ಕಳೆದು ಹೊರಗೆ ಬಂದರೆ ಇದೇ ತಪ್ಪಿಗೆ ಇನ್ನೊಮ್ಮೆ ಅದೇ ನಿಮಿಷದಲ್ಲಿ ಕೈದುಮಾಡಿ ಜೈಲಿಗೆ ಹಾಕಬಹುದು. ಜುಲ್ಮಾನೆ ಎಷ್ಟೆಂದು ಹೇಳಲಾಗಿಲ್ಲ. ಆದ

ಕಾರಣ ಎಷ್ಟು ಬೇಕಾದರೂ ದಂಡ ಹೊರಿಸ ಬಹುದು. ಸೊತ್ತುಗಳನ್ನೆಲ್ಲಾ ಮುಟ್ಟುಗೋಲು ಹಾಕಬಹುದು. ಕೋಟ್ಯಾಧೀಶನನ್ನು ತಿರುಕನಾಗಿ ಮಾರ್ಪಡಿಸಬಹುದು. ಆರ್ಡಿನನ್ಸ್ ಇವಕ್ಕೆಲ್ಲಾ ಅವಕಾಶ ಮಾಡಿಕೊಡುತ್ತದೆ.

ಪಾಕಿಸ್ತಾನದ ಸುಪ್ರೀಂ ಕಮಾಂಡರ್ ಎಂದು ಅಭಿಮಾನ ಪಡುವ ಜನರಲ್ ಜಿಯಾಉಲ್‌ಹಕ್ ಆ ದೇಶದಲ್ಲಿ ಇಂತಹ ನಿಯಮಗಳನ್ನು ಜಾರಿಗೊಳಸಲಿಕ್ಕಾಗಿ ಬದ್ಧಕಂಕಣರಾಗಿದ್ದಾರೆ. ಅವರು ಜಾರಿಗೊಳಿಸಲು ಉದ್ದೇಶಿಸಿರುವ ಇಸ್ಲಾಮೀಕರಣದ ಅಂಗವಾಗಿದೆ ಇದು. ಇಲ್ಲಿ ಇದು ಕೊನೆಗೊಳ್ಳುವುದೇ? ಅಕ್ರಮ ಮತ್ತು ಅನೀತಿಯ ವಿಷಮಾವರ್ತುಲದಲ್ಲಿ ಅವರು ಅಥವಾ ಪಾಕಿಸ್ತಾನದ ಆಡಳಿತೆ ಪ್ರವೇಶಿಸಿದೆ. ಒಟ್ಟಿನಲ್ಲಿ ಇನ್ನು ಮುಂದಕ್ಕೆ ಈ ದೌರ್ಜನ್ಯಗಳು ಇನ್ನೂ ಕಠಿಣವಾಗಬಹುದು. ಮುಂದೆ ಕಾಣಲಿಕ್ಕಿರುವ ಮರ್ದನಗಳ ಹಿಮಪರ್ವತದ ಮೊನೆ ಮಾತ್ರವಾಗಿದೆ ಈಗ ಅಲ್ಲಿ ಗೋಚರವಾದುದು.

## ನಿಯಮ ಕಾರ್ಯರೂಪದಲ್ಲಿ

ನಿಯಮ ಕೂಡಲೇ ಕಾರ್ಯರೂಪದಲ್ಲಿ ಬಂದದ್ದು ಈ ರೀತಿಯಾಗಿದೆ: ಸಾದಿಕಾಬಾದಿನ ಇಬ್ಬರು ಅಹ್ಮದೀಯರಿಗೆ ಖಾದಿಂ ಹುಸ್ಸೈನ್ ಎಂಬ ಕೆಲಸದಾಳು ಇದ್ದನು. ಆತನು ಜಗಳಾಡಿ, ತನ್ನ ಯಜಮಾನರು ತನ್ನನ್ನು ಅಹ್ಮದಿಯಾ ಜಮಾಅತಿಗೆ ಸೇರಲು ಒತ್ತಾಯಪಡಿಸುತ್ತಾರೆಂದು ಪೋಲಿಸಿಗೆ ದೂರು ಕೊಟ್ಟನು. ಪೋಲೀಸರು ಇಬ್ಬರು ಅಹ್ಮದೀಯರನ್ನೂ ಬಂಧಿಸಿದರು. ಜಾಮೀನುರಹಿತ ಅಪರಾಧ, ಇಬ್ಬರೂ ಜೈಲು ಸೇರಿದರು. ಅವರು ಎಷ್ಟುಕಾಲ ಸೆರೆಮನೆವಾಸ ಮಾಡಬೇಕಾದೀತೆಂದು ಯಾರಿಗೂಗೊತ್ತಿಲ್ಲ. ಇದು ಆರ್ಡಿನನ್ಸಿನ ಪ್ರತ್ಯಕ್ಷ ಫಲ.

ಸುಕ್ಕೂರಿನ ಒಂದು ಅಹ್ಮದಿಯಾ ಮಸೀದಿಯ ವಿರುದ್ಧ ಮೊದಲ ಆಕ್ರಮಣವಾಯಿತು. 70 ವಯಸ್ಸಿನ ಖುರ್ರೈಷಿ ಅಬ್ದುಲ್ ರಹ್ಮಾನ್ ಸಾಹೇಬ್ ಅವರು ಸ್ಥಳೀಯ ಅಹ್ಮದಿಯಾ ಜಮಾಅತಿನ ಪ್ರೆಸಿಡೆಂಟ್. ಅವರ ನೇತೃತ್ವದಲ್ಲಿ ಸುಕ್ಕೂರ್ ಅಹ್ಮದಿಯಾ ಮಸ್ಜಿದ್‌ನಲ್ಲಿ ಐದು ಹೊತ್ತಿನ ನಮಾಝು ನಡೆಯುತ್ತಿತ್ತು. ವಿಶೇಷಾಜ್ಞೆಯನ್ವಯ ಅಝಾನ್ ನಿರೋಧಿಸಲ್ಪಟ್ಟಿದ್ದರಿಂದ ಧ್ವನಿವರ್ಧಕವನ್ನು ತೆಗೆದಿರಿಸಲಾಗಿತ್ತು. ಮಸೀದಿಯೊಳಗೆ ಪ್ರವೇಶಿಸಿದರೆ ಅಹ್ಮದೀಯರು ತಮ್ಮ ಸರ್ವಾಧಿನಾಥನ ಸನ್ನಿಧಿಯಲ್ಲಿ ಸಾಷ್ಟಾಂಗವೆರಗಿ ಅಳುತ್ತಾ ಗದ್ಗದ ಪ್ರಾರ್ಥನೆ ಸಲ್ಲಿಸುತ್ತಿರುವುದನ್ನು ಕಾಣಬಹುದಾಗಿತ್ತು. ಮಸೀದಿಯ ಮುಂಭಾಗದಲ್ಲಿ "ಲಾ ಇಲಾಹ ಇಲ್ಲಲ್ಲಾಹು ಮುಹಮ್ಮದ್ ರಸೂಲುಲ್ಲಾಹ್" ಎಂಬ ಪವಿತ್ರ ಕಲಿಮ ಬರೆದ ಫಲಕವೊಂದಿತ್ತು. 1984 ಮೇ 1ರಂದು ಕೆಲವು ಪೋಲೀಸರು ಒಂದು ಗುಂಪು ಗೂಂಡರೊಂದಿಗೆ ಮಸೀದಿಗೆ ಬಂದು ಆ ಬರಹಗಳನ್ನು ಅಳಿಸಿದರು. ಹೆಚ್ಚು ಹೊತ್ತು ಮಸೀದಿಯಲ್ಲಿ ವಿಚಾರಮಗ್ನರಾಗಿ ಕಳೆದ ಅಬ್ದುಲ್‌ರಹ್ಮಾನ್ ಸಾಹೇಬ್ ಸರಿಯಾಗಿ ಕಾಣಿಸದ ಕಣ್ಣುಗಳಿಂದ ಹೇಗೂ ಮನೆಯತ್ತ ಸಾಗುವ ದಾರಿಯಲ್ಲಿ ಐದಾರು ಗಜಗಳಷ್ಟು ಹೆಜ್ಜೆ ಹಾಕುತ್ತಿರುವಾಗಲೇ ನಾಲ್ಕು ಮಂದಿ ಅವರ ಮೇಲೆ ಮುಗಿಬಿದ್ದರು. ರೌಡಿಗಳು ಒಬ್ಬೊಬ್ಬರಾಗಿ ಅವರನ್ನು ಕಠಾರಿಯಿಂದ ತಿವಿದರು. ಅವರು ರಸ್ತೆಯಲ್ಲೇ ಮಡಿದರು. ಆಕ್ರಮಿಗಳು "ಅಲ್ಲಾಹು ಅಕ್‌ಬರ್" ಎಂದು ವಿಜಯಾಟ್ಟಹಾಸ ಮೊಳಗಿ ಹಿಂತಿರುಗಿದರು.

ಮೇ 6ರಂದು ಗುಜರಾತಿನಲ್ಲಿ (ಪಾಕಿಸ್ತಾನ) ಮಸೀದಿಯೊಂದನ್ನು ಪೋಲೀಸರ ಉಪಸ್ಥಿತದಲ್ಲೇ ಸುಮಾರು ಮುನ್ನೂರು ಮಂದಿ ಆಕ್ರಮಿಸಿದರು. ಅಧಿಕಾರಿಗಳು ಆ ಬಳಿಕ ಮಸೀದಿಗೆ ಬೀಗಮುದ್ರೆ ಮಾಡಿದರು. ಅದು ತಮ್ಮದೆಂದು ನ್ಯಾಯಾಲಯದಲ್ಲಿ ಅಹ್ಮದೀಯರು ರುಜುವಾತು ಪಡಿಸಬೇಕೆಂದಾಗಿದೆ ಹೊಸ ಆದೇಶ. ಇಸ್ಲಾಮಾಬಾದಿನಲ್ಲಿ ಒಂದು ಮಸೀದಿಗೆ ಕಿಚ್ಚಿಡಲು ಪ್ರಯತ್ನಿಸಲಾಯಿತು.

ಮಸೀದಿಗೆ ಮಸ್ಜಿದ್ ಎಂದು ಹೆಸರಿಡಬಾರದೆಂದು ನಿಯಮ ಜಾರಿಗೆ ಬಂದ ಕಾರಣ ಅಹ್ಮದೀಯರು "ದಾರುಲ್‌ಹಮ್ದ್", "ದಾರುದ್ದಿಕ್ರ್" ಇತ್ಯಾದಿಯಾಗಿ ಕೆಲವು ಕಡೆಗಳಲ್ಲಿ ತಮ್ಮ ಮಸೀದಿಯ ಹೆಸರು ಬದಲಾಯಿಸಿ ಬರೆದಿದ್ದಾರೆ. ಮಸೀದಿಯ ಮುಂದುಗಡೆ ಬರೆದ ಕಲಿಮವನ್ನು ಅಳಿಸಲು ಒಂದು ಕಡೆಯಲ್ಲಿ ಪೋಲೀಸರು ಆಗತ್ಯಪಡಿಸಿದಾಗ ಹಾಗೆ ತಾವು ಮಾಡಲಾರೆವೆಂದೂ ಬೇಕಾದರೆ ಪೋಲೀಸರೇ ಹಾಗೆ ಮಾಡಲಿಯೆಂದೂ ಅವರು ಮರುನುಡಿದರು. ಇಂತಹ ಅನೇಕ ಘಟನೆಗಳು ಪಾಕಿಸ್ತಾನದ ಹಲವೆಡೆಗಳಲ್ಲಿ ಸಂಭವಿಸಿವೆ. ಲಷ್ಕರಿ ಆಡಳಿತದಲ್ಲಿ ಏನೆಲ್ಲಾ ನಡೆಯುತ್ತಿದೆಯೆಂಬುದರ ಕುರಿತು ಈಗ ಹೊರಲೋಕಕ್ಕೆ ವಿವರಗಳೇನೂ ಲಭಿಸುವುದಿಲ್ಲವೆಂಬುದಾಗಿದೆ ಸತ್ಯ.

ಇಷ್ಟೆಲ್ಲಾ ಆಗಿದ್ದರೂ ಅಹ್ಮದಿಯಾ ವಿರುದ್ಧ ಚಳವಳಿಯ ಕೇಂದ್ರ ನೇತಾರರು ಪೂರ್ಣವಾಗಿ ಸಂತುಷ್ಟರಲ್ಲ.

ಪ್ರಧಾನ ಬೇಡಿಕೆಗಳು ಪೂರೈಸಲ್ಪಟ್ಟದ್ದರಿಂದ ಅವರು ಸಂತೃಪ್ತರಾಗಿದ್ದರೂ ತಮ್ಮ ಎಲ್ಲಾ ಬೇಡಿಕೆಗಳೂ ಅಂಗೀಕರಿಸಲ್ಪಡುವ ವರೆಗೆ ಆಂದೋಳನವನ್ನು ಮುಂದುವರಿಸಲಾಗುವುದೆಂದೂ ರಾಷ್ಟ್ರಾಧ್ಯಕ್ಷರ ವಿಶೇಷಾಜ್ಞೆಯನ್ನು ಫಲಪ್ರದವಾಗಿ ಜಾರಿಗೊಳಿಸಲಾಗುವುದೆಂಬುದರ ಬಗ್ಗೆ ಭರವಸೆ ನೀಡಬೇಕೆಂದೂ ರಾವಲ್ಪಿಂಡಿಯಲ್ಲಿ ಸೇರಿದ ಉಲಮಾ ಸಭೆ (ಮುಸ್ಲಿಂ ಮತಪಂಡಿತರ ಸಭೆ) ಘೋಷಿಸಿದೆ. ಅಹ್ಮದೀಯರಿಂದ "ಜಿಝಿಯಾ" ವಸೂಲು ಮಾಡಬೇಕೆಂದೂ ಅಹ್ಮದಿಯಾ ಜಮಾಅತಿನ ಎಲ್ಲಾ ಪ್ರಕಾಶನಗಳಿಗೆ ಮುಟ್ಟುಗೋಲು ಹಾಕಬೇಕೆಂದೂ ರಬ್‌ವಾ ಎಲ್ಲರಿಗೂ ಇರುವ ನಗರವನ್ನಾಗಿ ಮಾಡಬೇಕೆಂದೂ ಅಹ್ಮದೀಯರ ಪಾಸ್‌ಪೋರ್ಟ್‌ಗಳನ್ನು ರದ್ದು ಪಡಿಸಬೇಕೆಂದೂ ಉದ್ಯೋಗಗಳಿಂದ ಅವರನ್ನು ವಜಾಗೊಳಿಸಬೇಕೆಂದೂ ಅಹ್ಮದೀಯರಿಂದ ಪ್ರತಿರೋಧ ಉಂಟಾಗಲಾರದೆಂದು ಭರವಸೆ ಕೊಡಬೇಕೆಂದೂ ಇತ್ಯಾದಿ ಇತ್ಯಾದಿ ಬೇಡಿಕೆಗಳನ್ನು ಸಹ ಉಲಮಾ ಸಮ್ಮೇಳನ ಮುಂದಿಟ್ಟಿದೆ. ಅಹ್ಮದೀಯರ ವಿರುದ್ಧ ಆರ್ಡಿನನ್ಸ್ ಹೊರಡಿಸಿದುದಕ್ಕೆ ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸಲಿಕ್ಕಾಗಿ ಜಿಯಾಉಲ್‌ಹಕ್ ಆದೇಶಿಸಿದನ್ವಯ ಮೇ 11ರಂದು ರಾಷ್ಟ್ರವ್ಯಾಪಕವಾಗಿ 'ವಂದನಾರ್ಪಣೆ ದಿನ' ಆಚರಿಸಲಾಯಿತು.

## ಪ್ರತಿಭಟನೆ

ಅಹ್ಮದೀಯರ ವಿರುದ್ಧ ಪಾಕಿಸ್ತಾನದಲ್ಲಿ ಜಾರಿಗೊಳಿಸಿದ ಈ ಆರ್ಡಿನನ್ಸನ್ನು ಪಾಕಿಸ್ತಾನದ ಪಾಕಿಸ್ತಾನ್ ನೇಶನಲ್ ಪಾರ್ಟಿ, ಪೀರ್‌ಪಗಾಡೋ ಮುಸ್ಲಿಂ ಲೀಗ್, ಇಸ್ತಿಕ್‌ಲಾಲ್ ಪಾರ್ಟಿ ಎಂಬೀ ಪಕ್ಷಗಳು ಪ್ರತಿಭಟಿಸಿ, ಮಾನವ ಹಕ್ಕನ್ನು ಮೊಟಕುಗೊಳಿಸುವ ಈ ಆಜ್ಞೆಯನ್ನು ರದ್ದುಪಡಿಸಬೇಕೆಂದು ಅಗತ್ಯಪಡಿಸಿದ ವಿಚಾರ ಗಮನಾರ್ಹವಾಗಿದೆ. ಪಿ. ಎನ್. ಪಿ. ಜನರಲ್ ಸೆಕ್ರೆಟರಿ ಸಯ್ಯದ್ ಖಸೂರ್ ಗರ್ದೇಝಿ ಹೊರಡಿಸಿದ ಹೇಳಿಕೆಯಲ್ಲಿ, ಆರ್ಡಿನನ್ಸ್ ಪಾಕಿಸ್ತಾನದ ರಾಷ್ಟ್ರಪಿತ ಖಾಯಿದೆ ಅಝಂ ಮುಹಮ್ಮದಲಿ ಜಿನ್ನಾರ ಕನಸುಗಳಿಗೂ ಕಲ್ಪನೆಗಳಿಗೂ ತೀರಾ ವಿರುದ್ಧವೆಂದೂ ಸಮಾನ ಪೌರಹಕ್ಕು ತತ್ವದ ಉಲ್ಲಂಘನೆಯೆಂದೂ ಸ್ಪಷ್ಟಪಡಿಸಿದರು. ಧಾರ್ಮಿಕ ವಿಚಾರಗಳಲ್ಲೂ ವಿವಾದಗಳಲ್ಲೂ ರಾಷ್ಟ್ರ ಹೆಚ್ಚುಹೆಚ್ಚಾಗಿ ಹಸ್ತಕ್ಷೇಪ ಮಾಡುವುದು ನೀತಿ ನ್ಯಾಯ ತತ್ವಗಳಲ್ಲಿ ನಂಬಿಕೆಯಿಟ್ಟಿರುವ ಒಂದು ಸಮಾಜದ ಲಕ್ಷ್ಯಕ್ಕೆ ಹಿತಕರವಲ್ಲವೆಂದೂ ಅವರು ಅಭಿಪ್ರಾಯಪಟ್ಟರು. ಮತವೆಂಬುದು ದೇವರ ಮತ್ತು ಮನುಷ್ಯರ ಮಧ್ಯೆ ಮನುಷ್ಯರ ಸ್ವಂತ ವ್ಯವಹಾರವಾಗಿದೆ. ಸರಕಾರದ ವ್ಯವಹಾರಕ್ಕೂ ಅದಕ್ಕೂ ಯಾವುದೇ ಸಂಬಂಧವಿಲ್ಲವೆಂದು ಜಿನ್ನಾರವರು ಘೋಷಿಸಿದ್ದರೆಂದು ಅವರು ನೆನಪಿಸಿದರು.

ತಹ್ರೀಕ್ ಇಸ್ತಿಖ್‌ಲಾಲ್ ಪಕ್ಷ ಸಹ ಆರ್ಡಿನನ್ಸನ್ನು ವಿರೋಧಿಸಿದೆ. ಕಳೆದ ಏಳು ವರ್ಷಗಳಿಂದ ಪಾಕಿಸ್ತಾನದಲ್ಲಿ ತಾಂಡವವಾಡುತ್ತಿರುವ ನಿಯಮ ವಿರುದ್ಧವಾದ ಸ್ವೇಚ್ಛಾಧಿಪತ್ಯದ ಇನ್ನೊಂದು ದುಷ್ಟ ಕ್ರಮ ಇದು ಎಂದು ಒಂದು ಹೇಳಿಕೆಯಲ್ಲಿ ಪಕ್ಷವು ಬೊಟ್ಟು ಮಾಡಿದೆ. ಚುನಾವಣೆ ಸಮೀಪಿಸುತ್ತಿರುವ ಸಂದರ್ಭದಲ್ಲಿ ಈ ಪ್ರಶ್ನೆಯನ್ನು ಎತ್ತಿಹಿಡಿದಿದ್ದು ಮುಲ್ಲಾಗಳ ಸಹಾಯ ಮತ್ತು ಬೆಂಬಲವನ್ನು ಗಳಿಸುವ ಉಪಾಯವೆಂದು ಸಹ ಅದರಲ್ಲಿ ಹೇಳಲಾಗಿದೆ. 1973ರ ಸಂವಿಧಾನದಲ್ಲಿ 1974ರಲ್ಲಿ ಮಾಡಿದ ತಿದ್ದುಪಡಿ 90 ವರ್ಷದ ಅಹ್ಮದಿಯಾ ಸಮಸ್ಯೆಗೆ ಕೊನೆಯ ಪರಿಹಾರವೆಂದು ಹೇಳಲಾಗಿತ್ತೆಂದೂ ಆದರೆ ಈಗ ಮತ್ತೂ ಸಮಸ್ಯೆ ಬಾಕಿಯುಳಿದಿದೆಯೆಂದು ಇದು ವ್ಯಕ್ತಪಡಿಸುತ್ತದೆಂದೂ ಹೇಳಿಕೆಯಲ್ಲಿ ಸೂಚಿಸಲಾಗಿದೆ. ಮುಲ್ಲಾಗಳ ಒತ್ತಾಯಕ್ಕೆ ಭುಟ್ಟೋನಂತೆ ಜಿಯಾಉಲ್‌ಹಕ್ ಸಹ ಮಣಿಯ ಬೇಕಾಗಿದೆ. ಆದರೆ ಇಂದು ಭುಟ್ಟೋ ಎಲ್ಲಿ? ಅಹ್ಮದೀಯರನ್ನು ಅಮುಸ್ಲಿಮರನ್ನಾಗಿ ಘೋಷಿಸಿದ ಭುಟ್ಟೋನನ್ನು ಮುಲ್ಲಾಗಳು ಸುಮ್ಮಗೆ ಬಿಡಲಿಲ್ಲ. ಜಿಯಾನನ್ನು ಸಹ ಅವರು ಬಿಡಲಿಕ್ಕಿಲ್ಲ. ಜಿಯಾರ ಅಪರಾಧ ಕೃತ್ಯಗಳಲ್ಲಿ ರಾಜಕೀಯ ಪಕ್ಷಗಳು ಪಾಲ್ಗೊಳ್ಳಬೇಕಾಗಿಲ್ಲ. ಇನ್ನು ಶಿಯಾಗಳ ಸರದಿ ಬರಲಿಕ್ಕಿಲ್ಲವೇ? ಶಿಯಾಗಳ ಕಲಿಮ ಮತ್ತು ಅಝಾನ್ ಕೂಡ ಬೇರೆ. ಅವರು ತಮ್ಮ ಪ್ರಾರ್ಥನಾಲಯಗಳನ್ನು ಇಮಾಂಬಾರ ಎಂದಾಗಿದೆ ಕರೆಯುವುದು. ಆಗಾಖಾನಿ ಇಸ್ಮಾಯಿಲ್ಯರು ಸಹ ವಿಶ್ವಾಸ ಮತ್ತು ಆಚಾರಾನುಷ್ಠಾನಗಳಲ್ಲಿ ಮುಸ್ಲಿಮರಿಂದ ವಿಭಿನ್ನರು. ಇತರರ ವಿಶ್ವಾಸ ಹೇಗಿರಬೇಕೆಂದು ತೀರ್ಮಾನಿಸಲು ಯಾರಿಗೂ ಅಧಿಕಾರವಿಲ್ಲ. ಮನುಷ್ಯತ್ವ ರಹಿತವೂ ಕಿರಾತವೂ ಅನಿಸ್ಲಾಮಿಕವೂ ಆದ ಈ ಆರ್ಡಿನನ್ಸನ್ನು ರದ್ದುಪಡಿಸಬೇಕೆಂದು ಪಾರ್ಟಿ ಸೆಕ್ರೆಟರಿ ಝಹೂರ್ ಬಟ್ ಒತ್ತಾಯಿಸಿದ್ದಾರೆ.

ಪೀರ್‌ಪಗಾಡೋ ಮುಸ್ಲಿಂ ಲೀಗ್ ನೇತಾರ ಚೌಧರಿ ರಹ್ಮತ್ ಅಲಿ ಸಹ ಆರ್ಡಿನನ್ಸನ್ನು ವಿರೋಧಿಸಿದ್ದಾರೆ. ಖಾಯಿದೆ ಆಝಮರ ಘೋಷಣೆಗಳಿಗೆ ಈ ವಿಶೇಷಾಜ್ಞೆ ವಿರುದ್ಧವಾಗಿದೆಯೆಂದು ಅವರು ಪ್ರಸ್ತಾಪಿಸಿದ್ದಾರೆ.

ಉಲಮಾಗಳನ್ನು ಸಂತೃಪ್ತಗೊಳಿಸಲಿಕ್ಕಾಗಿ ಹವಣಿಸುತ್ತಿರುವ ಜನರಲ್ ಜಿಯಾಉಲ್‌ಹಕ್ ಅಹ್ಮದೀಯರ ವಿರುದ್ಧ ಇನ್ನೂ ಕಠಿಣ ಕ್ರಮಗಳನ್ನು ಕೈಗೊಳ್ಳಲಾಗುವುದೆಂದು ಬೆದರಿಕೆ ಹಾಕಿದ್ದಾರೆ. ಅಹ್ಮದೀಯರು ಎರಡರಲ್ಲೊಂದು ಮಾರ್ಗವನ್ನು ಸ್ವೀಕರಿಸಬೇಕೆಂದು ಜನರಲ್ ತಾಕೀತು ಮಾಡಿದ್ದಾರೆ: "ಅವರು ಇಸ್ಲಾಮನ್ನು ಆಶ್ಲೇಷಿಸಿ ತಮ್ಮ ಅಪರಾಧಗಳಿಗೆ ಅಲ್ಲಾಹನೊಡನೆ ಕ್ಷಮೆಯನ್ನು ಯಾಚಿಸಬೇಕು; ಅಥವಾ ಒಂದು ಅಮುಸ್ಲಿಂ ಅಲ್ಪಸಂಖ್ಯಾಕ ಪಂಗಡವೆಂಬ ಸ್ಥಾನವನ್ನು ಅವರು ಅಂಗೀಕರಿಸಬೇಕು".
"They should either embrace Islam and seek Almighty Allah's foregiveness for their sins or should accept their status as a (non-Muslim) minority in the country".
-Emirate News, Khaleej Times : 12-5-84.
ಪೆಶಾವರದಲ್ಲಿ ಮುಸ್ಲಿಂ ಕಾಂಗ್ರೆಸ್ ಸಮ್ಮೇಳನದಲ್ಲಿ ಭಾಷಣ ಮಾಡುತ್ತಾ ಜಿಯಾ ಅಹ್ಮದೀಯರಿಗೆ ಈ ರೀತಿ ಎಚ್ಚರಿಕೆ ಕೊಟ್ಟರು:

"If they persist in their un Islamic activities, the most stringent action will be taken against them."- Reuter (Kuwaith Times)

ಅವರು ಅನಿಸ್ಲಾಮಿಕ ಚಟುವಟಿಕೆಗಳಲ್ಲಿ ದೃಢವಾಗಿ ನಿಲ್ಲುವುದಾದರೆ ಅವರ ವಿರುದ್ಧ ಅತ್ಯಂತ ಬಿಗಿಯಾದ ಕ್ರಮಗಳನ್ನು ಕೈಗೊಳ್ಳಲಾಗುವುದು."

ಜಿಯಾಉಲ್‌ಹಕ್ ತಾನು 'ಖಾದಿಯಾನಿ' ಅಲ್ಲವೆಂದು ಹಲವು ಸಲ ಪುನರಾವರ್ತಿಸಿ ಮನಗಾಣಿಸಲು ಶ್ರಮಿಸಿದ್ದಾರೆ. ಆದರೆ, ಅವರಿಗೆ ಸರ್ವಶಕ್ತನಾದ ಅಲ್ಲಾಹನಲ್ಲಿ ನಂಬಿಕೆ ಇದೆಯೋ ಎಂದಾಗಿದೆ ಅಹ್ಮದೀಯರಿಗಿರುವ ಸಂದೇಹ.

## ಇಸ್ಲಾಮಿನೆಡೆಗೆ ಆಮಂತ್ರಣ

ಚರಿತ್ರೆಯ ಅತ್ಯಂತ ದೊಡ್ಡ ಒಂದು ತಮಾಷೆಯಾಗಿದೆ ಇದು! ಇಸ್ಲಾಂ ಧರ್ಮದಲ್ಲಿ ದೃಢವಾಗಿ ವಿಶ್ವಾಸವಿರಿಸಿದವರನ್ನು, ಇಸ್ಲಾಮಿಗಾಗಿ ಜೀವಿತವನ್ನು ಪಣವಾಗಿಟ್ಟಿರುವವರನ್ನು ಇಸ್ಲಾಮಿನೊಂದಿಗೆ ನಾಮಮಾತ್ರ ಸಂಬಂಧವಿರುವವರು ಇಸ್ಲಾಮಿನೆಡೆಗೆ ಆಮಂತ್ರಿಸುತ್ತಾರೆ! ಇಸ್ಲಾಮಿಕ ಜೀವನ ಕ್ರಮವನ್ನು ಕೈಗೊಂಡವರೊಡನೆ ಅನಿಸ್ಲಾಮಿಕ ಚಟುವಟಿಕೆಯಲ್ಲಿ ಮುಂದುವರಿದರೆ ಶಿಕ್ಷಿಸಲಾಗುವುದೆಂದು ಎಚ್ಚರಿಸಲಾಗುತ್ತದೆ. 'ಶಹಾದತ್ ಕಲಿಮ' ಉಚ್ಚರಿಸುವುದು, 'ಅಝಾನ್'' ಹೇಳುವುದು, ಇಸ್ಲಾಮಿಕ ಚಿಹ್ನೆಗಳನ್ನು ಸ್ವೀಕರಿಸುವುದು, ಮುಸ್ಲಿಂ ಎಂದು ಹೇಳುವುದು, ಮುಸ್ಲಿಂ ಎಂಬ ರೀತಿಯಲ್ಲಿ ಅಭಿವ್ಯಕ್ತಪಡಿಸುವುದು, ಸಲಾಂ ಹೇಳುವುದು ಇತ್ಯಾದಿ ನಿಯಮದ ದೃಷ್ಟಿಯಲ್ಲಿ ಅಪರಾಧ. ಆಗ ಇವೆಲ್ಲಾ ಅನಿಸ್ಲಾಮಿಕ ವರ್ತನೆ! ಇಸ್ಲಾಮಿಕವಾಗಿ ಜೀವನ ನಡೆಸುವುದು ಇಲ್ಲಿ ನಿಯಮಾನುಸಾರ ಅನಿಸ್ಲಾಮಿಕ ಕ್ರಿಯೆ. ಮತ್ತೆ ಜಿಯಾಉಲ್‌ಹಕ್ ಅಹ್ಮದೀಯರನ್ನು ಎಲ್ಲಿಗೆ ಆಮಂತ್ರಿಸುವುದು ? ಅವರ ಇಸ್ಲಾಂ ಯಾವುದು?

ಈ ವಿರೋಧಾಭಾಸವನ್ನು ಪವಿತ್ರ ಖುರ್‌ಆನ್ "ವಹುವ ಯುದ್‌ಆ ಇಲಲ್ ಇಸ್ಲಾಂ" (ಅವರು ಇಸ್ಲಾಮಿನೆಡೆಗೆ ಆಮಂತ್ರಿಸಲ್ಪಡುವರು) ಎಂದು ಮುಂದಾಗಿಯೇ ಹೇಳಿದೆ. ಮಹ್‌ದಿ ಇಮಾಂ ಅವತರಿಸಿದರೆ 'ಫುಕಹಾ'ಗಳು ಅವರನ್ನು ಕಾಫಿರೆಂದು ಘೋಷಿಸುವರೆಂದೂ ತಮ್ಮ ಇಸ್ಲಾಮಿನೆಡೆಗೆ ಅವರನ್ನು ಆಮಂತ್ರಿಸುವರೆಂದೂ ಖುರ್‌ಆನ್ ಭವಿಷ್ಯ ನುಡಿದಿದೆ. ಪ್ರವಾದಿ ಮುಹಮ್ಮದ್ (ಸ.) ಲೋಕದ ಜನರನ್ನು ಇಸ್ಲಾಮಿನೆಡೆಗೆ ಆಹ್ವಾನಿಸಿದ ವ್ಯಕ್ತಿಯಾಗಿದ್ದರು. ಆ ಮಹಾಪುರುಷರನ್ನು ಯಾರೂ ಇಸ್ಲಾಮಿನೆಡೆಗೆ ಆಹ್ವಾನಿಸಿರಲಿಲ್ಲ. ಇಸ್ಲಾಮಿನ ವೃತ್ತದಿಂದ ಹೊರಗೆ ಹಾಕಲ್ಪಟ್ಟದ್ದು ಮತ್ತು ಇಸ್ಲಾಮಿನೆಡೆಗೆ ಆಹ್ವಾನಿಸಲ್ಪಟ್ಟದ್ದು ವಾಗ್ದತ್ತ ಮಹ್‌ದಿ ಇಮಾಂ ಮತ್ತು ಅನುಯಾಯಿಗಳೆಂಬುದಾಗಿದೆ ಸತ್ಯ.

ಉಲಮಾಗಳ ಮುಂದೆ ಮೊಣಕಾಲೂರಿದ ಲಷ್ಕರಿ ಆಡಳಿತಾಧಿಕಾರಿ ಜನರಲ್ ಜಿಯಾ ಉಲ್‌ಹಕ್ ಉಲಮಾಗಳ ಬೇಡಿಕೆಗಳನ್ನು ಹೆಚ್ಚು ಹೆಚ್ಚಾಗಿ ಪೂರೈಸಲಿಕ್ಕಾಗಿ ಒತ್ತಾಯಿಸಲ್ಪಡುವರೆಂದೂ ಕೊನೆಗೆ ಅವರ ಕೋಪಕ್ಕೆ ತುತ್ತಾಗಬೇಕಾದೀತೆಂಬುದೂ ದಿಟ. ಅವರ ಬೇಡಿಕೆಗಳಿಗೆ ಮಣಿಯದಿದ್ದರೆ ಅವರು ಜಿಯಾರನ್ನು "ಖಾದಿಯಾನಿ" ಎಂದು ಘೋಷಿಸುವರು. "ಆಗೆ ಆಗೆ ದೇಖಿಯೇ ಹೋತಾ ಹೈ ಕ್ಯಾ" ಇನ್ನು ಮುಂದಕ್ಕೆ ಏನೆಲ್ಲಾ ಸಂಭವಿಸುತ್ತದೆಂದು ನಮಗೆ ಕಾಣಬಹುದು !

ಅಹ್ಮದೀಯರಿಗೆ ತಮ್ಮ ಮತವಿಶ್ವಾಸವನ್ನು ಅನುಷ್ಠಿಸುವ ಮತ್ತು ಪ್ರಚಾರ ಮಾಡುವ ಮಾನವಿಕ ಮೂಲಭೂತ ಹಕ್ಕುಗಳು ಪಾಕಿಸ್ತಾನದಲ್ಲಿ ನಿಷೇಧಿಸಲ್ಪಟ್ಟಿವೆ. ತಮ್ಮ ಮನಸ್ಸಾಕ್ಷಿಗೊಪ್ಪುವ ಧರ್ಮವಿಶ್ವಾಸವನ್ನು ಅವರು ಹೊಂದಿದರೆ, ಇಸ್ಲಾಮೀ ರೀತಿಯಲ್ಲಿ ವರ್ತಿಸಿದರೆ, ಅನಿಸ್ಲಾಮಿಕ ಪ್ರವರ್ತನೆಯಲ್ಲಿ ತೊಡಗಿದ ತಪ್ಪನ್ನು ಹೊರಿಸಿ ಏಕಪಕ್ಷೀಯವಾಗಿ ಶಿಕ್ಷೆಗೆ ಗುರಿಪಡಿಸಲಾಗುವುದು. ಈ ಅನೀತಿಯ ವಿರುದ್ಧವಾಗಿ ದೂರು ಸಲ್ಲಿಸಲು ಯಾವ ನ್ಯಾಯಾಲಯದ ಬಾಗಿಲೂ ಅವರಿಗೆ ತೆರೆದಿರಿಸಲಾಗುವುದಿಲ್ಲ. ಆದರೆ ಇಸ್ಲಾಂ ಧರ್ಮದೊಡನೆ ತಮಗಿರುವ ಭಕ್ತಿ ವಿಶ್ವಾಸವನ್ನು ತ್ಯಜಿಸಲಿಕ್ಕೂ ಮುಸ್ಲಿಂ ಎಂಬ ರೀತಿಯಲ್ಲಿ ವರ್ತಿಸದಿರಲಿಕ್ಕೂ ಅಹ್ಮದೀಯರಿಗೆ ಹೇಗೆ ಸಾಧ್ಯ? ಯಥಾರ್ಥ ಮುಸ್ಲಿಮರು ತಾವೆಂದು ವಾದಿಸುವ ಅವರ ಸಂಬಂಧಿಸಿದ ಮಟ್ಟಿಗೆ, ಇಸ್ಲಾಂ ಅವರಿಗೆ ಜೀವವಾಯು. ಅವರ ಜೀವರಕ್ತದ ಪ್ರತಿಯೊಂದು ಕಣ ಸಹ ಮುಸ್ಲಿಂ. ವಿಶ್ವಾಸ ಸ್ವಾತಂತ್ರ್ಯ ಮತ್ತು ಮನಸ್ಸಾಕ್ಷಿ ಸ್ವಾತಂತ್ರ್ಯಗಳಿಗೆ ವಿರುದ್ಧವಾದ ಇಂತಹ ಅಕ್ರಮಗಳನ್ನು ಪ್ರವಾದಿ ಕಾಲಘಟ್ಟಗಳಲ್ಲಿ ಮಾತ್ರ ಲೋಕ ಕಂಡಿದೆ.

### ಚರಿತ್ರೆಯನ್ನು ತಿರುವಿಹಾಕಿದರೆ

ಮಾನವ ಸ್ವಾತಂತ್ರ್ಯಕ್ಕೆ ವಿರುದ್ಧವಾದ ಇಂತಹ ಬೀಭತ್ಸವಾದೊಂದು ಆಕ್ರಮಣ ಇದರ ಮೊದಲು ಲೋಕದಲ್ಲಿ ನಡೆದಿದ್ದರೆ ಚರಿತ್ರೆಗಾರರು ತೋರಿಸಲಿ! ವಿಶ್ವಾಸವನ್ನು ತೊರೆಯಲಿಕ್ಕೂ ಪ್ರಸ್ಥಾನಗಳನ್ನು ಕೈಬಿಡಲಿಕ್ಕೂ ತತ್ವಶಾಸ್ತ್ರಗಳನ್ನು ತ್ಯಜಿಸಲಿಕ್ಕೂ ನಿರ್ಬಂಧಿಸಿ ಪೈಶಾಚಿಕವಾಗಿ ದಂಡಿಸಿದ ಭೀಕರ ಆಳ್ವಿಕೆಗಳ ಕುರಿತು ಕೇಳಿದ್ದೇವೆ. ಫಿರ್‌ಔನ್‌ಗಳ ಮತ್ತು ನಂರೂದ್‌ಗಳ ಚರಿತ್ರೆಯನ್ನು ಖುರ್‌ಆನ್ ವಿವರಿಸಿದೆ. ಕ್ರೈಸ್ತರನ್ನು ಹಿಂಸ್ರ ಮೃಗಗಳಿಗೆ ಎಸೆದು ಆ ಮೃಗಗಳು ಜೀವಂತ ಮನುಷ್ಯರನ್ನು ಕಚ್ಚಿ ಸೀಳಿ ಹಾಕುವುದನ್ನು ನೋಡಿ ಆನಂದಿಸಿದ ರೋಮನ್ ಚಕ್ರವರ್ತಿಗಳ ಕುರಿತು ಚರಿತ್ರೆಯಲ್ಲಿ ಓದಿದ್ದೇವೆ. ಭಯಂಕರ ವ್ಯಕ್ತಿಯಾದ ಐವಾನನನ್ನೂ ನಿಷ್ಠುರನಾದ ಹಿಟ್ಲರನನ್ನೂ ಕ್ರೂರವಾಗಿ ವರ್ತಿಸಿದ ಸ್ಟಾಲಿನನನ್ನೂ ಕುರಿತು ಮತ್ತು ಅವರ ದೌರ್ಜನ್ಯ ವಿಧಾನಗಳ ಬಗ್ಗೆ ನಾವು ಕಲಿತಿದ್ದೇವೆ. ಇವರ್‍ಯಾರೂ ಮತವಿಶ್ವಾಸದ ಕುರಿತು ಸುಳ್ಳು ಹೇಳಲು ನಿರ್ಬಂಧಿಸಲಿಲ್ಲ. ದಂಡಿಸಿ ಸತ್ಯ ಹೇಳಿಸುವುದರ ಬಗ್ಗೆ ಮಾತ್ರ ನಾವು ಇದು ವರೆಗೆ ಕೇಳಿದ್ದೇವೆ. ಚರಿತ್ರೆಯಲ್ಲಿ ಮೊತ್ತಮೊದಲಿಗೆ ಇದೋ ಪಾಕಿಸ್ತಾನದ ಸೇನಾಡಳಿತಾಧಿಕಾರ ಸುಳ್ಳು ಹೇಳಿಸಲು ಜನರನ್ನು ದಂಡಿಸುತ್ತಿದೆ. ಒಬ್ಬ ಅಹ್ಮದಿ ತಾನು ಮುಸ್ಲಿಮೆಂದು ದೃಢವಾಗಿ ನಂಬುವವನೆಂಬ ವಿಚಾರದಲ್ಲಿ ಯಾರಿಗೆ ಸಂಶಯ ಪಡಲು ಸಾಧ್ಯ? ಆತನ ನಂಬಿಕೆಗಳು ಯಥಾರ್ಥ ಇಸ್ಲಾಂ ಅಲ್ಲವೆಂದು ಇತರರು ಹೇಳಬಹುದು. ಆದರೆ, ತಾನು ಇಸ್ಲಾಂ ಧರ್ಮವನ್ನು ನಂಬುವುದಿಲ್ಲವೆಂದು, ತಾನೊಬ್ಬ ಮುಸ್ಲಿಂ ಅಲ್ಲವೆಂದು ಆ ಅಹ್ಮದಿಯ ಬಾಯಿಂದ ಹೇಳಿಸಲು ಯಾರಿಗಿದೆ ಹಕ್ಕೂ ಅಧಿಕಾರವೂ? ಅಲ್ಲಾಹನ ಹೊರತು ಆರಾಧ್ಯನಿಲ್ಲವೆಂದೂ ಮುಹಮ್ಮದ್ ಅಲ್ಲಾಹನ ಪ್ರವಾದಿಯೆಂದೂ ತಾನು ನಂಬುವುದಿಲ್ಲವೆಂದು ಆತನು ಹೇಗೆ ಘೋಷಿಸುವುದು ? ಪಾಕಿಸ್ತಾನದಲ್ಲಿ ಸಾಮಾನ್ಯ ಜೀವನ ನಡೆಸಬೇಕಾದರೆ ಓರ್ವ ಅಹ್ಮದಿ ಹೀಗೆ ಸಾರಬೇಕೆಂದು ಹೊಸ ನಿಯಮ ಅನುಶಾಸಿಸುತ್ತದೆ.

ಅಹ್ಮದೀಯರು ತಮ್ಮ ನೈಜ ವಿಶ್ವಾಸಗಳನ್ನು ಪ್ರಕಟಪಡಿಸುವುದು, ಆಚರಿಸುವುದು, ಪ್ರಚಾರಗೊಳಿಸುವುದು ಇತ್ಯಾದಿಗಳು ಪಾಕಿಸ್ತಾನದ ಮುಸ್ಲಿಂ ಜನಸಾಮಾನ್ಯರ ಧಾರ್ಮಿಕ ಮನೋಭಾವನೆಗಳನ್ನು ನೋಯಿಸುವುವೆಂದು ಆರ್ಡಿನನ್ಸ್ ಹೇಳುತ್ತದೆ. ದೇವನು ಏಕನೆಂದೂ ಅವನಿಗೆ ಸಹಭಾಗಿ ಯಾರೂ ಇಲ್ಲವೆಂದೂ ಮುಹಮ್ಮದ್ ಪೈಗಂಬರ್(ಸ) ಅಲ್ಲಾಹನ ಪ್ರವಾದಿಯೆಂದೂ ಒಬ್ಬ ಅಹ್ಮದಿ ಸಾರುವುದು ಪಾಕಿಸ್ತಾನದ ಮುಸ್ಲಿಮರ ಧಾರ್ಮಿಕ ಮನೋಭಾವನೆಗಳನ್ನು ನೋಯಿಸುವುದೇ? ಪವಿತ್ರ ಖುರ್‌ಆನ್ ಅಲ್ಲಾಹನ ವಚನಗಳೆಂದೂ ಅದರ ಒಂದೇ ಒಂದು ಅಕ್ಷರಕ್ಕಾದರೂ ಯಾವುದೇ ವ್ಯತ್ಯಾಸ ಉಂಟಾಗಿಲ್ಲವೆಂದೂ ಯಾವುದೇ ಮಾರ್ಪಾಟು ಉಂಟಾಗಲಾರದೆಂದೂ ಒಬ್ಬ ಅಹ್ಮದಿ ಘೋಷಿಸುವುದು ಪಾಕಿಸ್ತಾನದ ಮುಸ್ಲಿಮರ ಧಾರ್ಮಿಕ ಮನೋಭಾವನೆಗಳನ್ನು ನೋಯಿಸುವುದೇ? ಅಹ್ಮದೀಯರು ಈ ಸತ್ಯಾಂಶಗಳನ್ನು ಅಲ್ಲಗಳೆದರೆ ಮಾತ್ರ ಅವರಿಗೆ ಆಶ್ವಾಸ ಮತ್ತು ಆಹ್ಲಾದ ಲಭಿಸುವುದೇ? ಅವರು ಹೇಳುವುದು ಏನೆಂದು ಅವರಿಗೆಯೇ ತಿಳಿಯದಂತಾಗಿದೆ!

ಇದಕ್ಕಿಂತ ದೊಡ್ಡ ಒಂದು ಮತಪೀಡತನದ ಕುರಿತು, ಇದಕ್ಕಿಂತ ದೊಡ್ಡ ಒಂದು ಮಾನವ ಹಕ್ಕು ಧ್ವಂಸನದ ಬಗ್ಗೆ ನಮಗೆ ಚಿಂತಿಸಲು ಸಾಧ್ಯವೇ? ಎಲ್ಲಾ ಮನುಷ್ಯ ಮರ್ಯಾದೆಗಳೂ ಎಲ್ಲಾ ಮಾನುಷಿಕ ಮೌಲ್ಯಗಳೂ ಇಲ್ಲಿ ಕಿತ್ತೆಸೆಯಲ್ಪಟ್ಟಿವೆ. ನಾಗರಿಕ ನಡೆವಳಿಕೆ ಕ್ರಮಗಳು ಇಲ್ಲಿ

ತುಳಿದು ಹೊಸಕಿ ಹಾಕಲ್ಪಟ್ಟಿವೆ. ಕಿರಾತವೂ ಪೈಶಾಚಿಕವೂ ಆದ ಒಂದು ತರದ ಅಧಿಕಾರ ಇಲ್ಲಿ ತಾಂಡವವಾಡುತ್ತಿದೆ.

## ರಾಜಕೀಯ ಪ್ರಚೋದಿತ

ಪಾಕಿಸ್ತಾನದಲ್ಲಿ ಜಾರಿಗೊಳಿಸಿದ ಹೊಸ ಆರ್ಡಿನನ್ಸ್ ರಾಜಕೀಯ ಪ್ರಚೋದಿತವೆಂದೂ ಜಿಯಾಉಲ್‌ಹಕ್ ತನ್ನ ಆಳ್ವಿಕೆಯನ್ನು ಭದ್ರಗೊಳಿಸಲಿಕ್ಕಾಗಿ ಈ ಕ್ರಮವನ್ನು ಕೈಗೊಂಡದ್ದೆಂಬುದೂ ಬಹಳ ಸ್ಪಷ್ಟ. ಇದಕ್ಕೆ ಮೊದಲು ಅಹ್ಮದೀಯರ ವಿರುದ್ಧ ಕ್ರಮ ಕೈಗೊಂಡವರು ಸಹ ರಾಜಕೀಯ ಉದ್ದೇಶಗಳನ್ನು ಇಟ್ಟುಕೊಂಡೇ ಹಾಗೆ ಮಾಡಿದ್ದರು. ಪಾಕಿಸ್ತಾನದಲ್ಲಿ ಅಹ್ಮದಿಯಾ ವಿರುದ್ಧ ಗಲಭೆಗಳಿಗೆ ನೇತೃತ್ವವನ್ನು ನೀಡುತ್ತಿರುವ, ಉರಿಯುವ ಬೆಂಕಿಗೆ ಎಣ್ಣೆ ಹೊಯ್ಯುತ್ತಿರುವ ಅಲ್ಲಿಯ ಫಾಸಿಸ್ಟ್ ಪಾರ್ಟಿಯಾದ 'ಜಮಾತೆ ಇಸ್ಲಾಮಿ' ಸಂಘಟನೆಯ ಕೇರಳದ ಮುಖವಾಣಿಯಾದ 'ಪ್ರಬೋಧನಂ' ಈ ವಾಸ್ತವಾಂಶವನ್ನು ಬಹಿರಂಗಪಡಿಸಿರುವುದು ಗಮನಾರ್ಹ.

"ಪಾಕಿಸ್ತಾನದ ಖಾದಿಯಾನಿ ಆರ್ಡಿನನ್ಸ್" ಎಂಬ ಶೀರ್ಷಿಕೆಯಲ್ಲಿ ಪ್ರಕಟಿಸಿದ ಲೇಖನದಲ್ಲಿ 'ಪ್ರಬೋಧನಂ' ಹೀಗೆ ಹೇಳುತ್ತದೆ :

"ಇದಕ್ಕೆ ಮೊದಲು ಖಾದಿಯಾನಿ ಸಮಸ್ಯೆಯ ಬಗ್ಗೆ ವ್ಯವಹರಿಸಿದವರಿಗೆ ರಾಜಕೀಯ ಲಾಭಗಳ ಗಳಿಕೆ ಹೊರತು ಬೇರೆ ಯಾವುದೇ ಲಕ್ಷ್ಯವಿರಲಿಲ್ಲ ಎಂಬುದಾಗಿದೆ ಇದರ ಕಾರಣ. ರಾಷ್ಟ್ರದ ನಿರ್ಣಾಯಕ ವಲಯಗಳಲ್ಲಿ ಖಾದಿಯಾನಿಗಳಿಗೆ ಮೇಲೇರಲು ಹಾಗೆ ಸಾಧ್ಯವಾಯಿತು.

"1952–53 ಕಾಲದಲ್ಲಿ ಖಾದಿಯಾನಿ ಸಮಸ್ಯೆಯನ್ನು ಮೊತ್ತ ಮೊದಲಿಗೆ ಎತ್ತಿ ಹಿಡಿದದ್ದು ಒಬ್ಬ ಪಂಜಾಬಿ ರಾಜಕೀಯ ನಾಯಕ. ತನ್ನ ರಾಜಕೀಯ ಸ್ವಾರ್ಥ ಲಾಲಸೆ ಆತನನ್ನು ಅದಕ್ಕೆ ಪ್ರೇರೇಪಿಸಿತು. ಪೂರ್ವ ಪಾಕಿಸ್ತಾನಿಯೂ ಇಸ್ಲಾಮಿಸ್ಟೂ ಆಗಿದ್ದ ಖಾಜಾ ನಸೀಮುದ್ದೀನರನ್ನು ಪ್ರಧಾನಮಂತ್ರಿ ಪದದಿಂದ ವಜಾ ಮಾಡಬೇಕು. ಅವರ ನಂತರ ಖಾದಿಯಾನಿಯಾದ ಸರ್ ಝಫರುಲ್ಲಾ ಖಾನ್ ಅಧಿಕಾರಕ್ಕೆ ಬರುವ ಸಾಧ್ಯತೆಯನ್ನು ಇಲ್ಲದೆ ಮಾಡಬೇಕು–ಇದಾಗಿತ್ತು ಆತನ ಗುರಿ.

"1974ರಲ್ಲಿ ಖಾದಿಯಾನಿಗಳನ್ನು ಅಮುಸ್ಲಿಂ ಅಲ್ಪಸಂಖ್ಯಾಕರೆಂದು ಘೋಷಿಸಲು ಭುಟ್ಟೋ ಸಿದ್ಧನಾದುದರ ಮರೆಯಲ್ಲೂ ರಾಜಕೀಯ ಸ್ವಾರ್ಥ ಲಾಲಸೆಗಳಿದ್ದವು. ಭುಟ್ಟೋರನ್ನು ಅಧಿಕಾರಕ್ಕೇರಿಸುವುದರಲ್ಲಿ ಖಾದಿಯಾನಿಗಳು ನಿರ್ಣಾಯಕವಾದ ಪಾತ್ರ ವಹಿಸಿದ್ದರು. ತನಗೆ ಅಧಿಕಾರ ಸ್ಥಾನ ನೀಡಿದವರಿಗೆ ತನ್ನಿಂದ ಅದನ್ನು ಕಸಿದುಕೊಳ್ಳುವ ಶಕ್ತಿ ಸಹ ಉಂಟೆಂದು ಭುಟ್ಟೋ ಭಯಗೊಂಡರು. ತನ್ನ ಸ್ಥಾನವನ್ನು ಭದ್ರಪಡಿಸಲಿಕ್ಕಾಗಿ ಭುಟ್ಟೋ ಕಂಡ ಮಾರ್ಗವೇನೆಂದರೆ ಖಾದಿಯಾನಿಗಳ ಪ್ರಭಾವ, ವಿಶೇಷವಾಗಿ ಸೈನ್ಯದಲ್ಲಿ ಅವರಿಗಿದ್ದ ಪ್ರಭಾವವನ್ನು ಕಡಿಮೆಗೊಳಿಸುವುದಾಗಿತ್ತು. ಸೇನೆಯಲ್ಲಿ ಉನ್ನತಾಧಿಕಾರಿಗಳಾಗಿದ್ದ ಹಲವು ಖಾದಿಯಾನಿಗಳನ್ನು ಯುಕ್ತಿಪೂರ್ವಕವಾಗಿ ಅವರು ವಜಾ ಮಾಡಿದರು.

"ಆದರೆ, ಖಾದಿಯಾನಿಗಳಿಗೆ ಭುಟ್ಟೋರ ಈ ವರ್ತನೆ ಸಹಿಸಲಿಲ್ಲ. ನಿವೃತ್ತ ಏರ್‌ಮಾರ್ಷಲ್ ಅಸ್ಗರ್ ಖಾನನ್ನು ಭುಟ್ಟೋರ ಉತ್ತರಾಧಿಕಾರಿಯನ್ನಾಗಿ ಮಾಡುವ ಪ್ರಯತ್ನವನ್ನು ಅವರು ಆರಂಭಿಸಿದರು. ಈ 'ರಾಜ್ಯದ್ರೋಹ'ಕ್ಕೆ ಪ್ರತೀಕಾರ ಎಂಬಂತೆ ಅಹ್ಮದೀಯರನ್ನು ಮುಸ್ಲಿಮೇತರ ಅಲ್ಪಸಂಖ್ಯಾಕರೆಂದು ಸಾರುವ ಸಾಂವಿಧಾನಿಕ ತಿದ್ದುಪಡಿಯುಂಟಾಯಿತು. ಭುಟ್ಟೋರದ್ದು ರಾಜಕೀಯ ಸ್ವಾರ್ಥಲಾಲಸೆ ಆಗಿದ್ದರೂ ಅವರೊಂದಿಗೆ ಹಲವು ವಿಚಾರಗಳಲ್ಲಿ ಭಿನ್ನಾಭಿಪ್ರಾಯವಿದ್ದರೂ ಪಾಕಿಸ್ತಾನೀ ಮುಸ್ಲಿಮರು ಆ ತೀರ್ಮಾನದ ಬಗ್ಗೆ ಅತೀವ ಸಂತೋಷಪಟ್ಟರು.

"ಆದರೆ, ಅಹ್ಮದೀಯರ ವೃದ್ಧಿಗೊಳ್ಳುತ್ತಿರುವ ಪ್ರಭಾವನ್ನು ತಡೆಯಲಿಕ್ಕಾಗಲಿ, ದಾರಿತಪ್ಪಿದ ಖಾದಿಯಾನೀ ದರ್ಶನಗಳ ಪ್ರಚಾರವನ್ನು ಮೊಟಕುಗೊಳಿಸಲಿಕ್ಕಾಗಲಿ ಭುಟ್ಟೋ ಆಗಲಿ, ಅವರ ನಂತರ ಅಧಿಕಾರಕ್ಕೆ ಬಂದವರಾಗಲಿ ಫಲಪ್ರದ ಕ್ರಮಗಳನ್ನು ಕೈಗೊಳ್ಳಲಿಲ್ಲ ಎಂದು ಮನವರಿಕೆಯಾಗುತ್ತದೆ."

(ಪ್ರಬೋಧನಂ : 26-5-1984)

1952–53ರಲ್ಲಿ ಅಹ್ಮದಿಯಾ ವಿರುದ್ಧ ಗಲಭೆಯನ್ನು ಮಿಯಾನ್ ಮುಮ್ತಾಜ್ ದೌಲತಾನ ಎಬ್ಬಿಸಿದ ಮರೆಯಲ್ಲೂ 1974ರಲ್ಲಿ ಅಹ್ಮದೀಯರನ್ನು ಅಮುಸ್ಲಿಂ ಅಲ್ಪಸಂಖ್ಯಾಕರೆಂದು ಘೋಷಿಸಲಿಕ್ಕೆ ಭುಟ್ಟೋ ಸಿದ್ಧನಾದುದರ ಮರೆಯಲ್ಲೂ ರಾಜಕೀಯ ಸ್ವಾರ್ಥಲಾಲಸೆಗಳಿದ್ದವೆಂದು ಫಾಸಿಸ್ಟ್ 'ಜಮಾತೆ ಇಸ್ಲಾಮಿ'ಯ ಕೇರಳ ಮುಖವಾಣಿ ಒಪ್ಪಿಕೊಂಡಿದೆ. ತನಗೆ ಅಧಿಕಾರ ಸ್ಥಾನ ನೀಡಿದ

ವರಿಗೆ ತನ್ನಿಂದ ಅದನ್ನು ಕಸಿದುಕೊಳ್ಳಲು ಸಾಮರ್ಥ್ಯವಿದೆಯೆಂದು ಹೆದರಿ, ತನ್ನ ಸ್ಥಾನವನ್ನು ಭದ್ರಪಡಿಸುವ ಸ್ವಾರ್ಥ ಉದ್ದೇಶದಿಂದ ಭುಟ್ಟೋ ಅಹ್ಮದೀಯರನ್ನು ಮುಸ್ಲಿಮೇತರ ಅಲ್ಪಸಂಖ್ಯಾತರೆಂದು ಸಾರುವ ಸಾಂವಿಧಾನಿಕ ತಿದ್ದುಪಡಿ ತಂದದ್ದೆಂದು 'ಪ್ರಬೋಧನಂ' ಹೇಳಿಕೊಡುತ್ತದೆ!

ಹಾಗಿರುವಾಗ 1974ರಲ್ಲಿ ಗಲಭೆಗೆ ಹೇತುವಾದ 'ರಬ್ವಾ ರೈಲ್ವೇ ನಿಲ್ದಾಣ ಘಟನೆ'ಯು ಅಹ್ಮದೀಯರಿಗೆ ಪ್ರತೀಕಾರ ಮಾಡಲಿಕ್ಕಾಗಿ ಜುಲ್ಫಿಕರಲಿ ಭುಟ್ಟೋ ಹೂಡಿದ ತಂತ್ರವೆಂದು 'ಪ್ರಬೋಧನಂ' ಈಗ ವ್ಯಕ್ತಪಡಿಸಿರುತ್ತದೆ ! 'ರಬ್ವಾ ಘಟನೆ'ಯನ್ನು 'ಪ್ರಬೋಧನಂ' ಸಹ ಎತ್ತಿ ಹಿಡಿದಿತ್ತಲ್ಲವೇ?. ಆ ಸಂಭವ ಜುಲ್ಫಿಕರಲಿ ಭುಟ್ಟೋರ ಮಸ್ತಿಷ್ಕದಲ್ಲಿ ರೂಪಗೊಂಡ ಒಂದು ಗೂಢಾಲೋಚನೆಯಾಗಿತ್ತೆಂದು ಅಹ್ಮದೀಯರು ಬೊಟ್ಟು ಮಾಡಿದ್ದರು. ಆ ಸಂಭವ ಅಹ್ಮದೀಯರಿಂದ ಉಂಟಾದುದಲ್ಲವೆಂದೂ ಅದೊಂದು ಗೂಢಾಲೋಚನೆಯಾಗಿತ್ತೆಂದೂ ಸಮದಾನಿ ಕಮಿಷನ್ ರಿಪೋರ್ಟ್ ಸ್ಪಷ್ಟಪಡಿಸಿದ್ದರೂ ಆ ವರದಿ ಬಹಿರಂಗವಾಗಲಿಲ್ಲ. ಅದನ್ನು ಪ್ರಕಟಪಡಿಸಿದರೆ, 1974ರ ಗಲಭೆಗೆ ಹೇತುವಾದ ಆ ಪ್ರಕರಣದಲ್ಲಿ 'ಜಮಾತೆ ಇಸ್ಲಾಮಿ'ಗಿದ್ದ ಪಾತ್ರವನ್ನು ಸ್ಪಷ್ಟಪಡಿಸುವ ಹಲವು ರಹಸ್ಯಗಳು ಬಯಲಾಗುತ್ತಿದ್ದವು. ಹೇಗಿದ್ದರೂ, 1974ರ ಗಲಭೆಯ ಹಿನ್ನೆಲೆ ಚಿತ್ರವನ್ನು 'ಪ್ರಬೋಧನಂ' ಈಗಾದರೂ ಪರದೆ ಸರಿಸಿ ತೋರಿಸಿದುದಕ್ಕೆ ಅವರಿಗೆ ನಾನು ಕೃತಜ್ಞತೆ ಸಲ್ಲಿಸುತ್ತೇನೆ. ಜಿಯಾರ ಹೊಸ ಕಾರ್ಯಕ್ರಮ ಸಹ ಅವರ ಅಧಿಕಾರ ಸ್ಥಾನವನ್ನು ಭದ್ರಗೊಳಿಸಲಿಕ್ಕೆ ಮಾತ್ರವಾಗಿದೆಯೆಂದು 'ಪ್ರಬೋಧನಂ' ಇನ್ನೊಂದು ಸಂದರ್ಭದಲ್ಲಿ ವ್ಯಕ್ತಮಾಡಲೂ ಬಹುದು.

## ಅಹ್ಮದೀಯರ ಪ್ರತಿಕ್ರಿಯೆ

ಅಹ್ಮದೀಯರಿಗೆ ಸಂಬಂಧಿಸಿದ ಮಟ್ಟಿಗೆ ಈ ವಿಶೇಷಾಜ್ಞೆಯ ಬಗ್ಗೆ ಅವರ ಪ್ರತಿಕ್ರಿಯೆ ಬಹಳ ಸ್ಪಷ್ಟ. ನಿಯಮ ಅದೆಷ್ಟು ಕರ್ಕಶವಾದರೂ ದುರ್ಧರವಾದರೂ ಅವರು ಪರಮಾವಧಿ ಪಾಲಿಸುವರು ಕಾನೂನು ಬಾಹಿರವಾಗಿ ಅವರು ವರ್ತಿಸಲಾರರು. ಒಟ್ಟಾರೆ, ಅತ್ಯಂತ ಸಹನ ಪರೀಕ್ಷೆಗೆ ಒಳಗಾಗಿ ಅವರು ನಿಯಮವನ್ನು ಅನುಸರಿಸುವರು. ಆದರೆ ಈ ಅನುಸರಣೆ ಅಲ್ಲಾಹನ ಸ್ಪಷ್ಟವಾದ ಆಜ್ಞೆಗೆ ವಿರುದ್ಧವಾಗಲಾರದೆಂದು ದೃಢಪಡಿಸಿಕೊಳ್ಳುವರು. ಎಂದರೆ, ಅಲ್ಲಾಹನೊಡನಿರುವ ಹೊಣೆಗಾರಿಕೆಯನ್ನು ನಿರ್ವಹಿಸುವ ವಿಚಾರದಲ್ಲಿ ಲಷ್ಕರಿ ಆಡಳಿತಾಧಿಕಾರಿಯ ಆಜ್ಞೆಗೆ ಯಾವ ಬೆಲೆಯನ್ನೂ ಕೊಡಲಿಕ್ಕಿಲ್ಲವೆಂದು. ಅಹ್ಮದೀಯರಿಗೆ ಓರ್ವ ಇಮಾಂ (ಸರ್ವೋನ್ನತ ನಾಯಕ) ಇದ್ದಾರೆ. ಧಾರ್ಮಿಕ ವಿಚಾರಗಳಲ್ಲಿ ಆ ಇಮಾಮರ ಆಜ್ಞೆಯಾನುಸಾರ ಅವರು ವರ್ತಿಸುತ್ತಾರೆ. ದೇವ ಸನ್ನಿಧಿಯಲ್ಲಿ ಸಾಷ್ಟಾಂಗ ಎರಗಬೇಕೆಂದಾಗಿದೆ ಅವರ ಈಗಿನ ಆಜ್ಞೆ. ದೈವಾಜ್ಞೆಯನ್ನು ಪಾಲಿಸುವ ವಿಚಾರದಲ್ಲಿ ಸರಕಾರದ ಆಜ್ಞೆ ತಡೆಯಾಗಿ ಬರುವಾಗ ಏನು ಮಾಡಬೇಕೆಂದು ಅಹ್ಮದೀಯರಿಗೆ ಗೊತ್ತು!

ಆರ್ಡಿನನ್ಸ್ ಪ್ರಕಾರ ಪಾಕಿಸ್ತಾನದಲ್ಲಿರುವ ಐವತ್ತು ಲಕ್ಷ ಅಹ್ಮದೀಯರನ್ನು ಸಹ ಒಂದೇ ಸಮಯದಲ್ಲಿ ಕೈದು ಮಾಡಿ ಸೆರೆಮನೆಗೆ ಹಾಕಲು ಮಿಲಿಟರಿ 'ಜಂಟ'ಕ್ಕೆ ಸಾಧ್ಯವಾಗಬಹುದು. ಯಾವ ನಿಮಿಷದಲ್ಲೂ ಒಬ್ಬ ಅಹ್ಮದಿಯನ್ನು ಬಂಧಿಸಿ ಸ್ಥಾನಬದ್ಧತೆಯಲ್ಲಿರಿಸುವ ನಿಯಮವಾಗಿದೆ ಈಗ ಜಾರಿಯಲ್ಲಿರುವುದು. ಮುಸ್ಲಿಂ ಎಂದು ತೋರ್ಪಡಿಸಿದನೆಂಬ ಅಪರಾಧವನ್ನು ಯಾವ ಸಂದರ್ಭದಲ್ಲೂ ಒಬ್ಬ ಅಹ್ಮದೀಯನ ಮೇಲೆ ಹೊರಿಸಬಹುದಲ್ಲವೇ. ತಾನೊಬ್ಬ ಮುಸ್ಲಿಮನೆಂಬುದನ್ನು ಒಬ್ಬನೇ ಒಬ್ಬ ಅಹ್ಮದಿಯೂ ಅಲ್ಲಗಳೆಯಲಿಕ್ಕಿಲ್ಲವಾದ್ದರಿಂದ ಅವರನ್ನು ನೇರವಾಗಿ ಸೆರೆಮನೆಗೆ ಕೊಂಡೊಯ್ಯಬಹುದು. ಅತ್ಯಂತ ಪೀಡನೆಯುಂಟಾದರೂ ಬೇಜವಾಬ್ದಾರಿಯುತವಾಗಿಯೂ ಶಿಸ್ತುರಹಿತವಾಗಿಯೂ ವರ್ತಿಸಬಾರದೆಂದು ಖಲೀಫರ ಅಪ್ಪಣೆ. ಆ ಪರೀಕ್ಷಾ ಘಟ್ಟ ಬರುವುದಾದರೆ ಲಕ್ಷೋಪಲಕ್ಷ ಅಹ್ಮದೀಯರು ಜೈಲು ಸೇರಬಹುದು. ಸಂಹರಿಸಲ್ಪಡಲಿಕ್ಕೆ ಸಿದ್ಧವಾಗಿರುವ ಆಡಮಂದೆಯಂತೆ ಅವರು ಇಂದು ನಿಶ್ಶಬ್ದರಾಗಿ ಶ್ವಾಸ ಬಿಗಿಹಿಡಿದು ಕಾದು ನಿಂತಿದ್ದಾರೆ. ಅವರ ತ್ಯಾಗಶೀಲತೆಯನ್ನು ಒಂದು ವೇಳೆ ಎದುರಾಳಿಗಳಿಗೆ ಲೆಕ್ಕ ಹಾಕಲು ಸಾಧ್ಯವಾಗದಿರಬಹುದು. ಅವರ ಸಹನ ಶಕ್ತಿಯನ್ನೂ ಅವರಿಗೆ ಅಳೆಯಲು ಸಾಧ್ಯವಾಗಿದಲಿಕ್ಕಿಲ್ಲ. ಒಂದು ಸಾವಿರ ವರ್ಷ ಕಾಲ ಕಾದು ನಿಲ್ಲಬೇಕಾಗಿ ಬಂದರೆ ಸಹ ಅವರು ದಣಿದು ಕುಸಿಯಲಾರರು. ಅವರು ಎಂದಿಗೂ ಹಿಮ್ಮೆಟ್ಟಲಿಕ್ಕಿಲ್ಲ. ಏಕೆಂದರೆ ನಿಷ್ಕಲ್ಮಶ ಸತ್ಯವನ್ನು ತಾವು ಅಂಗೀಕರಿಸಿದ್ದೇವೆಂದು ಅವರಿಗೆ ಗೊತ್ತು. ಆ ಸತ್ಯದಲ್ಲಿ ಹೆಚ್ಚು-ಕಮ್ಮಿ ಮಾಡಲಸಾಧ್ಯ. ಸರ್ವಾಧಿನಾಥನ ಪವಿತ್ರ ಮುಖವೇ ತಮ್ಮ ಲಕ್ಷ್ಯವೆಂದು ಅವರು ಬಲ್ಲರು. ಹಿಮ್ಮೆಟ್ಟಿ

ಅವರು ಎಲ್ಲಿಗೆ ಮರಳುವುದು? ಅವರ ಹಿಂದೆ-ಮುಂದೆ, ಎಡ-ಬಲ, ಮೇಲೆ-ಕೆಳಗೆ ಎಲ್ಲೆಡೆಯಲ್ಲೂ ಸರ್ವಾಧಿನಾಥ ನಿದ್ದಾನೆಂಬ ನಂಬಿಕೆ ಅವರಿಗಿದೆ. ಕೋವಿ ತೋರಿಸಿ ಅವರ ನಂಬಿಕೆಯನ್ನು ಕಸಿಯಲಿಕ್ಕೆ ಯಾರಿಗಾದರೂ ಸಾಧ್ಯವಿದೆಯೇ? ಸಾಧ್ಯವಿಲ್ಲವೆಂದು ಅವರು ಹಲವು ಸಲ ಸಾಬೀತು ಪಡಿಸಿದ್ದಾರೆ. ಕಾಬೂಲಿನ ಮಣ್ಣಿನಲ್ಲಿ ಹಝ್ರತ್ ಅಬ್ದುಲ್ ಲತೀಫ್ ಶಾಹಿದ್ (ರ) ಅದರ ಮಹತ್ ಮಾದರಿಯನ್ನು ತೋರಿಸಿದ್ದಾರೆ. ಮುಂದುವರಿದು ಹಲವರು ಅಲ್ಲಿ ಅದನ್ನು ಪುನರಾವರ್ತಿಸಿದರು. ಪಾಕಿಸ್ತಾನದ ಮಣ್ಣಿನಲ್ಲೂ ಅಹ್ಮದೀಯರು ವೀರರಕ್ತಸಾಕ್ಷಿಯಾಗಿದ್ದಾರೆ. ಲೋಕದ ಹಲವೆಡೆಗಳಲ್ಲಿ ಅಹ್ಮದೀಯರು ಮಂದಹಾಸ ಸಹಿತ ಹುತಾತ್ಮರಾಗಿದ್ದಾರೆ. ಅಹ್ಮದಿಯತ್ ಎಂಬ ನಿಧಿಯ ಮುಂದೆ ಅವರ ಜೀವಕ್ಕೇನೂ ಬೆಲೆಯಿಲ್ಲ. ಮಹ್‌ದಿ ಇಮಾಮರೊಡನೆ ಅವರಿಗಿರುವ ಪ್ರೀತಿಯ ಮುಂದೆ ಅವರು ತಮ್ಮ ರಕ್ತಕ್ಕೆ ಸಹ ಏನೂ ಬೆಲೆ ಕಲ್ಪಿಸುವುದಿಲ್ಲ. ರಕ್ತದ ಹೊಳೆಗಳಿಂದ ಕೊಚ್ಚಿ ಹೋಗುವಂಥದಲ್ಲ ಪೈಗಂಬರ್ ಮುಹಮ್ಮದ್ ಮುಸ್ತಫಾ (ಸ)ರವರೊಡನೆ ಅವರಿಗಿರುವ ಸ್ನೇಹಾತಿರೇಕ. ಸಂದರ್ಭ ಬಂದರೆ, ಲಾಹೋರ್, ಮುಲ್ತಾನ್, ಕರಾಚಿ, ಪೇಶಾವರ್, ಇಸ್ಲಾಮಾಬಾದ್ ಬೀದಿಗಳಲ್ಲಿ ಸಾವಿರ ಸಂಖ್ಯೆಯಲ್ಲಿ ಬಲಿಯಾಗಲು ಅವರು ಸಿದ್ಧರಿದ್ದಾರೆ. ಸಂದರ್ಭ ಬಂದರೆ, ಅತುಲ್ಯವಾದ ತ್ಯಾಗದ ಅತಿ ಮಹತ್ವದ ಒಂದು ಅಧ್ಯಾಯವನ್ನು ಲೋಕಚರಿತ್ರೆಗೆ ಹೊಲಿದು ಸೇರಿಸಲು ಅವರು ತಯಾರಾಗಿ ನಿಂತಿದ್ದಾರೆ. ಆದ್ದರಿಂದ ಜಿಯಾಉಲ್‌ಹಕ್ಕರ ಕಾರ್ಯಾಚಾರಣೆಗೆ ಅವರು ಯಾವ ಬೆಲೆಯನ್ನೂ ಕೊಡುವುದಿಲ್ಲ. ಪ್ರವಾದಿಗಳು ಲೋಕದಲ್ಲಿ ಪ್ರತ್ಯಕ್ಷರಾದಾಗಲೆಲ್ಲಾ ಈ ಹೋರಾಟ ನಡೆದಿರುತ್ತದೆ. ಜಿಯಾ ಒಬ್ಬ ಸೇನಾಧಿಕಾರಿ; ಸೇನಾಧಿಕಾರಿಯ ಪಾತ್ರವನ್ನು ಅವರು ಅಭಿನಯಿಸಿಕೊಳ್ಳಲಿ! ಈಚೆ ಕಡೆಯಲ್ಲಿರುವುದು ಒಬ್ಬ ಪ್ರವಾದಿಯ ಅನುಯಾಯಿಗಳ ದಂಡು! ಜಿಯಾ ಚರಿತ್ರೆಯನ್ನು ಓದಿರುವರೇ? ಪ್ರವಾದಿಗಳ ಸಂಘಟನೆಯನ್ನು ವಿರೋಧಿಸಿದಾಗಲೆಲ್ಲಾ ಮಹಾ ಸಾಮ್ರಾಜ್ಯಗಳು ಕುಸಿದು ನೆಲಸಮವಾದ ಇತಿಹಾಸವನ್ನು ಅವರು ಕಂಡಿಲ್ಲವೇ? ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ (ಅ) ಅಲ್ಲಾಹನ ಒಬ್ಬ ಪ್ರವಾದಿ ಎಂಬ ವಾಕ್ಯದಿಂದ ಜಿಯಾ ಉಲ್‌ಹಕ್ಕರಿಗೆ ಎಚ್ಚರಿಗೆ ನೀಡಲು ಅಹ್ಮದೀಯರು ಇಚ್ಛಿಸುತ್ತಾರೆ!

★


ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್‌ರವರ

# ಮೈತ್ರಿ ಸಂದೇಶ

"......ಹಿಂದೂ ಮುಸ್ಲಿಂ ಮೈತ್ರಿಗಾಗಿ ನೀಡಿದ ಈ ಸಂದೇಶ ತುಂಬಾ ಮಹತ್ವದ್ದು, ಹಿಂದೂಗಳೂ ಮುಸ್ಲಿಮರೂ ಸಮಾನವಾಗಿ ಪರಿಶೀಲಿಸಬೇಕಾದ ಗ್ರಂಥವಿದು......" —ಉದಯವಾಣಿ

"...... ಭಿನ್ನ ಧರ್ಮೀಯರಲ್ಲಿ ಮೈತ್ರಿ ಬೆಸೆಯಬಲ್ಲ ಲೇಖನ......" —ನವಭಾರತ

ಪುಟಗಳು: **48** ಬೆಲೆ: ಒಂದು ರೂಪಾಯಿ ಅಂಚೆ ವೆಚ್ಚ: ಉಚಿತ

ಬರೆಯಿರಿ: Book Secretary, Ahmadiyya Muslim Mission,
10-23-1008, Ansari Road, Bunder, Mangalore-575 001.

# ಪಾಕ್ ಪೌರ ಹಕ್ಕು-ಜಿನ್ನಾ ಭಾಷಣ

1947 ಆಗಸ್ಟ್ 11ರಂದು ಪಾಕಿಸ್ತಾನದ ರಾಜ್ಯ ವ್ಯವಸ್ಥಾ ಸಭೆ (Constituent Assembly) ಯಲ್ಲಿ ಪಾಕಿಸ್ತಾನದ ರಾಷ್ಟ್ರಪಿತ 'ಖಾಯಿದೆ ಆಝಂ' ಮುಹಮ್ಮದಲಿ ಜಿನ್ನ ಮಾಡಿದ ಇತಿಹಾಸ ಪ್ರಸಿದ್ಧ ಭಾಷಣ ದಲ್ಲಿ ಈ ರೀತಿ ಹೇಳಿಡರು:

"ಅದೇ ಪ್ರಕಾರ ಈ ವಿಭಜನೆಯಲ್ಲಿ ಯಾವುದಾದರೊಂದು ಡೊಮಿನಿಯನಿನ ಅಲ್ಪಸಂಖ್ಯಾತ ಪ್ರಶ್ನೆ ಯನ್ನೂ ತಳ್ಳಿ ಹಾಕಲು ಸಾಧ್ಯವಿರಲಿಲ್ಲ. ಅದು ಅನಿವಾರ್ಯವಾಗಿತ್ತು. ಬೇರೆ ಯಾವ ಪರಿಹಾರವೂ ಇಲ್ಲ. ಈಗ ನಾವು ಏನು ಮಾಡಬೇಕು? ಈ ಮಹತ್ವದ ಪಾಕಿಸ್ತಾನ್ ರಾಷ್ಟ್ರವನ್ನು ಆನಂದಪ್ರದವೂ ಕ್ಷೇಮದಾಯಕವೂ ಆಗಿ ಮಾರ್ಪಡಿಸಲಿಕ್ಕೆ ನಾವು ಇಚ್ಛಿಸುವುದಾದರೆ, ನಾವು ಸಂಪೂರ್ಣ ಏಕಾಗ್ರತೆಯಿಂದಲೂ ಜನತೆಯ, ವಿಶೇಷವಾಗಿ ಸಾಮಾನ್ಯ ಜನರ ಮತ್ತು ಬಡವರ್ಗದವರ ಕ್ಷೇಮಾಭಿವೃದ್ಧಿಗಾಗಿ ಶ್ರದ್ಧೆವಹಿಸಬೇಕಾಗಿದೆ. ಕಳೆದುದೆಲ್ಲಾ ಮರೆತು ಸಹಕಾರದಿಂದ ವರ್ತಿಸುವುದಾದರೆ ನೀವು ಜಯಿಸದಿರಲಿಕ್ಕಿಲ್ಲ. ನೀವು ಭೂತಕಾಲ ಸ್ಥಿತಿಯನ್ನು ಬಿಟ್ಟು ಪ್ರತಿ ಯೊಬ್ಬರು ಯಾವ ಸಮುದಾಯಕ್ಕೆ ಸೇರಿದವರಾದರೂ, ನಿಮ್ಮೊಡನೆ ಮುಂಚೆ ಹೇಗೆ ವರ್ತಿಸಿದವರಾಗಿದ್ದರೂ, ಜಾತಿ ಮತ ವಿಶ್ವಾಸಗಳು ಏನೇ ಆಗಿದ್ದರೂ, ಪ್ರಥಮವಾಗಿಯೂ ದ್ವಿತೀಯವಾಗಿಯೂ ತೃತೀಯವಾಗಿಯೂ ಪಾಕಿಸ್ತಾನದ ಪೌರರೆಂದೂ ಸಮಾನ ಹಕ್ಕುವಿಶೇಷ ಸ್ಥಾನಗಳೂ ಬಾಧ್ಯತೆಗಳೂ ಹೊಂದಿದವರೆಂಬ ಪ್ರಜ್ಞೆಯಿಂದಲೂ ಪ್ರವರ್ತಿಸುವ ಪಕ್ಷದಲ್ಲಿ ನಿಮ್ಮ ಪ್ರಗತಿಗೆ ಕೊನೆಯುಂಟಾಗಲಾರದು.

"ನನಗೆ ಇದಕ್ಕಿಂತ ಹೆಚ್ಚಾಗಿ ಈ ವಿಚಾರದಲ್ಲಿ ಒತ್ತಿ ಹೇಳಲು ಸಾಧ್ಯವಿಲ್ಲ. ಈ ಚೈತನ್ಯದಿಂದ ನಾವು ಪ್ರವರ್ತಿಸಲು ಆರಂಭಿಸಬೇಕು. ಬಹುಸಂಖ್ಯಾತ ಅಲ್ಪಸಂಖ್ಯಾತ ಸಮುದಾಯ (ಹಿಂದೂ ಸಮುದಾಯ ಮತ್ತು ಮುಸ್ಲಿಂ ಸಮುದಾಯ)ಗಳಿಗೆ ಸಂಬಂಧಿಸಿದ ವಿಷಮ ಪ್ರಶ್ನೆಗಳು—ಮುಸ್ಲಿಮರ ಬಗ್ಗೆ ಹೇಳುವುದಾದರೆ ಪಠಾಣರು, ಪಂಜಾಬಿಗಳು, ಶಿಯಾಗಳು, ಸುನ್ನಿಗಳು ಎಂಬಿತ್ಯಾದಿಯಾಗಿಯೂ ಹಿಂದೂಗಳ ಕುರಿತು ಹೇಳುವುದಾದರೆ ಬ್ರಾಹ್ಮಣರು, ವೈಷ್ಣವರು, ಕ್ಷತ್ರಿಯರು ಇತ್ಯಾದಿಯಾಗಿಯೂ ಹಾಗೆಯೇ ಬಂಗಾಳಿಗಳು, ಮದ್ರಾಸಿಗಳು ಎಂಬೀ ವ್ಯತ್ಯಾಸ ಗಳೂ ಕಾಲಕ್ರಮೇಣ ನಿವಾರಿಸಲ್ಪಡುವುವು. ಇಂಡಿಯಾದ ಸ್ವಾತಂತ್ರ್ಯಗಳಿಕೆಯ ಕಾರ್ಯದಲ್ಲಿ ಅತಿ ದೊಡ್ಡ ತಡೆ ಇದಾಗಿತ್ತು. ಈ ಭಿನ್ನತೆಗಳಿಲ್ಲದಿರುತ್ತಿದ್ದರೆ ಇಂಡಿಯಾ ಎಷ್ಟೋ ಕಾಲ ಮೊದಲೇ ಸ್ವತಂತ್ರವಾಗುತ್ತಿತ್ತು. ಒಂದು ರಾಷ್ಟ್ರ ಮತ್ತೊಂದು ರಾಷ್ಟ್ರವನ್ನು, ವಿಶೇಷ್ಯ ನಲ್ವತ್ತು ಕೋಟಿ ಮನುಷ್ಯಾತ್ಮಗಳನ್ನು ಅಧೀನಪಡಿಸಲು ಶಕ್ತವಲ್ಲ; ನಿಮ್ಮನ್ನು ಯಾರಿಗೂ ಅಧೀನಪಡಿಸಲು ಸಾಧ್ಯವಿರಲಿಲ್ಲ. ಅದು ಸಂಭವಿಸಿದ್ದರೆ ಸಹ ಅಧಿಕ ಕಾಲ ನಿಮ್ಮನ್ನು ಅಧೀನಪಡಿಸಿ ಆಳಲು ಸಾಧ್ಯವಾಗುತ್ತಿರಲಿಲ್ಲ. ಒಟ್ಟಾರೆ ನಾವು ಇದರಿಂದ ಒಂದು ಪಾಠವನ್ನು ಕಲಿಯಬೇಕು. ನೀವಿಂದು ಸ್ವತಂತ್ರರು. ನೀವು ನಿಮ್ಮ ದೈವ ಮಂದಿರಗಳಿಗೆ ಯಾವುದೇ ಅಡ್ಡಿ ಆತಂಕವಿಲ್ಲದೆ ಸ್ವತಂತ್ರ ರಾಗಿ ಹೋಗಬಹುದು. ಮಸೀದಿಗಳಿಗೂ ಇತರ ಪ್ರಾರ್ಥನಾಲಯಗಳಿಗೂ ನೀವು ಸ್ವತಂತ್ರರಾಗಿ ಹೋಗಬಹುದು. ಈ ಪಾಕಿಸ್ತಾನ ರಾಷ್ಟ್ರದಲ್ಲಿ ನಿಮಗೆ ಅದಕ್ಕೆ ಅತ್ಯಂತ ಸ್ವಾತಂತ್ರ್ಯವಿದೆ. ನಿಮ್ಮ ಮತ, ನಿಮ್ಮ ಜಾತಿ, ನಿಮ್ಮ ನಂಬಿಕೆ ಯಾವುದೇ ಆಗಿದ್ದರೂ ಸರಕಾರದ ವ್ಯವಹಾರಕ್ಕೆ ಅದರೊಂದಿಗೆ ಯಾವುದೇ ಸಂಬಂಧವಿಲ್ಲ.

"ಕೆಲವು ಕಾಲ ಮೊದಲು ಇಂಗ್ಲೆಂಡಿನ ಸ್ಥಿತಿ ಇಂಡಿಯಾದಲ್ಲಿ ಈಗ ಇರುವುದಕ್ಕಿಂತ ಎಷ್ಟೋ ಕೆಟ್ಟಿತ್ತು ಎಂಬ ಐತಿಹಾಸಿಕ ಸತ್ಯವನ್ನು ನೀವು ತಿಳಿದಿರುವಿರಿ. ರೋಮನ್ ಕೆಥೋಲಿಕರು ಮತ್ತು ಪ್ರಾಟೆಸ್ಟಂಟರು ಅನ್ಯೋನ್ಯ ಹಿಂಸಿಸುತ್ತಿದ್ದರು. ನಿರ್ದಿಷ್ಟ ಸಮಾಜದೊಡನೆ ಪಕ್ಷಪಾತವನ್ನು ತೋರಿಸುವ ಹಾಗೂ ಅದರ ಅಭಿವೃದ್ಧಿಗೆ ತಡೆಯನ್ನುಂಟು ಮಾಡುವಂಥ ರಾಜ್ಯಗಳು ಇಂದು ಸಹ ಇವೆ. ನಾವಿಲ್ಲಿ ಇದು ಆರಂಭಿಸುವುದು ಅಂತಹ ಒಂದು ಅವಸ್ಥೆಯಲ್ಲಿ ಅಲ್ಲವೆಂಬುದು ಆಶ್ವಾಸಕರವಾಗಿದೆ. ವಿವಿಧ ಜಾತಿಗಳೂ ವಿವಿಧ ಮತಗಳೂ ಪರಸ್ಪರ ಯಾವ ಭೇದ ಭಾವವನ್ನೂ ವ್ಯತ್ಯಾಸವನ್ನೂ ತೋರಿಸದ ಒಂದು ಸ್ಥಿತಿಯಲ್ಲಿ ನಾವಿಂದು ಪ್ರಾರಂಭಿಸುತ್ತಿದ್ದೇವೆ. **ನಾವೆಲ್ಲರೂ ಒಂದೇ ರಾಷ್ಟ್ರದ ಪೌರರೂ ಸಮಾನ ಹಕ್ಕುಳ್ಳವರೂ ಆಗಿದ್ದೇವೆ.**

"ಇಂಗ್ಲೆಂಡಿನ ಜನರಿಗೆ ಕಾಲಕ್ರಮೇಣ ಯಾಥಾರ್ಥ್ಯಗಳನ್ನು ಎದುರಿಸಬೇಕಾಗಿ ಬಂತು. ತಮ್ಮ ರಾಜ್ಯದ ಸರಕಾರ ತಮಗೆ ಅರ್ಪಿಸಿದ ಜವಾಬ್ದಾರಿಕೆಗಳನ್ನೂ ಹೊಣೆಗಳನ್ನೂ ಅವರು ನಿರ್ವಹಿಸಲು ಸಿದ್ಧರಾದರು. ಅವರು ಹಾಗೆ ಹಂತ ಹಂತವಾಗಿ ಆ ಅಗ್ನಿ ಪರೀಕ್ಷೆಗಳನ್ನು ಜಯಿಸಿದರು. ಅಲ್ಲಿ ಈಗ ರೋಮನ್ ಕೆಥೋಲಿಕರಾಗಲಿ ಪ್ರಾಟೆಸ್ಟಂಟರಾಗಲಿ ಇಲ್ಲವೆಂದು ನಿಮಗೆ ಇಂದು ಹೇಳಲು ಸಾಧ್ಯವಿದೆ! ಅಲ್ಲಿ ಎಲ್ಲರೂ ಪೌರರು; ಗ್ರೇಟ್ ಬ್ರಿಟನಿನ ಸಮಾನ ಪೌರರು. ಅವರೆಲ್ಲರೂ ಒಂದು ರಾಷ್ಟ್ರದ ಅಂಗಗಳು. ಇಂದು ಅಲ್ಲಿನ ಸ್ಥಿತಿ ಅದಾಗಿದೆ.

"ಹಾಗಿರುವಾಗ, ಅದನ್ನು ನಾವು ನಮ್ಮ ಆದರ್ಶವನ್ನಾಗಿ ಇಟ್ಟುಕೊಳ್ಳಬೇಕೆಂದಾಗಿದೆ ನಾನು ಇಚ್ಛಿಸುವುದು. ಹಾಗೆ ಕಾಲಕ್ರಮೇಣ ಇಲ್ಲಿ ಹಿಂದೂಗಳು ಹಿಂದೂಗಳಲ್ಲದಾಗುತ್ತಾರೆ; ಮುಸ್ಲಿಮರು ಮುಸ್ಲಿಮರಲ್ಲದಾಗುತ್ತಾರೆ; ಮತ ಪರವಾದ ಅರ್ಥದಲ್ಲಲ್ಲ—ಅದಾದರೋ ಪ್ರತಿಯೊಬ್ಬ ವ್ಯಕ್ತಿಯ ಸ್ವಂತ ವಿಶ್ವಾಸ ಕಾರ್ಯವಾಗಿದೆ; ಬದಲು, ರಾಷ್ಟ್ರದ ಪೌರರೆಂಬ ಸ್ಥಿತಿಯಲ್ಲಿ, ರಾಜಕೀಯ ಅರ್ಥದಲ್ಲಿ!" (ಮುನೀರ್ ರಿಪೋರ್ಟ್, ಪುಟ 201). ★

ಪಾಕಿಸ್ತಾನದ ರಾಷ್ಟ್ರಪಿತ ಮುಹಮ್ಮದಲಿ ಜಿನ್ನಾರ ಭಾವನೆಯ ಪಾಕಿಸ್ತಾನಕ್ಕೂ ಮಾನವ ಮೂಲಭೂತ ಹಕ್ಕುಗಳನ್ನು ಕಸಿಯುತ್ತಿರುವ ಇಂದಿನ ಪಾಕಿಸ್ತಾನಕ್ಕೂ ಎಷ್ಟೊಂದು ಅಂತರ ! ?

—ಸಂ.


# ಅಹ್ಮದಿಯಾ ಸಂದೇಶ

ಮುಸ್ಲಿಮರನ್ನು ಸಂಬೋಧಿಸಿ ಬರೆದ ಒಂದು ಉಪನ್ಯಾಸ

ಗ್ರಂಥಕರ್ತ : ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹಮೂದ್ ಅಹ್ಮದ್

ಪುಟ : 60 ಬೆಲೆ : ಒಂದು ರೂಪಾಯಿ ಅಂಚೆ ವೆಚ್ಚ : ಉಚಿತ

ಬರೆಯಿರಿ : Book Secretary, Ahmadiyya Muslim Mission,
10-23/1008, Ansari Road, Bunder, Mangalore-575 001.

### ಅಹ್ಮದಿಯಾ ವಿರುದ್ಧ ಜಿಯಾ ವಿಶೇಷಾಜ್ಞೆಗೆ

# ಪಾಕ್ ಧುರೀಣರ ಪ್ರತಿಭಟನೆ

ಪಾಕಿಸ್ತಾನದ ರಾಷ್ಟ್ರಪಿತ ಖಾಯಿದೆ ಆಝಮ್ ಮುಹಮ್ಮದ್ ಅಲಿ ಜಿನ್ನಾರವರು ಪಾಕಿಸ್ತಾನದ ಸಂವಿಧಾನ ನಿರ್ಮಾಣ ಸಭೆಯಲ್ಲಿ 11-8-47ರಂದು ಪಾಕಿಸ್ತಾನದ ಸರ್ವ ಪ್ರಜೆಗಳಿಗೂ ಜಾತಿ, ಮತ ವ್ಯತ್ಯಾಸವಿಲ್ಲದೆ ಸಮಾನ ಹಕ್ಕುಗಳ ಘೋಷಣೆ ಮಾಡಿದ್ದರೂ ಪಾಕಿಸ್ತಾನದ ಈಗಿನ ಲಷ್ಕರಿ ಆಡಳಿತೆಗಾರ ಜನರಲ್ ಜಿಯಾ ಉಲ್‌ಹಕ್ ಇದೇ ಕಳೆದ ಎಪ್ರಿಲ್ 26ರಂದು ಒಂದು ಆರ್ಡಿನೆನ್ಸ್ ಹೊರಡಿಸಿ ಅಹ್ಮದೀ ಮುಸ್ಲಿಮರ ಧಾರ್ಮಿಕ ಚಟುವಟಿಕೆಗಳಿಗೆ ಕೆಲವು ಕ್ರೂರ ನಿರ್ಬಂಧಗಳನ್ನು ಹೇರಿರುವುದನ್ನು ಪ್ರತಿಭಟಿಸಿ ಪಾಕಿಸ್ತಾನದ ಬಹುಸಂಖ್ಯಾತರನ್ನು ಪ್ರತಿನಿಧಿಸುವ ಗಣ್ಯ ವ್ಯಕ್ತಿಗಳು ಹೇಳಿಕೆ ನೀಡಿರುವರು. ಅವರ ಹೇಳಿಕೆಗಳ ಸಂಕ್ಷಿಪ್ತ ವರದಿಯನ್ನು ಈ ಕೆಳಗೆ ಕೊಡಲಾಗಿದೆ :

**ಮುಹಮ್ಮದ್ ಖಸ್ವರ್ ಗರ್ದೇಝಿ**
(ಪಾಕಿಸ್ತಾನದ ನೇಶನಲ್ ಪಾರ್ಟಿ ಜನರಲ್ ಸೆಕ್ರೆಟರಿ)

"ನಮ್ಮ ಪಾರ್ಟಿ ಖಾಯಿದೆ ಆಝಮರ 11-8-47ರ ಪ್ರಕಟಣೆಗೆ ಬದ್ಧವಾಗಿದೆ. ಮತವೆಂಬುದು ದೇವರ ಮತ್ತು ಮಾನುಷ್ಯರ ಮಧ್ಯೆ ಮನುಷ್ಯರ ವ್ಯಕ್ತಿಗತ ವ್ಯವಹಾರವಾಗಿದೆ. ಸರಕಾರದ ವ್ಯವಹಾರಕ್ಕೂ ಇದಕ್ಕೂ ಯಾವುದೇ ಸಂಬಂಧ ವಿಲ್ಲ. ಎಲ್ಲಾ ಪಾಕಿಸ್ತಾನಿ ಪ್ರಜೆಗಳು ಪಾಕಿಸ್ತಾನ್ ರಾಷ್ಟ್ರದ ಪ್ರಜೆಗಳಾಗಿದ್ದಾರೆ. ಖಾದಿಯಾನಿಗಳ ಮೇಲೆ ಜಾರಿಗೊಳಿಸಲಾದ ಈ ಆರ್ಡಿನನ್ಸನ್ನು ರಾಷ್ಟ್ರದ ಹಿತಕ್ಕಾಗಿ ರದ್ದುಗೊಳಿಸಬೇಕು."

("ಮುಸ್ಲಿಮ್" ದೈನಿಕ, ಇಸ್ಲಾಮಾಬಾದ್ 1-5-84)

**ಇಯರ್ ಮಾರ್ಶಲ್ ಅಸ್‌ಗರ್ ಖಾನ್** — ಇಯರ್‌ತಿರ್ಷಾರ್ಷ್ ಅಹ್‌ಸನ್ ಮುಮ್ತಾಝ್

(ತಹ್‌ರೀಕ್ ಇಸ್ತಿಖ್‌ಲಾಲ್ ಪಾರ್ಟಿಯ ಪ್ರಸಿದ್ಧ ನಾಯಕ)

"ಲಷ್ಕರಿ ಆಡಳಿತೆಯು ಪ್ರಜೆಗಳ ವೈಯಕ್ತಿಕ ಜೀವನದಲ್ಲಿ ಮತ್ತು ಮತೀಯ ನಂಬಿಕೆಗಳ ವಿಷಯದಲ್ಲಿ ತನಗೆ ತೋಚಿದಂತೆ ಹಸ್ತಕ್ಷೇಪ ಮಾಡುತ್ತಿದೆಯೆಂದು ಪಾಕಿಸ್ತಾನದ ಪ್ರಜೆಗಳಲ್ಲಿ ಬಹುಪಕ್ಷೀಯರ ಅಭಿಪ್ರಾಯವಾಗಿದೆ......... ಸರಕಾರದ ಯಥಾರ್ಥ ಉದ್ದೇಶ ಜನರು ಪ್ರಜಾಪ್ರಭುತ್ವದ ಕುರಿತು ಚಿಂತಿಸದಂತೆ ಮಾಡಿ ಮತೀಯ ದ್ವೇಷದ ಬೀಜ ಬಿತ್ತುವುದಾಗಿದೆ." ("ಮುಸ್ಲಿಮ್", 4-5-84)

**ಕೌಮಿ ಮುಹಾಝ್ ಆಜಾದಿಯ ಚೇರ್‌ಮನ್ :**

"ಖಾಯಿದೆ ಆಝಮ್ ಮುಹಮ್ಮದ್ ಅಲಿ ಜಿನ್ನಾ ಸಾಹೇಬರು ಪಾಕಿಸ್ತಾನವನ್ನು ಜಾತ್ಯಾತೀತ ರಾಷ್ಟ್ರವನ್ನಾಗಿ ಮಾಡಲು ಇಚ್ಛಿಸಿದ್ದರು. ಎಲ್ಲಾ ಪಾಕಿಸ್ತಾನಿಗಳಿಗೆ ಧಾರ್ಮಿಕ ಸ್ವಾತಂತ್ರ್ಯವನ್ನು ಅವರು ನೀಡಿದ್ದರು. ಸರಕಾರದ ಈಗಿನ ತೀರ್ಮಾನದಿಂದ ಜಾತೀಯ ದ್ವೇಷ ವರ್ಧಿಸುವುದಲ್ಲದೆ ಅಲ್ಪಸಂಖ್ಯಾತರು ತಾವು ಪಾಕಿಸ್ತಾನದಲ್ಲಿ ಸುರಕ್ಷಿತರಲ್ಲವೆಂದು ಭಾವಿಸುವಂತಾಗಿದೆ."

("ಲಾಹೋರ್" ವಾರ ಪತ್ರಿಕೆ, 12-5-84)

**ಬೇಗಮ್ ನಸೀಮ್ ವಲೀಖಾನ್**
(ನ್ಯಾಷನಲ್ ಡೆಮೊಕ್ರಾಟಿಕ್ ಪಕ್ಷದ ಉಪಾಧ್ಯಕ್ಷೆ) :

"ಈಗ ಪಾಕಿಸ್ತಾನದ ಸಂರಕ್ಷಣೆಗೆ ಬಹಳ ಅಪಾಯ ಸನ್ನಿಹಿತವಾಗಿದೆ. ಬಂಗ್ಲಾದೇಶದ ಸಂಭವದ ನಂತರವೂ ನಮಗೆ ಎಚ್ಚರವಾಗುವುದಿಲ್ಲವಾದರೆ ನಮಗೆ ಜೀವಿಸುವ ಹಕ್ಕು ಸಹ ಇರುವುದಿಲ್ಲ. ನಮ್ಮನ್ನು ಹೊಸದಾಗಿ ಮುಸ್ಲಿಮರನ್ನಾಗಿ ಮಾಡಲಾಗುತ್ತಿದೆ. ಈಗಿನ ಸರಕಾರಕ್ಕೆ ಇಸ್ಲಾಮೀಕರಣದ ಕುರಿತು ನಿಷ್ಕಳಂಕವಾದ ಉದ್ದೇಶವಿರುತ್ತಿದ್ದರೆ ಈ ಅತ್ಯಂತ ಸುಲಭವಾದ ಕೆಲಸ ಎಷ್ಟೋ ಸಮಯ ಹಿಂದೆ ಪೂರ್ಣವಾಗಬೇಕಿತ್ತು. ಆದರೆ ಸರಕಾರ ಇಸ್ಲಾಮನ್ನು ಕೇವಲ ಮಾರಾಟ ಮಾಡಲು ಇಚ್ಛಿಸುತ್ತದೆ. ಇಸ್ಲಾಮಿನ ಕುರಿತು ತಿರಸ್ಕಾರ ಭಾವ ತಲೆದೋರುವಂತೆ ಮಾಡುತ್ತಿದೆ. ಇಸ್ಲಾಮಿನ ಹೆಸರಿನಲ್ಲಿ ಜಾತೀಯ ದ್ವೇಷ ಹಬ್ಬುವಂತೆ ಮಾಡುತ್ತಿದೆ. "ಹಸನ್ ಅಬ್ದಾಲ್" ಎಂಬ ಸ್ಥಳದಲ್ಲಿ ಸಿಖ್ ಗುರುದ್ವಾರವನ್ನು ಸರಕಾರಿ ಖರ್ಚಿನಲ್ಲಿ ರಿಪೇರಿ ಮಾಡುತ್ತಿರುವ ಈ ಸರಕಾರ ಖಾದಿಯಾನಿಗಳು ಅವರ ಪ್ರಾರ್ಥನಾಲಯಗಳನ್ನು "ಮಸ್‌ಜಿದ್" ಎಂದು ಕರೆಯು

ವುದನ್ನು ತಡೆಯುತ್ತಿದೆ. ಆದರೆ ಪಾಕಿಸ್ತಾನದ ಸ್ಥಾಪನೆಯ ನಂತರ ಈ ರಾಜ್ಯದಲ್ಲಿ ಯಾರೂ ಹಿಂದೂ, ಮುಸ್ಲಿಂ, ಸಿಖ್ ಅಥವಾ ಕ್ರೈಸ್ತರಾಗಿ ವಿಭಜಿತರಾಗದೆ ಪಾಕಿಸ್ತಾನಿಗಳಾಗ ಬೇಕೆಂದು ಖಾಯಿದೆ ಆಝಮ್ 11-8-47ರಲ್ಲಿ ಹೇಳಿದ್ದರು. ಎಲ್ಲಾ ಪಾಕಿಸ್ತಾನಿಗಳಿಗೆ ಸಮಾನ ಹಕ್ಕುಗಳಿವೆ."

("ಜಂಗ್" ದಿನ ಪತ್ರಿಕೆ, ಲಾಹೋರ್, 9-5-84)

**ಮಿರ್ ಶೇರ್ ಮುಹಮ್ಮದ್ ಖಾನ್ ಮರ್ರೀ**

(ಗುಡ್ಡಗಾಡು ಪಂಗಡಗಳ ನಾಯಕ) :

"ಸರಕಾರದ ಈ ತೀರ್ಮಾನ ಸರಿಯಲ್ಲ. ಒಬ್ಬನಿಗೆ ಆತ ಮುಸ್ಲಿಂ ಅಥವಾ ಕಾಫಿರ್ ಎಂದು ಸರ್ಟಿಫಿಕೇಟು ಕೊಡುವುದು ಬಹಳ ಕಷ್ಟಕರವಾದ ಕೆಲಸವಾಗಿದೆ. ಒಬ್ಬ ಮನುಷ್ಯನ ಅಂತರ್ಯದ ಕುರಿತು ಕೇವಲ ಅಲ್ಲಾಹನಿಗೆ ಮಾತ್ರ ಗೊತ್ತಿರುತ್ತದೆ."

("ಜಂಗ್", 9-5-84)

**ಝುಹೂರ್ ಬಟ್**

(ತಹರೀಕ್ ಇಸ್ತಿಖ್‌ಲಾಲ್ ಪಾರ್ಟಿಯ ಬ್ರಿಟನ್ ಶಾಖೆಯ ಚೇರ್‌ಮನ್) :

ಅವರು ಆರ್ಡಿನೆನ್ಸ್ ಕುರಿತು ಕಠಿಣವಾಗಿ ವಿಮರ್ಶಿಸುತ್ತಾ ಈ ರೀತಿ ಅಭಿಪ್ರಾಯಪಟ್ಟರು : "ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಜಿಯಾಉಲ್ ಹಕ್ ಈ ಪ್ರಶ್ನೆಯನ್ನು ಎತ್ತಿರುವುದಾಗಿ ಕಾಣುತ್ತದೆ. ಲೋಕ ಮುಸ್ಲಿಮರ ಪ್ರತಿನಿಧಿಗಳು ಖಾದಿಯಾನಿಗಳ ಪ್ರತಿನಿಧಿಗಳೊಡನೆ ಒಂದು ಸ್ಥಳದಲ್ಲಿ ಒಟ್ಟಿಗೆ ಸೇರಿ ಚರ್ಚಿಸಿ ಈ ಪ್ರಶ್ನೆಯನ್ನು ತೀರ್ಮಾನಿಸುವುದು ಉತ್ತಮವೆಂದು ನನಗೆ ತೋರುತ್ತದೆ."

("ನವಾಯೆ ವಖ್ತ್", ಲಾಹೋರ್, 10-5-84)

**ಚೌಧರಿ ರಹ್ಮತ್ ಅಲಿ ಅಲವಿ**

(ಪಾಕಿಸ್ತಾನ ಮುಸ್ಲಿಂ ಲೀಗ್-ಪಗಾರೋ ಗುಂಪು-ಅಧ್ಯಕ್ಷ):

"ಈ ಆರ್ಡಿನೆನ್ಸ್ ಪಾಕಿಸ್ತಾನದ ರಾಷ್ಟ್ರಪಿತರ 11-8-47ರ ಹೇಳಿಕೆಗೆ ವಿರುದ್ಧವಾಗಿದೆ. ಎಲ್ಲಾ ಪಾಕಿಸ್ತಾನಿಯರು ತಮ್ಮ ನಂಬಿಕೆಗಳ ಪ್ರಕಾರ ಪ್ರಾರ್ಥಿಸಲು ಸ್ವತಂತ್ರರಾಗಿದ್ದಾರೆ. ಪಾಕಿಸ್ತಾನದ ಬೇಡಿಕೆಯ ಠರಾವು ಮತ್ತು ಖಾಯಿದೆ ಆಝಮರ ಹೇಳಿಕೆಯ ಪ್ರಕಾರ ಸರಕಾರ ಎಲ್ಲಾ ಪ್ರಜೆಗಳಿಗೆ ಜೀವಿತ, ಆಸ್ತಿ, ಉದ್ಯೋಗ ಮತ್ತು ಮಾನವೀಯ ಹಕ್ಕುಗಳ ಸಂರಕ್ಷಣೆ ನೀಡಬೇಕಾಗಿದೆ."

("ಜಂಗ್", 6-5-84)

**ದಾದಾ ಅಮೀರ್ ಹೈದರ್**

(ಪ್ರಸಿದ್ಧ ಸೋಷಿಯಲಿಸ್ಟ್ ನಾಯಕ) ಮತ್ತು

**ಎಡ್ವಕೇಟ್ ಅಬ್ದುಲ್ ಅಝೀಝ್ :**

ಅವರು ಆರ್ಡಿನನ್ಸಿನ ಕುರಿತು ಅತೃಪ್ತಿ ವ್ಯಕ್ತಗೊಳಿಸುತ್ತಾ ಈ ರೀತಿ ಜಂಟಿ ಹೇಳಿಕೆ ನೀಡಿದರು :

"ಪಾಕಿಸ್ತಾನದಲ್ಲಿ ಸೆಕ್ಯೂಲರಿಸಂ ಮತ್ತು ಮತ ಸೌಹಾರ್ದಕ್ಕೆ ಹೆಚ್ಚು ಮಹತ್ವ ನೀಡಲಾಗುತ್ತಿತ್ತು. ಆದರೆ ಇದಕ್ಕೆ ವಿರುದ್ಧವಾಗಿ ಈ ರಾಷ್ಟ್ರವನ್ನು ಕ್ರಮೇಣ ಜಾತೀಯ ದ್ವೇಷದ ಕಡೆಗೂ ಸಂಕುಚಿತ ದೃಷ್ಟಿಯತ್ತವೂ ದೂಡಲಾಗುತ್ತಿದೆ."

("ಜಂಗ್", 8-5-84)

---

* **ಲಾಹೋರ್ ಹೈಕೋರ್ಟ್ ಬಾರ್ ಎಸೋಸಿಯೇಶನ್ :**

"ಪಾಕಿಸ್ತಾನದ ಲಷ್ಕರಿ ಆಡಳಿತಾಧಿಕಾರಿ, ಅಹ್ಮದೀಯರ ವಿರುದ್ಧ ಹೊರಡಿಸಿದ ಆರ್ಡಿನನ್ಸಿನ ಕುರಿತು ಚರ್ಚಿಸಿ ಆ ಬಗ್ಗೆ ಮತದಾನ ನಡೆಸಿದಾಗ 125 ನ್ಯಾಯವಾದಿಗಳು ಆರ್ಡಿನನ್ಸಿಗೆ ವಿರುದ್ಧವಾಗಿಯೂ 12 ಜನ ನ್ಯಾಯವಾದಿಗಳು ಆರ್ಡಿನನ್ಸಿಗೆ ಪರವಾಗಿಯೂ ಮತ ನೀಡಿದರು.

("ಲಾಹೋರ್" ವಾರ ಪತ್ರಿಕೆ, 26-5-84)

* **ಡಿಸ್ಟ್ರಿಕ್ಟ್ ಬಾರ್ ಎಸೋಸಿಯೇಶನ್, ರಾವಲ್‌ಪಿಂಡಿ :**

ಬಲೂಚಿಸ್ತಾನದ ಮಾಜಿ ಗವರ್ನರ್ ಹಾಗೂ ಪಾಕಿಸ್ತಾನ್ ನೇಶನಲ್ ಪಾರ್ಟಿಯ ಅಧ್ಯಕ್ಷ ಮಿರ್ ಗೌಸ್ ಭಕ್ಷ್ ಬಿಝಂಜೋ 30-4-84ರಂದು ಬಾರ್ ಅಸೋಸಿಯೇಷನ್‌ನಲ್ಲಿ ಆರ್ಡಿನೆನ್ಸಿನ ಕುರಿತು ಭಾಷಣ ನೀಡುತ್ತಿದ್ದಾಗ ಒಳಗೆ ಪ್ರವೇಶಿಸಿ ಆರ್ಡಿನೆನ್ಸಿನ ಪರವಾಗಿ ವಾದ ಮಾಡಿ ಗುಲ್ಲೆಬ್ಬಿಸಲು ಯತ್ನಿಸಿದ ಇಬ್ಬರು ವಕೀಲರನ್ನು ಹೊರದೂಡಿ ಬಾಗಿಲು ಹಾಕಿ ಭಾಷಣವನ್ನು ಮುಂದುವರಿಸಲಾಯಿತು.

("ಜಂಗ್" ದಿನ ಪತ್ರಿಕೆ, ರಾವಲ್‌ಪಿಂಡಿ, 1-5-84)

* ತಹರೀಕ್ ಇಸ್ತಿಖ್‌ಲಾಲ್ ಪಾರ್ಟಿಯ ಗಡಿನಾಡು ಪ್ರಾಂತ್ಯದ ಅಧ್ಯಕ್ಷ ಸಯ್ಯದ್ ಮುನೀರ್ ಶಾಹ್ ಅವರು ಆರ್ಡಿನನ್ಸನ್ನು ಟೀಕಿಸಿ ಮಾತಾಡಿದರು.

("ಜಂಗ್" ಲಾಹೋರ್, 5-5-84)

* M.R.D.ಯ ಸೆಕ್ರೆಟರಿ ಜನರಲ್ ಖ್ವಾಜಾ ಖೈರುದ್ದೀನ್ ಆರ್ಡಿನೆನ್ಸ್ ವಿರುದ್ಧವಾಗಿ ಹೇಳಿಕೆ ನೀಡಿದರು. ("ಜಂಗ್", 3-5-84) ★

# ★ ಅಹ್ಮದಿಯಾ ವಾರ್ತೆಗಳು ★

## ಸಿರಾಲಿಯೋನ್‌ನಲ್ಲಿ 17ನೇ ಸೆಕಂಡರಿ ಸ್ಕೂಲ್

ಇತ್ತೀಚೆಗೆ ಸಿರಾಲಿಯೋನಿನ ರೊಟಿಫುಂಕ್ (**Roti-funk**) ಎಂಬಲ್ಲಿ ಅಹ್ಮದಿಯಾ ಸಂಘಟನೆಯ ವತಿಯಿಂದ ನಿರ್ಮಿಸಲಾದ ಸೆಕಂಡರಿ ಸ್ಕೂಲೊಂದನ್ನು ಉದ್ಘಾಟಿಸಲಾಗಿದೆಯೆಂದು ಸ್ಥಳೀಯ ಮಿಶನರಿ ಫಝ್ಲುಲ್ ಇಲಾಹಿ ಆರಿಫ್ ತಿಳಿಸಿದ್ದಾರೆ. ಇದು ಸಿರಾಲಿಯೋನ್‌ನಲ್ಲಿ ತೆರೆಯಲಾದ 17ನೇ ಅಹ್ಮದಿಯಾ ಸೆಕಂಡರಿ ಸ್ಕೂಲ್ ಆಗಿದೆ.

## ನೈಜೀರಿಯಾದಲ್ಲಿ 8ನೇ ಆಸ್ಪತ್ರೆ

ಇತ್ತೀಚೆಗೆ ನೈಜೀರಿಯಾದ ಓಜೊಕೊರೊ ಎಂಬಲ್ಲಿ ಅಹ್ಮದಿಯಾ ಸಂಘಟನೆಯ ಪತಿಯಿಂದ ಸುಮಾರು 80 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಆಸ್ಪತ್ರೆಯೊಂದನ್ನು ನಿರ್ಮಿಸಲಾಗಿದೆಯೆಂದು ತಿಳಿದುಬಂದಿದೆ. ಇದು ನೈಜೀರಿಯಾದಲ್ಲಿ ತೆರೆಯಲಾದ 8ನೇ ಅಹ್ಮದಿಯಾ ಆಸ್ಪತ್ರೆಯಾಗಿದೆ.

## ಪಶ್ಚಿಮ ಜರ್ಮನಿಯಲ್ಲಿ ಪ್ರಚಾರ ಕಾರ್ಯಕ್ರಮ

ಕಳೆದ ಜನವರಿ 28ರಂದು ಪಶ್ಚಿಮ ಜರ್ಮನಿಯ ಆದ್ಯಂತ ಅಹ್ಮದಿಯಾ ಪ್ರಚಾರ ದಿನವನ್ನು ಆಚರಿಸಲಾಯಿತು. ಹಲವು ಕಡೆಗಳಲ್ಲಿ ಬುಕ್ ಸ್ಟಾಲುಗಳನ್ನು ಸ್ಥಾಪಿಸಲಾಯಿತು. ಸಾವಿರಾರು ಪುಸ್ತಕಗಳನ್ನು ವಿತರಣೆ ಮಾಡಲಾಯಿತು. ಅಹ್ಮದಿಯಾ ಖಲೀಫರ ಭಾಷಣಗಳನ್ನು ಧ್ವನಿಮುದ್ರಣ ಮಾಡಿದ ಹಾಗೂ ಇನ್ನಿತರ ಸುಮಾರು ಒಂದೂವರ ಸಾವಿರ ಕ್ಯಾಸೆಟ್‌ಗಳನ್ನು ಹಂಚಲಾಯಿತು.

## ಕಲ್ಕತ್ತಾ ಪುಸ್ತಕ ಪ್ರದರ್ಶನದಲ್ಲಿ ಅಹ್ಮದಿಯಾ ಬುಕ್ ಸ್ಟಾಲ್

ಕಳೆದ ಫೆಬ್ರವರಿ 4ರಿಂದ ಮಾರ್ಚ್ 11ರ ವರೆಗೆ ಕಲ್ಕತ್ತಾದಲ್ಲಿ ನಡೆದ ಬೃಹತ್ ಪುಸ್ತಕ ಪ್ರದರ್ಶನದಲ್ಲಿ ಅಹ್ಮದಿಯಾ ಸಂಘಟನೆಯ ವತಿಯಿಂದ ಒಂದು ಬುಕ್ ಸ್ಟಾಲನ್ನು ತೆರೆಯಲಾಗಿತ್ತು. ಇಂಗ್ಲಿಷ್, ಉರ್ದು, ಹಿಂದಿ, ಬಂಗ್ಲಾ ಇತ್ಯಾದಿ ಭಾಷೆಗಳ ಅಹ್ಮದಿಯಾ ಸಾಹಿತ್ಯಗಳು ಮಾರಲ್ಪಟ್ಟವು. ಸಾವಿರಾರು ಕಿರುಹೊತ್ತಗೆಗಳನ್ನು ಉಚಿತವಾಗಿಯೂ ಹಂಚಲಾಯಿತು. ವಿಚಾರ ವಿನಿಮಯ ಮತ್ತು ಪ್ರಶ್ನೋತ್ತರಗಳ ವ್ಯವಸ್ಥೆಯನ್ನೂ ಸ್ಟಾಲಿನಲ್ಲಿ ಏರ್ಪಡಿಸಲಾಗಿತ್ತು. ಪ್ರಸ್ತುತ ಪ್ರದರ್ಶನವನ್ನು ಸುಮಾರು 15 ಲಕ್ಷ ಮಂದಿ ಸಂದರ್ಶಿಸಿರುವರೆಂದು ಅಂದಾಜು ಮಾಡಲಾಗಿದೆ.

## ಉಚಿತ ವೈದ್ಯಕೀಯ ಚಿಕಿತ್ಸಾ ಕ್ಯಾಂಪ್

ಕೇರಳ ಅಹ್ಮದಿಯಾ ಮುಸ್ಲಿಂ ಯುವಜನ ಸಂಘದ ವತಿಯಿಂದ ಜನಸೇವಾ ಕಾರ್ಯಕ್ರಮದ ಅಂಗವಾಗಿ ಹೋಮಿಯೋಪಥಿಕ್ ಮೆಡಿಕಲ್ ಅಸೋಸಿಯೇಷನ್ ಓಫ್ ಇಂಡಿಯಾದ (ಕಲ್ಲಿಕೋಟೆ ವಿಭಾಗ) ಸಹಕಾರದಿಂದ ಕಳೆದ ಮಾರ್ಚ್ 25ರಂದು ಚೇಲಕರ ಎಸ್. ಎಂ. ಟಿ. ಹೈಸ್ಕೂಲಿನಲ್ಲಿ ಏರ್ಪಡಿಸಿದ ಉಚಿತ ವೈದ್ಯಕೀಯ ಚಿಕಿತ್ಸಾ ಕ್ಯಾಂಪ್‌ನಲ್ಲಿ ಅನೇಕ ರೋಗಿಗಳಿಗೆ ಚಿಕಿತ್ಸೆ ನೀಡಲಾಯಿತು.

ಚೇಲಕರ ಮತ್ತು ಸುತ್ತುಮುತ್ತಲಿನ ಪ್ರದೇಶಗಳಿಂದ ಆಗಮಿಸಿದ ಸುಮಾರು 350 ರೋಗಿಗಳು ಚಿಕಿತ್ಸೆ ಪಡೆದ ಈ ಶಿಬಿರದಲ್ಲಿ ಅಹ್ಮದಿಯಾ ಜಮಾಅತಿನ ಸದಸ್ಯ ಹಾಗೂ ಕಲ್ಲಿಕೋಟೆ ಹೋಮಿಯೋ ಮೆಡಿಕಲ್ ಕಾಲೇಜಿನ ಅಸಿಸ್ಟಂಟ್ ಪ್ರೊಫೆಸರ್ ಡಾ। ಎಂ. ಅಬ್ದುಲ್ ಲತೀಫ್, ಮಾಶ್ರೋರ್ವ ಅಸಿಸ್ಟಂಟ್ ಪ್ರೊ। ಡಾ। ಸುಕುಮಾರನ್, ಡಾ। ಕೆ. ಜೆ. ಮತ್ತಾಯಿ (ಆರ್. ಎಂ. ಓ.), ಮೆಡಿಕಲ್ ಕಾಲೇಜ್ ವಿದ್ಯಾರ್ಥಿಗಳಾದ ನಾದಿರ್‌ಷಾ, ಸುರೇಶ್ ಕುಮಾರ್, ರೋಯ್ ಮಾಥ್ಯೂ, ಸುರೇಶ್, ಮೋಹನ್ ದಾಸ್, ಮೋಹನ್ ಕುಮಾರ್ ಹಾಗೂ ವಿದ್ಯಾರ್ಥಿನಿಯರಾದ ರ್‍ಶೀನ, ಮಾಲತಿ ಎಂಬವರು ಭಾಗವಹಿಸಿದರು.

---

# ಚುಟುಕು - ಚೂರು

* "1941ರಲ್ಲಿ ಜಮಾಅತೆ ಇಸ್ಲಾಮೀ ಸ್ಥಾಪನೆಯ ಸಮಯದಲ್ಲಿ ಧರ್ಮಸಂಸ್ಥಾಪನೆಯ ಉದ್ದೇಶಕ್ಕಾಗಿ ಪವಿತ್ರ ಕುರ್‌ಆನ್ ಮತ್ತು ಪ್ರವಾದಿ ಚರ್ಯೆಯ ಆಧಾರದಲ್ಲಿ ಕಾರ್ಯವೆಸಗುವ ಯಾವುದೇ ಇಸ್ಲಾಮೀ ಸಂಘಟನೆ ಭಾರತದಲ್ಲಿರಲಿಲ್ಲ. ಇದ್ದಿದ್ದರೆ ಜಮಾಅತೆ ಇಸ್ಲಾಮೀ ಎಂಬ ಸಂಘಟನೆಯ ಸ್ಥಾಪನೆಯ ಅಗತ್ಯವೇ ಬರುತ್ತಿರಲಿಲ್ಲ."

(ಪ್ರಶ್ನೆಯೊಂದಕ್ಕೆ ಉತ್ತರ—"ಸನ್ಮಾರ್ಗ", ಆಗೋಸ್ತು 5-11, 1984)

● ಇಸ್ಲಾಂ ಧರ್ಮದ ಪುನರುತ್ಥಾನಕ್ಕಾಗಿಯೂ ಲೋಕದಾದ್ಯಂತ ಇಸ್ಲಾಂ ಧರ್ಮವನ್ನು ಪ್ರಚಾರಗೊಳಿಸುವ ಉದ್ದೇಶದಿಂದಲೂ 1889ನೇ ಇಸವಿಯಲ್ಲಿ ಅಹ್ಮದಿಯಾ ಜಮಾಅತ್ ಭಾರತದಲ್ಲಿ ಸ್ಥಾಪಿತವಾಯಿತು. ಆದರೆ, ನೈಜ ಇಸ್ಲಾಂ ಧರ್ಮವನ್ನು ಬೋಧಿಸುವ ಅಹ್ಮದಿಯಾ ಜಮಾಅತ್ ಎಂಬ ಸಂಘಟನೆಗೂ ಅದಕ್ಕಿಂತ ಅರ್ಧ ಶತಮಾನ ಕಾಲದ ನಂತರ ಸ್ಥಾಪಿತವಾದ, ಫ್ಯಾಸಿಸಮನ್ನು ಬೋಧಿಸುವ ಜಮಾಅತೆ ಇಸ್ಲಾಮೀ ಎಂಬ ಸಂಘಟನೆಗೂ ಅಜ-ಗಜ ಅಂತರವಿದೆಯೆಂಬುದನ್ನು ಒಪ್ಪಲೇಬೇಕು.

—ಅ. ರಘು.


## AHMADIYYA URDU LITERATURE

1. AHMADIYYATH KA PAIGHAM
2. AQAIDE AHMADIYYATH
3. SADAQATHE HAZRATH MASIH MAUWOOD
4. ZUHOORE IMAM MAHDI
5. KHATHMANNUBUWWATH KI HAQEEQATH

**WILL BE SENT FREE**

Apply with 25 Paise Stamp for each book to:


BOOK SECRETARY, AHMADIYYA MUSLIM MISSION,
10-23-1008, ANSARI ROAD, MANGALORE-575 001.

# AHMADIYYA ENGLISH LITERATURE

| No. | Title | Price |
|---|---|---|
| 1. | INTRODUCTION TO THE STUDY OF THE HOLY QURAN<br>By Hazrat Mirza Bashiruddin Mahmood Ahmad | 16-00 |
| 2. | THE PHILOSOPHY OF THE TEACHINGS OF ISLAM<br>By Hazrat Mirza Ghulam Ahmad | 6-00 |
| 3. | CHARACTERISTICS OF THE QURANIC TEACHINGS<br>By Hazrat Mirza Bashiruddin Mahmood Ahmad | 2-00 |
| 4. | THE HOLY PROPHET MUHAMMAD<br>By Hazrat Mirza Bashiruddin Mahmood Ahmad | 2-00 |
| 5. | AHMADIYYA MOVEMENT<br>By Hazrat Mirza Bashiruddin Mahmood Ahmad | 2-25 |
| 6. | WHAT IS AHMADIYYAT?<br>By Hazrat Mirza Bashiruddin Mahmood Ahmad | 1.50 |
| 7. | THE ECONOMIC STRUCTURE OF ISLAMIC SOCIETY<br>By Hazrat Mirza Bashiruddin Mahmood Ahmad | 2-50 |
| 8 | THE NEW WORLD ORDER OF ISLAM<br>By Hazrat Mirza Bashiruddin Mahmood Ahmad | 2-25 |
| 9. | TRUTH ABOUT KHATME NABUWAT<br>By Hazrat Mirza Bashir Ahmad, M.A. | 2-50 |
| 10. | Islam and Slavery By Hazrat Mirza Bashir Ahmad, M.A. | 1-25 |
| 11. | Forty Gems of Beauty By Hazrat Mirza Bashir Ahmad, M A. | 2-50 |
| 12. | Our Teachings By Hazrat Mirza Gulam Ahmad | 1-00 |
| 13. | An Interpretation of Islam By Laura Viccia Vaglieri | 3-00 |
| 14. | Muhammad the Most Successful Prophet<br>By Moulana Sharif Ahmad Amini | 1.00 |
| 15. | The Goal of Man and the Way to Reach it<br>By Muhammad Karimullah Naujawan & Dr Hafiz Saleh Muhammad Allahdin, Ph.D. | 0-50 |
| 16. | Jesus in India By Hazrat Mirza Gulam Ahmad | 2-25 |
| 17. | A Review of Christianity By Hazrat Mirza Gulam Ahmad | 1-00 |
| 18. | Four Questions by a Christian and their Answers<br>By Hazrat Mirza Gulam Ahmad | 1-25 |
| 19. | How to get rid of the Bondage of Sin<br>By Hazrat Mirza Gulam Ahmad | 1-25 |
| 20. | Where did Jesus Die? By J. D. Shams | 5-00 |
| 21. | Did Jesus Redeem Mankind? | 2 50 |
| 22. | The Tomb of Jesus By Sufi Mutiur Rahman Bengalee, M. A | 1-00 |
| 23. | The Christian Doctrine of Atonement<br>By Dr. M. M. Sadiq, D D., LL.D., S.S.P., (London) | 1.00 |
| 24. | Why did early Christians accept Islam? By J. D. Shams | 1.00 |
| 25. | Latest Findings about Jesus Christ | 0.50 |

Write to : **Secretary for Mission Works,**
Sadr Anjuman Ahmadiyya, Qadian- 143 516 (Punjab)

Regd. with the Registrar of Newspapers for India. Regd No. R. N. 27354/75
**YUGARASHMI Kannada Quarterly, October 1984 / Ikha 1363**




**English Translation of the**
**HOLY QURAN**
**with Arabic Text & Extensive Index**

Price : Rs. 20-00
Postage Extra

Write to :

**NAZIR DAWAT-O-TABLIGH**
Sadr Anjuman Ahmadiyya
Qadian-143 516 [Punjab]

ಎಲ್ಲಾ ಬಗೆ ಹಂಚುಗಳಿಗೆ ವಿಚಾರಿಸಿರಿ :

# STANDARD TILERY
## KADUR
CHICKMAGALUR DISTRICT

★

RAJA MARK Roofing Tiles, Ridges, Wall Tiles,
Span Tiles, Floorings, Decorative Tiles, Ceilings, Etc., Etc.

All Clay Products Available.

Edited and Published by Muhammad Yusuf on behalf of Jamath Ahmadiyya
at 10-23-1008, Ansari Road, Bunder, Mangalore-575 001.
Printed at Karavali Printers, Azizuddin Road, Bunder, Mangalore-575 001.